ಹಂಗಾಮಿ ಅಧ್ಯಕ್ಷರು : ನೂತನ ಸಭಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಹೃತ್ಪೂರ್ವಕವಾಗಿ ನಾನು ಅಭಿನಂದಿಸುತ್ತೇನೆ. ಈಗ ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಈ ಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ಸೂಚಿಸುತ್ತೇನೆ.

(ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಅಧ್ಯಕ್ಷರ ಪೀಠವನ್ನಲಂಕರಿಸಲು ಕರೆದುಕೊಂಡು ಬಂದರು)

(ಈ ಹಂತದಲ್ಲಿ ಹಂಗಾಮಿ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು ಹಂಗಾಮಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದರು)

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ. ಸದನದ ಗೌರವಾನ್ವಿತ ಸದಸ್ಯರೆ. ಕರ್ನಾಟಕದ 13ನೇ ವಿಧಾನಸಭೆಯ ನೂತನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಮನತುಂಬಿ ನಾನು ಅಭಿನಂದಿಸುತ್ತೇನೆ. ಪ್ರಾರಂಭದಲ್ಲಿಯೇ ಸರ್ವಾನುಮತದಿಂದ ಆಯ್ಕೆಯಾಗಿರುವುದಕ್ಕೆ ಸಹಕಾರ ಕೊಟ್ಟ ಪ್ರತಿಪಕ್ಷದ ಎಲ್ಲಾ ನಾಯಕರನ್ನು ಮತ್ತು ಎಲ್ಲಾ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ಸಮಚಿತ್ತದ. ಸಂಯಮಶೀಲ ಶ್ರೀ ಜಗದೀಶ್ ಶೆಟ್ಟರ್‌ರವರು ಅಪಾರ ಅನುಭವವುಳ್ಳವಂಥವರು. ಶಾಸಕರಾಗಿ. ವಿರೋಧಪಕ್ಷದ ನಾಯಕರಾಗಿ. ಸಚಿವರಾಗಿ. ನಮ್ಮ ಭಾರತೀಯ ಜನತಾಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಅವರಿಗಿದೆ. ಸಭಾಧ್ಯಕ್ಷ ಸ್ಥಾನ ಈ ಸದನದ ಪರಮೋಚ್ಛ ಸ್ಥಾನ. ನನ್ನ ದೃಷ್ಟಿಯಿಂದ ಮುಖ್ಯಮಂತ್ರಿಗಿಂತಲೂ ಹಿರಿದಾದ ಸ್ಥಾನ. ಅಂಥ ಸ್ಥಾನಕ್ಕೆ ಜಗದೀಶ್ ಶೆಟ್ಟರ್‌ರವರು ಅವಿರೋಧವಾಗಿ ಆಯ್ಕೆಯಾಗಿರುವುದ ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಈ ಕುಟುಂಬದ ಹಿನ್ನೆಲೆಯೆಂದರೆ ಸಭಾಧ್ಯಕ್ಷರಾದಂಥ ಶ್ರೀ ಜಗದೀಶ್ ಶೆಟ್ಟರ್‌ರವರ ಚಿಕ್ಕಪ್ಪನವರಾದ ದಿವಂಗತ ಸದಾಶಿವ ಶೆಟ್ಟರ್‌ರವರು 1976ರಲ್ಲಿ ಹುಬ್ಬಳ್ಳಿನಗರ ಕ್ಷೇತ್ರದಿಂದ ಜನಸಂಘದಿಂದ ವಿಧಾನಸಭೆಗೆ ಆಯ್ಕೆಯಾದಂಥ ಮೊದಲನೇ ವ್ಯಕ್ತಿ. ದಕ್ಷಿಣ ಭಾರತದಲ್ಲಿ ಜನಸಂಘದಿಂದ ಮೊದಲು ಶಾಸಕರಾದಂಥವರು. ಕರ್ನಾಟಕ ವಿಧಾನಸಭೆಯ ಅಧ್ಯಕ್ಷ ಪರಂಪರೆ ವಿಶಿಷ್ಟವಾದಂಥದ್ದು. ವೈಕುಂಠಬಾಳಿಗರಂಥ ಅನೇಕ ಹಿರಿಯರು. ಅತ್ಯಂತ ಸಮರ್ಥರು ಇಲ್ಲಿಯವರೆಗೆ ಈ ಸ್ಥಾನವನ್ನಲಂಕರಿಸಿ

ಸದನಕ್ಕೆ ಒಂದು ರೀತಿಯ ಗಾಂಭೀರ್ಯವನ್ನು ತಂದುಕೊಟ್ಟಿದ್ದಾರೆ. ಶ್ರೀ ಜಗದೀಶ್ ಶೆಟ್ಟರ್‌ರವರ ಸಮಚಿತ್ತ. ಜ್ಞಾನ ಮತ್ತು ಸಂಯಮಶೀಲ ನಡೆಯ ಜೊತೆಗೆ ಅವರು ಕಾನೂನು ಹಿನ್ನೆಲೆ ಸಭಾಧ್ಯಕ್ಷ ಸ್ಥಾನದ ಸಮರ್ಥ ನಿರ್ವಹಣೆಗೆ ಸಹಕಾರಿಯಾಗುತ್ತದೆಂದು ನಾನು ಭಾವಿಸಿದ್ದೇನೆ. ಸಭಾಧ್ಯಕ್ಷರಾದವರು ಪಕ್ಷ. ಪ್ರದೇಶ. ಸಮುದಾಯ ಮತ್ತು ವ್ಯಕ್ತಿಗತ ದೋರಣೆಗಳಿಂದ ಮುಕ್ತವಾಗಿರಬೇಕೆನ್ನುವಂಥದ್ದು ಈ ನಾಡಿನ ಐದೂವರೆ ಕೋಟಿ ಜನರ ಅಪೇಕ್ಷೆ. ರಾಗ. ದ್ವೇಷದಿಂದ ದೂರವಿರಬೇಕು. ಸರ್ಕಾರ ಮತ್ತು ವಿರೋಧ ಪಕ್ಷದ ನಡುವೆ ಸಮನ್ವಯ ಸಾಧಿಸಬಲ್ಲ ಜಾಣ್ಮೆ ಮತ್ತು ಕೌಶಲ್ಯ ಅವರಿಗೆ ಸಿದ್ದಿಸಿರಬೇಕು. ಆಗ ಮಾತ್ರ ಸದನದ ಕಾರ್ಯಕಲಾಪಗಳನ್ನು ಅರ್ಥಪೂರ್ಣವಾಗಿ. ನ್ಯಾಯನಿಷ್ಟವಾಗಿ ಮತ್ತು ಗಂಭೀರವಾಗಿ ನಡೆಸುವುದಕ್ಕೆ ಸಾಧ್ಯವೆಂದು ನಾನು ಭಾವಿಸಿದ್ದೇನೆ. ಶ್ರೀ ಜಗದೀಶ್ ಶೆಟ್ಟರ್‌ರವರಲ್ಲಿ ಈ ಕೌಶಲ್ಯ ಮತ್ತು ಈ ಸಾಮರ್ಥ್ಯ ಇದೆ. ಆದ್ದರಿಂದಲೇ ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಮತ್ತು ನಾವೆಲ್ಲ ಸೇರಿ ಅವರನ್ನು ಸಭಾಧ್ಯಕ್ಷ ಸ್ಥಾನದ ಅಭ್ಯರ್ಥಿಯನ್ನಾಗಿ ಆರಿಸಿದ್ದೇವೆ. ಸದನದ ಎಲ್ಲಾ ಸದಸ್ಯರ ಮತ್ತು ಗೌರವಾನ್ವಿತ ವಿರೋಧ ಪಕ್ಷಗಳ ನಾಯಕರ ಸಹಕಾರದಿಂದಾಗಿ ಶ್ರೀ ಜಗದೀಶ್ ಶೆಟ್ಟರ್‌ರವರು ಅವಿರೋಧವಾಗಿ ಸಭಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ತಮಗೆಲ್ಲ ಗೊತ್ತಿರುವ ಹಾಗೆ. ಅವರೊಬ್ಬ ಅಜಾತ ಶತ್ರು ಮತ್ತು ಸರ್ವಮಾನ್ಯ ವ್ಯಕ್ತಿ ಎಂಬುದು ಇದರಿಂದ ಸಾಬೀತಾಗಿದೆ. ಸನ್ನಡತೆಯ ಹಾದಿಯಲ್ಲಿ ಮಾತ್ಸರ್ಯಕ್ಕೆ ಎಡೆಯಿಲ್ಲ. ಗುಣಗ್ರಾಹಿ ನಡವಳಿಕೆ ಅನುಕರಣೀಯವಾದಂಥದ್ದು. ಕರ್ನಾಟಕದ 13ನೇ ವಿಧಾನಸಭೆ ಶ್ರೀ ಜಗದೀಶ್ ಶೆಟ್ಟರ್‌ರವರ ಗುಣವಿಶೇಷವನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡಿದೆ. ಸಂಸದೀಯ ವ್ಯವಸ್ಥೆಯಲ್ಲಿ ವಿಧಾನಮಂಡಲ ಮತ್ತು ಸಂಸತ್ತಿನ ಪಾತ್ರ ಅತ್ಯಂತ ಮಹತ್ತರವಾದದ್ದು. ಜನತೆ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದುಕೊಳ್ಳುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಜನರ ವಿಶ್ವಾಸವನ್ನು ಮರಳಿ ಗಳಿಸಿಕೊಳ್ಳುವಂತೆ ಪರಿಣಾಮಕಾರಿಯಾಗಿ ಕೆಲಸ ಮಾಡಿ ಜನಮನವನ್ನು ಗೆಲ್ಲಬೇಕಾಗಿದೆ. ಸದನದ ಕಲಾಪಗಳು ಗಾಂಭೀರ್ಯ ಮತ್ತು ಗುಣಮಟ್ಟ ಎರಡನ್ನೂ ಕಳದುಕೊಳ್ಳುತ್ತಿವೆ ಎನ್ನುವಂಥದ್ದು ಆತಂಕದ ವಿಷಯ. ಆ ಬಗ್ಗೆ ನಾವೆಲ್ಲಾ ಒಟ್ಟಾಗಿ ಚಿಂತನೆಯನ್ನು ಮಾಡಬೇಕೆಂದು ವಿನಯಪೂರ್ವಕವಾಗಿ ವಿನಂತಿಯನ್ನು ಮಾಡುತ್ತೇನೆ. ಸದನದ ಕಲಾಪಗಳ ಗುಣಮಟ್ಟ ಮತ್ತು ಪರಿಣಾಮವನ್ನು ಹೆಚ್ಚಿಸುವ ಹೊಣೆಗಾರಿಕೆ ಸಭಾಧ್ಯಕ್ಷರಿಂದ ಹಿಡಿದು ಎಲ್ಲಾ ಸದಸ್ಯರಾದ ನಮ್ಮ ಮೇಲಿದೆ. ಸರ್ಕಾರ ಮತ್ತು ವಿರೋಧ ಪಕ್ಷಗಳು ಪರಸ್ಪರ ಸಹಕಾರ ಮತ್ತು ಸಮನ್ವಯದೊಂದಿಗೆ ಸಭಾಧ್ಯಕ್ಷರೊಟ್ಟಿಗೆ ಕೆಲಸ ಮಾಡಿದಾಗ ಇದು ಸಾಧ್ಯ. ನಾನು ನಂಬಿ ಬಂದಿರುವುದೇನೆಂದರೆ. ಪ್ರಜಾಪ್ರಭುತ್ವ

ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅದಕ್ಕಿಂತಲೂ ಹೆಚ್ಚಿನ ಜವಾಬ್ದಾರಿ ವಿರೋಧ ಪಕ್ಷದ ಮೇಲಿದೆ ಎಂದು ತಿಳಿದಿದ್ದೇನೆ. ಇಷ್ಟು ವರ್ಷಗಳ ಕಾಲ ಅಲ್ಲಿ ಕುಳಿತು ಕೆಲಸ ಮಾಡಿದಂಥವರು ನಾವು. ಈ ನಾಡು ಬಹುದೊಡ್ಡ ಪರಂಪರೆ ಮತ್ತು ಇತಿಹಾಸ ಇರುವಂಥ ನಾಡು. ಕರ್ನಾಟಕ ವಿಧಾನಸಭೆಯ ನೂತನ ಅಧ್ಯಕ್ಷರಾಗಿ ಶ್ರೀ ಜಗದೀಶ್ ಶೆಟ್ಟರ್ ರವರು ಸರ್ವಸಮ್ಮತವಾಗಿ ಆಯ್ಕೆಯಾಗಲು ಸಹಕಾರ ನೀಡುವ ಮೂಲಕ ವಿರೋಧ ಪಕ್ಷಗಳು ಒಂದು ಸಕಾರಾತ್ಮಕವಾದ ಸಂದೇಶವನ್ನು ಈ ನಾಡಿಗೆ ನೀಡಿವೆ. ಅವರಿಗೆ ಅಭಿನಂದನೆಗಳು. ಸಭಾಧ್ಯಕ್ಷರು ಕಳಾಸ ಭಂಡೂರಿ ನಾಲಾ ಅಭಿವೃದ್ದಿಯ ಬಗ್ಗೆ ಬಹಳ ಕಳಕಳಿಯನ್ನು ಹೊಂದಿದಂಥವರು. ಜವಾಬ್ದಾರಿ ಇದ್ದಂಥ ಕಾಲದಲ್ಲಿ ಆ ಭಾಗದಲ್ಲಿ ಏನೇನು ಅಭಿವೃದ್ಧಿಯಾಗಬೇಕೆಂದು ಚಿಂತನೆಯನ್ನು ನಡೆಸಿದ್ದೀರೋ ಅದಕ್ಕೆ ಕೊರತೆಯಾಗದ ರೀತಿಯಲ್ಲಿ ನಡೆದುಕೊಳ್ಳುತ್ತೇವೆ ಎನ್ನುವಂಥ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಾ ನೂತನ ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್ ರವರು ಸದನವನ್ನು ಸಮರ್ಥವಾಗಿ ಮತ್ತು ಅರ್ಥಪೂರ್ಣವಾಗಿ ನಡೆಸುವ ಮೂಲಕ ಕಲಾಪಗಳಿಗೆ ವಿಶೇಷ ಮೆರುಗು ತರಲಿ. ಹಾಗೂ ನಾಡಿನ ಮೆಚ್ಚುಗೆಗೆ ಪಾತ್ರರಾಗಲಿ ಎಂದು ಹಾರೈಸಿ ಅವರಿಗೆ ಮತ್ತೊಮ್ಮೆ ನಾನು ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ. ಹದಿಮೂರನೇ ವಿಧಾನ ಸಭೆಯ ನೂತನ ಸ್ಪೀಕರ್ ಆಗಿ ತಾವು ಸರ್ವಾನುಮತದಿಂದ ಆಯ್ಕೆಯಾಗಿದ್ದೀರಿ. ಇದಕ್ಕಾಗಿ ನಾನು ಸದನದ ಹಾಗೂ ನನ್ನ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸ್ಪೀಕರ್ ಪೋಸ್ಟ್ ನಿಜವಾಗಲೂ ಉನ್ನತವಾದಂಥ ಹುದ್ದೆ ಮತ್ತು ಐದು ಕೋಟಿ ಐವತ್ತು ಲಕ್ಷ ಜನರ ಪ್ರತಿನಿಧಿಗಳು ಇಲ್ಲೇನು ಈ ವಿಧಾನ ಸಭೆಯಲ್ಲಿ ಅಸೀನರಾಗಿರುತ್ತಾರೋ ಚರ್ಚೆಗೆ ಆಸ್ಪದ ಮಾಡುವುದಾಗಲಿ. ಒಳ್ಳೆಯ ಕಾನೂನುಗಳನ್ನು ತಂದು ಅದನ್ನು ಸಾರ್ವಜನಿಕರಿಗೆ ಉಪಯೋಗವಾಗುವುದಕ್ಕೆ ಅನುಕೂಲ ಮಾಡಿಕೊಡತಕ್ಕಂಥ ಮಹತ್ತರ ಜವಾಬ್ದಾರಿ ತಮ್ಮ ಮೇಲಿದೆ. ಇವತ್ತು ನ್ಯಾಯವಾಗಿ ನಾವು ಹೇಳಬೇಕಾದರೆ. ಯಾವುದೇ ಒಂದು ಪಕ್ಷಕ್ಕೆ ಬಹುಮತ ಇಲ್ಲ. ಟೆಕ್ನಿಕಲ್ ಆಗಿ ಇಂಡಿಪೆಂಡೆಂಟ್ ಆಗಿ ಆರಿಸಿ ಬಂದಿರತಕ್ಕಂಥ ಸದಸ್ಯರ ಸಹಾಯದಿಂದ ಸರ್ಕಾರ ರಚನೆಯಾಗಿರಬಹುದು. ಆದರೆ. ಇವತ್ತು ಸಮಬಲ ಇರುವ ವಿರೋಧ ಪಕ್ಷ ಮತ್ತು ಅಷ್ಟೇ ಸಂಖ್ಯೆಯಲ್ಲಿ ಇರುವ ಸರ್ಕಾರ. ಈ ಮಧ್ಯೆ ತಾವು ಬಹಳ ನಿಷ್ಪಕ್ಷಪಾತವಾದಂಥ ಪಾತ್ರವನ್ನು ವಹಿಸತಕ್ಕಂಥ

ಒಂದು ದೊಡ್ಡ ಜವಾಬ್ದಾರಿ ನಿಮ್ಮ ಮೇಲಿದೆ. ಅದನ್ನು ನೀವು ಸಮರ್ಥವಾಗಿ ನಿರ್ವಹಿಸುತ್ತೀರಿ ಎನ್ನುವ ನಂಬಿಕೆ ನನಗಿದೆ. ಕಾರಣ ಜನಪರ ಸಮಸ್ಯೆಗಳನ್ನು ಮತ್ತು ಜನರ ಸಮಸ್ಯೆಗೆ ಸರ್ಕಾರ ಸ್ಪಂದಿಸಬೇಕೆಂದು ಅನೇಕ ಸದಸ್ಯರು ಆ ವಿಚಾರಗಳನ್ನು ಈ ಸದನದಲ್ಲಿ ಎತ್ತುವಾಗ ಅಥವಾ ಅದಕ್ಕೆ ಪರಿಹಾರ ಕೇಳುವಾಗ ಹೆಚ್ಚಿನ ಆದ್ಯತೆ. ಗಮನ. ಸಹಕಾರ. ವಿರೋಧ ಪಕ್ಷಕ್ಕೆ ನೋಡುತ್ತೀರೆಂದು ನಾನು ನಂಬಿದ್ದೇನೆ. ಕೇವಲ ಸರ್ಕಾರ ಏನು ಮಾಡುತ್ತದೆ ಅಥವಾ ಯಾವ ರೀತಿಯಾಗಿ ಅದರ ರಕ್ಷಣೆ ಮಾಡುವುದು. ಬಹುಶಃ ತಾವು ಮಾಡಲಾರಿರಿ. ಇಬ್ಬರಿಗೂ ಕೂಡ ಸಮನಾಗಿ ಯಾವ ರೀತಿಯಾಗಿ ಎಂದರೆ. ತಮ್ಮ ಮೇಲುಗಡೆ ಇರುವ ನ್ಯಾಯದ ತಕ್ಕಡಿಯ ತರಹ. ಸಿಂಬಾಲಿಕ್ ಆಗಿ ಅದೇ ರೀತಿಯಾಗಿ ತಾವು ನಡೆದುಕೊಳ್ಳುತ್ತೀರಿ ಎನ್ನುವ ವಿಶ್ವಾಸ ನನಗಿದೆ. ಏಕೆಂದರೆ. ಈ ಸದನಕ್ಕೆ ತಾವು ನಾಲ್ಕನೇ ಬಾರಿ ಆರಿಸಿ ಬಂದಿದ್ದೀರಿ. ಸಚಿವರಾಗಿ ಕೆಲಸ ಮಾಡಿದ್ದೀರಿ. ಯಾವುದೇ ಹುದ್ದೆಯನ್ನು ತಾವು ಅಲಂಕರಿಸಿದಾಗ ಅದನ್ನು ತಾವು ನಿಷ್ಪಕ್ಷಪಾತವಾಗಿ ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ಮಾಡಿದ್ದೀರಿ. ನಾವು ಇವತ್ತು ಅದನ್ನೇ ಅಪೇಕ್ಷೆ ಪಡುತ್ತಿದ್ದೇವೆ. ಆದರೆ. ನಾನು ಟಿವಿಯಲ್ಲಿ ಮತ್ತು ಪತ್ರಿಕೆಯಲ್ಲಿ ಗಮನಿಸಿದ ಹಾಗೆ. ತಾವು ಸರ್ಕಾರದಲ್ಲಿ ಇರಬೇಕೆನ್ನುವ ಇಚ್ಛೆಯನ್ನು ವ್ಯಕ್ತಪಡಿಸಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು. ಈ ಸದನದಲ್ಲಿ ಸ್ಪೀಕರ್ ಪೋಸ್ಟ್ ಅತ್ಯಂತ ಉನ್ನತ ಮತ್ತು ಮುಖ್ಯಮಂತ್ರಿ ಪದವಿಗಿಂತ ದೊಡ್ಡದು ಎನ್ನುವ ಒಂದು ಮಾತನ್ನು ಹೇಳಿದರು. ಅದು ಸಾಂಕೇತಿಕವಾಗಿ ಅಥವಾ ಗೌರವದ ದೃಷ್ಟಿಯಿಂದ ಈ ಒಂದು ಸಭೆಯಲ್ಲಿ ಉನ್ನತವಾದಂಥ ಹುದ್ದೆ ಎನ್ನುವುದರಲ್ಲಿ ಎರಡೂ ಮಾತಿಲ್ಲ ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ತಮ್ಮ ಆದೇಶಕ್ಕೆ ಮತ್ತು ತಮ್ಮ ಮಾತಿಗೆ ನಾವೆಲ್ಲರೂ ಕೂಡ ತಲೆಬಾಗಬೇಕಾಗುತ್ತದೆ. ತಾವು ಕೊಟ್ಟಂಥ ನಿರ್ಣಯದಂತೆ ಎಲ್ಲರು ಕೂಡ ನಡೆದುಕೊಳ್ಳಬೇಕಾಗುತ್ತದೆ. ಅದು ಮುಖ್ಯಮಂತ್ರಿಗಳಿರಬಹುದು. ವಿರೋಧ ಪಕ್ಷದ ನಾಯಕರಿರಬಹುದು. ಮಂತ್ರಿಗಳಿರಬಹುದು. ಶಾಸಕರಿರಬಹುದು. ಆದರೆ. ಸರ್ಕಾರದಲ್ಲಿ. ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದರೆ. ವಿಶೇಷವಾಗೊ ಯಾವ ಭಾಗ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ ಆ ಭಾಗದಿಂದ ಸರಿಯಾದ ಪ್ರಾತಿನಿಧ್ಯ ಸಿಗಬೇಕಾಗಿತ್ತೇನೋ ಎನ್ನುವ ಕೊರಗು ನಮಗಿದೆ. ಬಹುಶಃ ನಿಮ್ಮ ಪಕ್ಷದಲ್ಲಿ ತೆಗೆದುಕೊಂಡಂಥ ನಿರ್ಣಯ ಎಂದು ಹೇಳಬಹುದು. ಅಥವಾ ನಿಮ್ಮ ವರಿಷ್ಠರು ಕೊಟ್ಟಂಥ ಆದೇಶ ಇರಬಹುದು. ಅದು ನಿಮಗೆ ಸಂಬಂಧವಿಲ್ಲ. ನಾವು ಎಲ್ಲರೂ ಸೇರಿ ತಮ್ಮನ್ನು ಸರ್ವಾನುಮತದಿಂದ ಆರಿಸಿದ್ದೇವೆ. ಇಲ್ಲಿ ವರಷ್ಠರು ಆರಿಸತಕ್ಕಂಥದ್ದು ಹೇಳತಕ್ಕಂಥದ್ದು ಏನು ಪ್ರಶ್ನೆ

ಉದ್ಭವಿಸುವುದಿಲ್ಲ. ಈ ಸದನದ ದೃಷ್ಟಿಯಿಂದ ತಾವೇನು ಹೇಳಿಕೆಗಳನ್ನು ಕೊಟ್ಟಿದ್ದೀರಿ. ಅದು ನಿಜವಾಗಲೂ ಕಾರ್ಯರೂಪಕ್ಕೆ ಬಂದಿದ್ದರೆ ಒಳ್ಳೆಯದಾಗುತ್ತಿತ್ತೇನೊ ಎನ್ನುವುದು ನನ್ನ ಅಭಿಪ್ರಾಯ. ನಿಮ್ಮಿಬ್ಬರ ನಡುವೆ ಜಗಳ ಹಚ್ಚಬೇಕೆಂದು ಅಲ್ಲ. ಕಾರ್ಯರೂಪಕ್ಕೆ ಬಂದರೆ ಒಳ್ಳೆಯದಾಗುತ್ತಿತ್ತೇನೋ ಎನ್ನುವ ಅಭಿಪ್ರಾಯ ನಮ್ಮದು ಇದೆ. ಏಕೆಂದರೆ. ಯಾವಾಗಲೂ ಕೂಡ ಅಭಿವೃದ್ಧಿ ಕೆಲಸಗಳು ಆಗಬೇಕಾಗಿದ್ದರೆ ಸರ್ಕಾರದ ಒತ್ತು. ಚಾಲನೆ ಇಲ್ಲದೇ ಅಗತಕ್ಕಂಥದ್ದು ಕಷ್ಟ. ಈ ಸ್ಪೀಕರ್ ಪೋಸ್ಟ್ ಹೌಸ್‌ನ್ನು ಕಂಟ್ರೋಲ್ ಮಾಡುವುದಕ್ಕೆ ಇಕ್ಕಟ್ಟಿನಲ್ಲಿ ಸಿಕ್ಕಿಸದ ರೀತಿಯಲ್ಲಿ ರಕ್ಷಣೆಗೆ ಹೋಗತಕ್ಕಂಥದ್ದು ಇವೆಲ್ಲಾ ಬೇರೆ ವಿಚಾರಗಳು. ಆದರೆ. ಅಭಿವೃದ್ಧಿಯ ದೃಷ್ಟಿಯಿಂದ ನಾವು ಮಾತನಾಡುವುದಾದರೆ. ಎಲ್ಲೋ ಸ್ವಲ್ಪ ಎಡವಟ್ಟಾಗಿದೆಯೇನೋ ಎಂದು ನನಗೆ ಅನ್ನಿಸುತ್ತಿದೆ. ಅದು ಏನೇ ಇರಲಿ. ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಸಣ್ಣ ವಿಷಯಗಳನ್ನು ದೊಡ್ಡದು ಮಾಡತಕ್ಕಂಥದ್ದು ಇಲ್ಲ. ಆದರೆ. ನಾವು ರೂಲ್ಸ್ ಬಿಟ್ಟು ಕಾನೂನುಗಳನ್ನು ಬಿಟ್ಟು. ರೂಲ್ಸ್ ಆಫ್ ಪ್ರೋಸೀಜೆರ್ ಬಿಟ್ಟು ಹೋಗತಕ್ಕಂಥದ್ದು ಸರಿಯಿಲ್ಲ. ಅದಕ್ಕೆ ತಾವು ಕಡಿವಾಣ ಹಾಕಬೇಕು. ಯಾರೇ ಇರಲಿ ಅವರು ಎಷ್ಟು ದೊಡ್ಡವರೇ ಇರಲಿ. ನಾವು ಏನೊಂದು Business Transaction Rules Adopt ಮಾಡಿಕೊಂಡಿದ್ದೇವೆ ಅಥವಾ ನಾವೇನು ಪ್ರೋಸಿಜೆರ್ ಅನ್ನು ಒಪ್ಪಿಕೊಂಡಿದ್ದೇವೆ. ಆ ಪ್ರೋಸಿಜೆರ್ ಪ್ರಕಾರವೇ ಈ ಸದನ ನಡೆಯತಕ್ಕಂಥದ್ದು ಆಗಬೇಕು.

ಈಗಾಗಲೇ ಅನೇಕ ಸಾರಿ ನಾವು ನೋಡಿದ್ದೇವೆ ಮತ್ತೆ ನಾನೂ ಕೂಡ ಪ್ರಸ್ತಾಪ ಮಾಡಿದ್ದೇನೆ. ನಮ್ಮಲ್ಲಿರುವ ಫಾರ್ಮೆಟ್ ಮತ್ತು ಸಂವಿಧಾನದಲ್ಲಿ ಒಂದು ರೀತಿ ಇದ್ದರೆ. ನಾವು ಹೇಳತಕ್ಕಂಥದ್ದೇ ಒಂದು ರೀತಿ ಇರುತ್ತದೆ. ಈ ರೀತಿಯಾಗಿ ಇಲ್ಲೆಲ್ಲೇ ನಡೆದಿದೆ. ಈ ರೀತಿಯಾಗಿ ನಡೆದಿರತಕ್ಕಂಥದನ್ನು ನಾವು ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇವೆ. ಆದರೂ ಕೂಡ ಈ ರೀತಿ ನಡೆಯುತ್ತದೆ. ನಡೆಯಲಿ ಬಿಡಿ ಎಂದರೆ ಸರಿಯಾಗುವುದಿಲ್ಲ. ಸಂವಿಧಾನದಲ್ಲಿ ಅಥವಾ ನಮ್ಮ ರೂಲ್ಸ್‌ನಲ್ಲಿ ಅಥವಾ ನಮ್ಮ Business Transaction Rulesನಲ್ಲಿ ಇಲ್ಲದೇ ಇರತಕ್ಕಂಥದನ್ನು ನಾವು ಮಾಡುತ್ತಾ ಹೋದರೆ. ನಾವು ಬೇರೆಯವರಿಗೆ ಆದರ್ಶವಾಗಿ ನಡೆದುಕೊಳ್ಳುವುದಕ್ಕೆ ಹೇಗೆ ಸಾಧ್ಯ? ಅಥವಾ ಇಲ್ಲದೇ ಇರತಕ್ಕಂಥದ್ದನ್ನು ನಾವು ಹೇಳುತ್ತಾ ಹೋದರೆ ಅದನ್ನು ಎಷ್ಟರಮಟ್ಟಿಗೆ ಜನರು ಮೆಚ್ಚುತ್ತಾರೆ? ಆದ್ದರಿಂದ. ನಾವು Cheap Popularity ಗೋಸ್ಕರ ರೂಲ್ಸ್, ರೆಗ್ಯುಲೇಷನನ್ನು ಬದಿಗಿಟ್ಟು ನಡೆದುಕೊಳ್ಳತಕ್ಕಂಥದು ಸರಿಯಿಲ್ಲ. ತಾವು ಬಂದ

ಮೇಲೆ ಅದಕ್ಕೆ ಕಡಿವಾಣ ಹಾಕಬೇಕು. ಅಂಥವು ನಡೆಯಬಾರದು. ಏನೇ ನಡೆದರೂ ಕೂಡ ಕಾನೂನಿನ ಚೌಕಟ್ಟಿನೊಳಗೆ ಮತ್ತೆ ರೂಲ್ಸ್ ಒಳಗಡೆ ನಾವು ಮಾಡತಕ್ಕಂಥದ್ದು ಆಗಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮತ್ತೆ ತಮ್ಮ ಮುಂದೆ ಅನೇಕ ವಿಚಾರಗಳು ತಕ್ಷಣ ಬರುತ್ತವೆ. ಅಂದರೆ. ಕೆಲವು ಗಮನ ಸೆಳೆಯುವ ಸೂಚನೆ ಮೂಲಕ ಅಥವಾ ಶೂನ್ಯವೇಳೆಯಲ್ಲಿ ವಿಚಾರಗಳು ಬರಬಹುದು. ವಿಷಯಗಳ ಮಹತ್ವವನ್ನು ತಿಳಿದುಕೊಂಡು ಈ ಕಡೆ ಅಥವಾ ಆ ಕಡೆಯಿಂದ ಅನೇಕ ಸದಸ್ಯರು ಪ್ರಸ್ತಾಪ ಮಾಡುತ್ತಾರೆ. ಆ ಸಂದರ್ಭದಲ್ಲಿ ಅದರ ಮಹತ್ವವನ್ನು ಅರಿತುಕೊಂಡು ತಾವು ಬೆಂಬಲಕ್ಕೆ ನಿಲ್ಲುತ್ತೀರಿ. ಏಕೆಂದರೆ ಎಲ್ಲರೂ ಕೂಡ ಸಾರ್ವಜನಿಕರ ಹಿತದೃಷ್ಟಿಯಿಂದ ವಿಷಯವನ್ನು ಪ್ರಸ್ತಾಪ ಮಾಡಿರುತ್ತಾರೆ. ಆದ್ದರಿಂದ. ಅಂಥವುಗಳಿಗೆ ತಾವು ಗಮನಕೊಟ್ಟು ಬೆಂಬಲವನ್ನು ಸೂಚಿಸುತ್ತೀರಿ ಎನ್ನತಕ್ಕಂಥ ಮಾತನ್ನು ನಾನು ಇವತ್ತು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಹಿಂದೆ ಒಂದು ಮಾತನ್ನು ಹೇಳಿದ್ದೀರಿ. ನೀವು ಹೇಳಿರತಕ್ಕಂಥದ್ದನ್ನು ನಾನು ತೆಗೆದು ನೋಡಿದ್ದೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಮಾನ್ಯ ಎಂ.ವಿ. ವೆಂಕಟಪ್ಪನವರು ಸಭಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ತಾವು ಒಂದು ಮಾತನ್ನು ಹೇಳಿದ್ದೀರಿ. ಆ ಮಾತುಗಳನ್ನೇ ನಾನು ಕೂಡ ಇವತ್ತು ನಿಮ್ಮಿಂದ ಬಯಸುತ್ತಿದ್ದೇವೆ. ತಾವು ಈ ಸಂದರ್ಭದಲ್ಲಿ ಏನು ಹೇಳಿದ್ದೀರೆಂದರೆ. ಶ್ರೀ ಎಂ.ವಿ. ವೆಂಕಟಪ್ಪನವರು ಸಭಾಧ್ಯಕ್ಷರಾಗಿ ಆಯ್ಕೆಯಾದಂಥ ಸಂದರ್ಭದಲ್ಲಿ ತಾವು ವಿರೋಧಪಕ್ಷ ನಾಯಕರಾಗಿ ಈ ರೀತಿಯಾಗಿ ಹೇಳಿದ್ದೀರಿ. ಅದನ್ನು ನಾನು ಇಲ್ಲಿ ಕೋಟ್ ಮಾಡುವುದಕ್ಕೆ ಬಯಸುತ್ತೇನೆ.

"ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ. ತಮ್ಮನ್ನು ಈ ಸದನದ ಮಾನ್ಯ ಸದಸ್ಯರುಗಳೆಲ್ಲಾ ಸರ್ವಾನುಮತದಿಂದ ಈ ಒಂದು ಮಹತ್ವಪೂರ್ಣವಾದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಪ್ರತಿಪಕ್ಷದ ಪರವಾಗಿ ಹಾರ್ದಿಕವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಒಂದು ಸದನ ಅತ್ಯಂತ ಮಹತ್ವಪೂರ್ಣವಾದಂಥ ಸದನವಾಗಿದ್ದು. ಪ್ರಜಾಪ್ರಭುತ್ವದಲ್ಲಿ ಈ ಸದನಕ್ಕೆ ಒಂದು ಪ್ರಾಮುಖ್ಯತೆ ಇದೆ. ನಮ್ಮ ನಾಡಿನ 5 ಕೋಟಿ ಜನರನ್ನು ಪ್ರತಿನಿಧಿಸತಕ್ಕಂಥ ಈ ಜನಪ್ರತಿನಿಧಿಗಳು ಇಲ್ಲಿದ್ದಾರೆ. ಬಹಳ ಮಹತ್ವಪೂರ್ಣವಾದ ವಿಚಾರಗಳು ಇಲ್ಲಿ ಪ್ರಸ್ತಾಪವಾಗುತ್ತದೆ. ಇದನ್ನು ಒಂದು ಮಾದರಿ ಶಾಸನ ಸಭೆಯನ್ನಾಗಿ ನಡೆಸಿಕೊಂಡು ಹೋಗುವಂಥ ಅತ್ಯಂತ ಗುರುತರವಾದಂಥ ಜವಾಬ್ದಾರಿ ತಮ್ಮ ಮೇಲೆ ಇದೆ. ಆ

ಜವಾಬ್ದಾರಿಯನ್ನು ನಿರ್ವಹಿಸುವ ಕಾರ್ಯವೈಖರಿ ಮತ್ತು ಮುತ್ಸದ್ದಿತನ ತಮ್ಮಲ್ಲಿದೆ. ತಮ್ಮ ರಾಜಕೀಯ ಹಿನ್ನೆಲೆ ಕೌಟಂಬಿಕ ಹಿನ್ನೆಲೆ. ಸಮಾಜ ಸೇವೆಯ ಅನುಭವದ ಹಿನ್ನೆಲೆಯಲ್ಲಿ ತಾವು ಈ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತೀರೆಂಬ ಭರವಸೆ ನನ್ನಲ್ಲಿದೆ ಎಂದು ಶ್ರೀ ವೆಂಕಟಪ್ಪ ನವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ತಾವು ಈ ಮಾತುಗಳನ್ನು ಹೇಳಿದ್ದೀರಿ. ನಾವೆಲ್ಲರೂ ನಿಮ್ಮಿಂದ ಬಯಸತಕ್ಕಂಥದ್ದೂ ಕೂಡ ಇದೇ ಮಾತುಗಳನ್ನೇ ಬೇರೆ ಏನೂ ಕೂಡ ಬಯಸುವುದಿಲ್ಲ. ಆದ್ದರಿಂದ. ತಾವು ಈ ಮಾತಿಗೆ stick on ಆಗಿ ತಾವು ಈಗಾಗಲೇ ಹೇಳಿದಂಥ ಮಾತು ಮತ್ತು ಭರವಸೆಯನ್ನು ನಡೆಸಿಕೊಟ್ಟರೆ ಖಂಡಿತವಾಗಿ ಈ ಸದನ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ. ಮತ್ತೆ ವಿಶೇಷವಾಗಿ ಈ ಸದನದಲ್ಲಿ ಎಲ್ಲಾ ಸದಸ್ಯರು ಹಾಜರಾಗಿರುವಂತೆ ಮಾಡತಕ್ಕಂಥದ್ದು ಬಹಳ ಮುಖ್ಯ. ಏಕೆಂದರೆ. ಇಲ್ಲಿ ಬಹಳ ಕಟಕಟಿಯಲ್ಲಿ ಸದಸ್ಯರಿದ್ದಾರೆ. 108 ಜನ ಸದಸ್ಯರು ವಿರೋಧಪಕ್ಷದಲ್ಲಿದ್ದಾರೆ ಮತ್ತೆ 110 ಜನ ಸದಸ್ಯರು ಆಡಳಿತ ಪಕ್ಷದ ಕಡೆ ಇದ್ದಾರೆ. ಈ ರೀತಿಯಾಗಿರುವಾಗ ಬಹಳ ತಾಳ್ಮೆಯಿಂದ ಮತ್ತು ಜಾಣ್ಮೆಯಿಂದ ತಾವು ನಿಭಾಯಿಸುತ್ತೀರೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಾ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಒಂದು ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಅವರು ಈ ಸದನದ ನಾಯಕರು. ಮತ್ತೆ ಅವರು ನಮಗೆಲ್ಲರಿಗೂ ಕೂಡ ಈ ಸಭೆಯ ಕ್ಯಾಪ್ಟನ್ ಆಗಿದ್ದಾರೆ. ಆದ್ದರಿಂದ. ಕ್ಯಾಪ್ಟನ್ ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋದರೆ. ಖಂಡಿತವಾಗಿ ಸ್ಪೀಕರ್ ಕೂಡ ಅದಕ್ಕೆ ಬೆಂಬಲ ಕೊಡುವುದಕ್ಕೆ ಆಗುತ್ತದೆ. ಅವರಿಗೆ ಈಗ ಕೋಪ-ತಾಪ ಕಡಿಮೆಯಾಗಿದೆ. ಆದರೂ ಕೂಡ ಮಾನ್ಯ ಜೆ.ಹೆಚ್.ಪಟೇಲ್‌ರವರು ಹೇಳಿದಂಥ ಮಾತನ್ನು ತಮ್ಮ ಮುಖಾಂತರ ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತೇನೆ. ಮತ್ತೆ ಅವರ ಮುಖಾಂತರ ಸದನದ ಗಮನಕ್ಕೆ ತರುತ್ತೇನೆ. ಅದೇನೆಂದರೆ. ಈ ಹಿಂದೆ ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದರು. ಮಾನ್ಯ ಜೆ.ಹೆಚ್.ಪಟೇಲ್‌ರವರು ಮಾನ್ಯ ಯಡಿಯೂರಪ್ಪನವರಿಗೆ ಒಮ್ಮೆ ಈ ಮಾತನ್ನು ಹೇಳಿದರು. ಅದೇನೆಂದರೆ. ಮಾನ್ಯ ವಿರೋಧ ಪಕ್ಷದ ನಾಯಕರೆ. ನೀವು ನಿಮ್ಮ ಹೃದಯವನ್ನು ಬಿಸಿಯಾಗಿಟ್ಟುಕೊಳ್ಳಿ. ತಲೆಯನ್ನು ತಂಪಾಗಿಟ್ಟುಕೊಳ್ಳಿ. ಅಂದರೆ. ನಾವುಗಳು ಉದ್ವೇಗ ಆವೇಶಗಳಿಗೆ ಒಳಗಾಗದೆ ಹೃದಯವನ್ನು ಬಿಸಿಯಾಗಿಟ್ಟುಕೊಂಡು ಪ್ರೀತಿಯ ಪರಸ್ಪರ ಗೌರವದ ವರ್ತನೆಯಿಂದ ನಡೆದರೆ ಎಷ್ಟೋ ವಿವಾದಗಳು ಬಗೆಹರಿಯುತ್ತವೆಂದು" ಮಾನ್ಯ ಜೆ.ಹೆಚ್. ಪಟೇಲ್‌ರವರು ಅಂದಿನ ವಿರೋಧಪಕ್ಷದ ನಾಯಕರಿಗೆ ಮತ್ತು ಇಂದಿನ

ಮುಖ್ಯಮಂತ್ರಿಗಳಿಗೆ ಈ ಮಾತನ್ನು ಹೇಳಿದ್ದರು. ಈ ಎರಡು ಮಾತುಗಳನ್ನು ಅಂದರೆ. ತಾವು ಹೇಳಿರುವಂಥ ಮಾತು ಮತ್ತು ಅವರಿಗೆ ಹೇಳಿರುವ ಉಪದೇಶಗಳೆರೆಡೂ ಕೂಡ ಸರಿಯಾಗಿ ನಡೆದರೆ ಖಂಡಿತವಾಗಿ ಈ ಸದನ ಚೆನ್ನಾಗಿ ನಡೆಯುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ನಿಮಗೆ ನಾನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ರಾಮನಗರ) ; ಸನ್ಮಾನ್ಯ ಅಧ್ಯಕ್ಷರೆ. ಈ ದಿನ ವಿಧಾನಸಭೆಯ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರತಕ್ಕಂಥ ಸಂದರ್ಭದಲ್ಲಿ ತಮಗೆ ಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ .ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸನ್ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥ ರೀತಿಯಲ್ಲಿ ತಾವು 1994ನೇ ಇಸವಿಯಲ್ಲಿ ಈ ಒಂದು ಸದನದ ಸದಸ್ಯರಾಗಿ ಪ್ರವೇಶವನ್ನು ಮಾಡಿ ವಿರೋಧಪಕ್ಷದ ನಾಯಕರಾಗಿ ಮತ್ತು ಮಂತ್ರಿಗಳಾಗಿ ಈ ಒಂದು ಸದನದಲ್ಲಿ ಏನೊಂದು ಕೆಲಸವನ್ನು ನಿರ್ವಹಿಸಿದ್ದೀರಿ ಅದರ ಒಂದು ಅನುಭವ ಹಾಗೂ ಕಾನೂನಿನ ಪದವೀಧರರಾಗಿ ತಮಗೆ ಇರತಕ್ಕಂಥ ಒಂದು ಅನುಭವದಲ್ಲಿ ಈ ಒಂದು ಸದನವನ್ನು ಅತ್ಯಂತ ಮಹತ್ವಪೂರ್ಣವಾಗಿ ನಡೆಸಿಕೊಂಡು ಹೋಗತಕ್ಕಂಥ ಚಾಕಚಕ್ಯತೆ ತಮ್ಮಲಿದೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಒಂದು ಸದನದ ಸಭಾಧ್ಯಕ್ಷರಾಗಿ ಹಿಂದೆ ಕಾರ್ಯವನ್ನು ನಿರ್ವಹಿಸಿರತಕ್ಕಂಥ ದಿವಂಗತ ಬಾಳಿಗರವರು ಇರಬಹುದು ಮತ್ತು ಸನ್ಮಾನ್ಯ ರಮೇಶ್‌ಕುಮಾರ್‌ರವರು ಇವತ್ತು ವಿರೋಧಪಕ್ಷದಲ್ಲಿ ಕುಳಿತಿಲ್ಲ. ಅವರೂ ಕೂಡ ಇಲ್ಲಿ ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮತ್ತೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಶ್ರೀಮತಿ ನಾಗರತ್ನಮ್ಮನವರು ಈ ಸದನವನ್ನು ನಿರ್ವಹಿಸಿರತಕ್ಕಂಥ ಆ ಸಂದರ್ಭಗಳು ಏನಿವೆ ಮತ್ತೆ ಅದೇ ರೀತಿಯಾಗಿ ಮಾನ್ಯ ಡಿ.ಬಿ.ಚಂದ್ರೇಗೌಡರು ಮತ್ತು ಸನ್ಮಾನ್ಯ ಎಸ್.ಎಂ.ಕೃಷ್ಣರವರು ಇರಬಹುದು. ಇದೇ ರೀತಿಯಾಗಿ ಹಲವಾರು ಪ್ರಮುಖರು ಈ ಸ್ಥಾನವನ್ನು ಅಲಂಕರಿಸಿ ಈ ಸದನದ ಕಲಾಪಗಳ ಗೌರವವನ್ನು ಎತ್ತಿ ಹಿಡಿದಿರತಕ್ಕಂಥ ಹಲವಾರು ಸಂದರ್ಭಗಳು ಏನಿವೆ. ಆ ಸಂದರ್ಭಗಳನ್ನು ಇವತ್ತಿನ ದಿವಸ ನಾನು ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಕಾರಣ ಏನೆಂದರೆ. ನಾನು ವಿಧಾನಸಭೆಗೆ ಎರಡನೇ ಬಾರಿಗೆ ಆಯ್ಕೆಯಾಗಿ ಬಂದಿದ್ದೇನೆ. ನಾನು ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸುವಂಥ ಭಾಗದಲ್ಲಿ ನಾನು ಕುಳಿತು ಕೆಲಸವನ್ನು ನಿರ್ವಹಿಸಿರತಕ್ಕಂಥ ಸಂದರ್ಭದಲ್ಲಿ ತಾವು ಸಚಿವ ಸಂಪುಟದ ಸದಸ್ಯರಾಗಿ ಕೆಲಸವನ್ನು

ನಿರ್ವಹಿಸಬೇಕಾದರೆ ತಮ್ಮಲ್ಲಿದ್ದಂಥ ತಾಳ್ಮೆಯನ್ನು ನಾನು ಗಮನಿಸಿದ್ದೇನೆ. ತಾವು ಯಾವುದಾದರೊಂದು ಕೆಲಸವನ್ನು ಕೈಗೆತ್ತಿಕೊಂಡಾಗ ಪ್ರಾಮಾಣಿಕವಾಗಿ ಮಾಡತತಕ್ಕಂಥ ತಮ್ಮ ನಡವಳಿಕೆಯನ್ನು ನಾನು ಗಮನಿಸಿದ್ದೇನೆ. ಈ ಸದನದ ಸಭಾಧ್ಯಕ್ಷರಾಗಿ ನಿಮ್ಮ ಪಕ್ಷದವರು ನಿಮ್ಮನ್ನು ಆಯ್ಕೆ ಮಾಡಿದಂಥ ಸಂದರ್ಭದಲ್ಲಿ ತಾವು ಉತ್ತರ ಕರ್ನಾಟಕದ ಭಾಗದ ವಿಷಯದಲ್ಲಿ ಇವತ್ತು ಹೆಚ್ಚಿನ ಒಂದು ಕಾಳಜಿಯನ್ನು ನಿರ್ವಹಿಸಬೇಕೆಂಬ ವಿಷಯದ ಬಗ್ಗೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ. ಇವತ್ತು ಸದನದ ಎರಡೂ ಭಾಗದ ಸದಸ್ಯರುಗಳು ಈ ಸಂದರ್ಭದಲ್ಲಿ ಒಂದು ಭರವಸೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇವೆ. ಈ ಸದನದ ಕಲಾಪಗಳಲ್ಲಿ ಆಡಳಿತ ಪಕ್ಷವಾಗಿ ಕೆಲಸವನ್ನು ಜವಾಬ್ದಾರಿಯಾಗಿ ನಿರ್ವಹಿಸಬೇಕಾದರೆ ಆ ಭಾಗದ ಸದಸ್ಯರುಗಳು ಈ ರಾಜ್ಯದಲ್ಲಿ ಒಳ್ಳೆಯ ಅಭಿವೃದ್ಧಿಯ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈ ಒಂದು ಭಾಗದಿಂದ ಸಂಪೂರ್ಣವಾದಂಥ ಸಹಕಾರವನ್ನು ಕೊಡಲಿಕ್ಕೆ ಸಿದ್ಧರಿದ್ದೇವೆ.

ಈ ಒಂದು ಸದನದಲ್ಲಿ ನಡೆಯತಕ್ಕಂಥ ಕಲಾಪಗಳ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ. ಸದನದ ನಿಯಮಾವಳಿಗಳ ಒಂದು ಚೌಕಟ್ಟಿನಲ್ಲಿ ಕೆಲಸಗಳು ನಡೆಯತಕ್ಕಂಥ ಸಂದರ್ಭದಲ್ಲಿ ಯಾವುದೇ ಒಂದು ರೀತಿಯ ನಿಯಮಗಳಿಗೆ ಅಪಚಾರ ಆಗದೇ ಇರತಕ್ಕಂಥ ರೀತಿಯ ಒಂದು ರಕ್ಷಣೆಯನ್ನು ಕೊಡತಕ್ಕಂಥ ಜವಾಬ್ದಾರಿಯನ್ನು ಏನು ಇವೊತ್ತು ನಿರ್ವಹಿಸತಕ್ಕಂಥ ಸ್ಥಾನದಲ್ಲಿದ್ದೀರಿ. ಇವತ್ತು ಆ ಒಂದು ಸ್ಥಾನವನ್ನು ಹಿಂದಿನ ಹಲವಾರು ಸಭಾಧ್ಯಕ್ಷರುಗಳಾಗಿ ಕೆಲಸಗಳನ್ನು ನಿರ್ವಹಿಸಿರತಕ್ಕಂಥ ಪ್ರಮುಖರ ಸಾಲಿನಲ್ಲಿ ತಾವು ನಿಲ್ಲತಕ್ಕಂಥ ಒಂದು ಕೆಲಸವನ್ನು ಈ ಸಂದರ್ಭದಲ್ಲಿ ಮಾಡುತ್ತೀರಿ ಎನ್ನುವಂಥ ಒಂದು ವಿಶ್ವಾಸವನ್ನು ಈ ಒಂದು ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾ ಇವೊತ್ತು ಯಾವ ಹಿಂದುಳಿದ ಭಾಗಗಳು ಇವೆ. ಇವತ್ತು ಅಭಿವೃದ್ಧಿ ಆಗಬೇಕು ಎನ್ನತಕ್ಕಂಥ ವಿಷಯಗಳನ್ನು ನಾವು ಸಾರ್ವಜನಿಕವಾಗಿ ಪ್ರಸ್ತಾಪವನ್ನು ಮಾಡುತ್ತಿರುತ್ತೇವೆ. ಇವತ್ತು ಸದನದ ಸಭಾಧ್ಯಕ್ಷರಾಗಿ ಇವೊತ್ತು ನ್ಯಾಯವನ್ನು ಎತ್ತಿ ಹಿಡಿಯತಕ್ಕಂಥ ಜವಾಬ್ದಾರಿಯನ್ನು ಈ ಸದನದಲ್ಲಿ ತಾವು ನಿರ್ವಹಿಸತಕ್ಕಂಥ ಈ ಸಂದರ್ಭದಲ್ಲಿ ಇವತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಕೈಗೊಳ್ಳತಕ್ಕಂಥ ಕೆಲಸಗಳ ಬಗ್ಗೆ ಅದರಲ್ಲೂ ತಮ್ಮ ಒಂದು ಹೋರಾಟದ ಮುಖಾಂತರ ಉತ್ತರ ಕರ್ನಾಟಕ ಭಾಗದ ಒಂದು ಕೆಲಸಗಳ ಬಗ್ಗೆ ಹೆಚ್ಚಿ ಆಸಕ್ತಿಯನ್ನು ತಾವು ಏನು ಹೊಂದಿದ್ದೀರಿ. ಆ ಒಂದು ವಿಷಯದಲ್ಲಿ ಸದನದ ಸಭಾಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸತಕ್ಕಂಥ ಸಂದರ್ಭದಲ್ಲಿ ಇವತ್ತು ನಿಮಗೆ ಆ ಒಂದು ಅಧಿಕಾರ ಏನಿದೆ. ಇವತ್ತು ಆ ಭಾಗದ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಇವತ್ತು ರಾಜ್ಯದ

ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ನಮ್ಮೆಲ್ಲರ ಸಹಕಾರವನ್ನು ಈ ಸದನದಲ್ಲಿ ಕೊಡಲಿಕ್ಕೆ ನಾವೆಲ್ಲಾ ಮಾನಸಿಕವಾಗಿ ಸಿದ್ಧರಿದ್ದೇವೆ. ನಿಮಗೆ ನಮ್ಮ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ .ಈ ಸದನದಲ್ಲಿ ಈ ಭಾರಿ ಸುಮಾರು 90 ಶಾಸಕರು ಹೊಸದಾಗಿ ಆಯ್ಕೆಯಾಗಿರುತ್ತಾರೆ. ಅವರಿಗೆ ಸದನದ ಕಲಾಪಗಳಲ್ಲಿ ಇವೊತ್ತು ಅತ್ಯಂತ ಯಶಸ್ವಿಯಾಗಿ ಭಾಗವಹಿಸತಕ್ಕಂಥ ರೀತಿಯಲ್ಲಿ ಅವರಿಗೆ ಒಂದು ತರಬೇತಿಯನ್ನು ಕೊಡತಕ್ಕಂಥ ಜವಾಬ್ದಾರಿ ಇವತ್ತು ತಮ್ಮ ಮೇಲೆ ಏನಿದೆ. ಆ ಕೆಲಸವನ್ನು ನಿರ್ವಹಿಸತಕ್ಕಂಥದ್ದರಲ್ಲಿ ಇವೊತ್ತಿನ ಹೊಸ ಶಾಸಕರುಗಳಿಗೆ ತಮ್ಮ ಮಾರ್ಗದರ್ಶನವೂ ಕೂಡ ಅವಶ್ಯಕತೆ ಇದೆ ಎನ್ನುವ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ. ಇವೊತ್ತು ಮತ್ತೊಮ್ಮೆ ಈ ಸದನದ ಸಭಾಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸಬೇಕಾದರೆ ಹಿಂದಿನ ಹಲವಾರು ಪ್ರಮುಖರುಗಳು ನಡೆಸಿರತಕ್ಕಂಥ ಯಶಸ್ವಿಯ ಹಾದಿಯಲ್ಲಿ ತಮ್ಮ ಈ ಒಂದು ಅಧಿಕಾರವನ್ನು ನಿರ್ವಹಿಸತಕ್ಕಂಥದ್ದಕ್ಕೆ ಶುಭ ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಸಚಿವರು) ; ಮಾನ್ಯ ಸಭಾಧ್ಯಕ್ಷರೆ. ಇಡೀ ದೇಶದಲ್ಲಿ ಕರ್ನಾಟಕ ವಿಧಾನಸಭೆ ತನ್ನದೇ ಆದ ಒಂದು ಘನತೆಯನ್ನು ಪಡೆದಿದೆ. ಇಂತಹ ಘನತೆಯನ್ನು ಪಡೆದಂಥ ಕರ್ನಾಟಕ ರಾಜ್ಯದ ವಿಧಾನಸಭಯ ಅಧ್ಯಕ್ಷರಾಗಿ ತಾವು ಆಯ್ಕೆಯಾಗಿದ್ದೀರಿ. ತಮಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ತಮ್ಮ ಇಡೀ ಜೀವನ ಒಂದು ರೀತಿಯ ಸಮಾಜದ ಅಭಿವೃದ್ಧಿಗೆ ಮುಡುಪಾಗಿ ಇಟ್ಟುಕೊಂಡು ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ವಿದ್ಯಾರ್ಥಿ ದಿಶೆಯಲ್ಲಿಯೇ ಅಖಿಲ ಭಾರತ ಪರಿಷತ್ತಿನ ನಾಯಕರಾಗಿ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯತಕ್ಕಂಥ ನಿಟ್ಟಿನಲ್ಲಿ ನೇತೃತ್ವವನ್ನು ವಹಿಸಿಕೊಂಡು ಹೋರಾಟಗಳನ್ನು ಮಾಡಿದ್ದೀರಿ. ಜಯಪ್ರಕಾಶ್ ನಾರಾಯಣರವರ ನೇತೃತ್ವದ ಆ ಹೋರಾಟಗಳಲ್ಲಿ ತಾವು ಭಾಗವಹಿಸಿ. ಈ ದೇಶಕ್ಕೆ ಮತ್ತೊಂದು ಸ್ವಾತಂತ್ರ್ಯವನ್ನು ತರುತ್ತೇನೆ ಎನ್ನುವಂಥ ಒಂದು ಪ್ರಯತ್ನದಲ್ಲಿ ತಾವು ಯಶಸ್ವಿಯಾಗಿದ್ದೀರಿ. ಭಾರತೀಯ ಜನತಾ ಪಕ್ಷದ ರಾಜಾಧ್ಯಕ್ಷರಾಗಿ ಇಡೀ ಕರ್ನಾಟಕ ಮೂಲೆಮೂಲೆಯಲ್ಲಿ ಸುತ್ತಿ ಈ ಪಕ್ಷವನ್ನು ಬೆಳೆಯುವುದಕ್ಕೆ ಮಾನ್ಯ ಯಡಿಯೂರಪ್ಪ ಮತ್ತು ಅನಂತಕುಮಾರರಂತಹ ನಾಯಕರ ಜೊತೆಯಲ್ಲಿ ತಮ್ಮ ಶ್ರಮವನ್ನು ಕೂಡ ಹಾಕಿ. ರಾಜ್ಯದ ಮೂಲೆಮೂಲೆಯಲ್ಲಿ ಪಕ್ಷ ಬೆಳೆದು ಇವತ್ತು ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ನಿಮ್ಮದು ಕೂಡ

ಒಂದು ಮಹತ್ವವಾದ ಕೊಡುಗೆ ಇದೆ ಎನ್ನುವಂಥ ಒಂದು ಅಂಶವನ್ನು ನಾನು ಇವತ್ತು ನೆನಪು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ (ಶಿವಾಜಿನಗರ) ; ಮಾನ್ಯ ಸಭಾಧ್ಯಕ್ಷರಿಗೆ ಅಭಿನಂದನೆಗಳನ್ನು ಹೇಳುತ್ತಿದ್ದೀರಿ. ಪಕ್ಷದ ಬಗ್ಗೆ ಏಕೆ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ ; ನಾನು ಅವರ ಇಡೀ ಜೀವನದ ಬಗ್ಗೆ ಹೇಳುತ್ತಿದ್ದೇನೆ. ಅವರ ಜೀವನ ಯಾವ ರೀತಿ ಇತ್ತು ಎನ್ನುವುದರ ಬಗ್ಗೆ ಹೇಳಿದರೆ ನಿಮಗೆ ಉರಿನಾ?

ಶ್ರೀ ಆರ್.ರೋಷನ್‌ಬೇಗ್ : Speaker ಗೆ ಅಭಿನಂದನೆಗಳನ್ನು ಹೇಳುತ್ತಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ : Yes, ಅವರ ಜೀವನ ಹೇಗೆ ಇತ್ತು ಎನ್ನುವುದರ ಬಗ್ಗೆ ಹೇಳಿದರೆ ನಿಮಗೆ ಬೇಸರವಾದರೆ ನಾನು ಏನು ಮಾಡಲಿ ಹೇಳಿ. ನೀವು ತಡೆದುಕೊಳ್ಳುವುದು ಇನ್ನು ತುಂಬಾ ಇದೆ. ಮೊದಲ ಮಾತಿಗೆ ನಿಮಗೆ ಈ ರೀತಿ ಅನಿಸುತ್ತಿದೆ. ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಸಚಿವರು ತಾವು ನಡೆದು ಬಂದ ದಾರಿಯ ಬಗ್ಗೆ ಮಾತನಾಡುವುದು ಈ ಸಂದರ್ಭದಲ್ಲಿ ಅದು ಪ್ರಸ್ತುತವಾಗಲಾರದು ಎನಿಸುತ್ತದೆ. ಕಾರಣವೇನೆಂದರೆ. ತಾವು ಒಂದು ಸಲ Speaker ಆಗಿ ಎಲೆಕ್ಟ್ ಆದ ಸಂದರ್ಭದಲ್ಲಿ you have ceased to be a member of palitical party. ಹಾಗಾಗಿ ತಾವು ಇನ್ನು ಮುಂದೆ ಯಾವ ರೀತಿಯಾಗಿ ಕಾರ್ಯವನ್ನು ನಿರ್ವಹಿಸಬೇಕು ಎನ್ನತಕ್ಕಂಥದ್ದು. ತಾವು ಮಾಡಿರತಕ್ಕಂಥ ಪಕ್ಷಕ್ಕಾಗಲಿ ಅಥವಾ ವಿಧಾನಸಭೆಗೆ 4 ಭಾರಿ ಆಯ್ಕೆಯಾಗಿ ಬಂದಂಥ ಸಂದರ್ಭದಲ್ಲಿ ತಮ್ಮ ಹಿರಿತನ ಏನು ಎನ್ನುವುದರ ಬಗ್ಗೆ ಮೆಚ್ಚುಗೆಯ ಬಗ್ಗೆ ಮಾತನಾಡಬೇಕೆ? ವಿನಹ ಪಕ್ಷವನ್ನು ಸಂಘಟಿಸುವುದರ ಬಗ್ಗೆ ತಾವು ಮಾಡಿರುವಂಥ ಕೆಲಸದ ಬಗ್ಗೆ ಹೆಚ್ಚು ಮಾತನಾಡತಕ್ಕಂಥದ್ದು ಒಳ್ಳೆಯದಾಗಲಾರದು ಎನ್ನುವುದು ನನ್ನ ಭಾವನೆ. ಆ ಸ್ಥಾನಕ್ಕೆ ಧಕ್ಕೆ ಬರದ ರೀತಿಯಲ್ಲಿ ನಾವು ಮಾತನಾಡಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ. ತಮ್ಮ ಇಡೀ ಜೀವನ ಮತ್ತು ತಮ್ಮ ಕುಟುಂಬದ ಜೀವನ ಎಷ್ಟರಮಟ್ಟಿಗೆ ಬೇರೆಯವರಿಗೆ ಆದರ್ಶವಾಗಿದೆ. ವಿದ್ಯಾರ್ಥಿ ದೆಶೆ ಇರಬಹುದು. ಸಮಾಜದಲ್ಲಿರತಕ್ಕಂಥ ಸಮಸ್ಯೆಗಳನ್ನು ಪರಿಹಾರ ಮಾಡುವುದು

ಇರಬಹುದು. ರಾಜಕೀಯ ಕ್ಷೇತ್ರದಲ್ಲಿ ತಾವು ತೆಗೆದುಕೊಂಡಿರತಕ್ಕಂಥ ಹೆಜ್ಜೆಗಳು ಇರಬಹುದು. ಈ ಎಲ್ಲಾ ವಿಚಾರವನ್ನು ಕೂಡ ಸಮಾಜದ ಎಲ್ಲಾ ವ್ಯಕ್ತಿಗಳಿಗೂ ಕೂಡ ನೀವು ಒಂದು ರೀತಿಯ ಮಾರ್ಗದರ್ಶನ ಮಾಡಿಕೊಂಡು ಬಂದಿರುವಂಥ ವಿಚಾರವು ನನಗಂತೂ ತುಂಬಾ ಸಂತೋಷವಾಗಿದೆ. ನನಗೂ ಕೂಡ ಒಂದು ಮಾರ್ಗದರ್ಶನವೆಂದೂ ನಾನು ಭಾವಿಸುತ್ತೇನೆ. ಏಕೆಂದರೆ. ಈ ಸಭಾಧ್ಯಕ್ಷರ ಸ್ಥಾನದಲ್ಲಿ ತಮ್ಮ ಒಂದು ಭಾವನೆಯನ್ನು ತಾವು ವ್ಯಕ್ತಪಡಿಸಿದ್ದೀರಿ. ಆ ಸಂದರ್ಭದಲ್ಲಿ ಸಂಘ ಪರಿವಾರದ ಒಬ್ಬ ಕಾರ್ಯಕರ್ತನಾಗಿ ಶಿಸ್ತಿಗೆ ತಾವು ಬಹಳಷ್ಟು ಬದ್ಧತೆಯನ್ನು ತೋರಿಸಿದ್ದೀರಿ. ಇಡೀ ದೇಶದ ಪ್ರತಿಯೊಬ್ಬ ಸಾಮಾಜಿಕ ಕಾರ್ಯಕರ್ತನಿಗೂ ಕೂಡ ಅದೊಂದು ಮಾರ್ಗದರ್ಶನ ಮಾಡಿ ತೋರಿಸಿದ್ದೀರಿ. ಹಿರಿಯರ ಮಾರ್ಗದರ್ಶನದ ಪ್ರಕಾರ ನಾನು ನಡೆದುಕೊಳ್ಳಬೇಕು ಎನ್ನುವ ಒಂದು ಶಿಸ್ತಿಗೆ ಒಂದು ಪ್ರಾಧಾನ್ಯತೆ ಕೊಟ್ಟಿದ್ದೀರಿ. ರಾಷ್ಟ್ರೀಯ ಸ್ವಯಂಸೇವಾ ಸಂಘದ ಮೂಲಕ ನೀವು ಬಂದಿರುವುದನ್ನು ಈ ಸಂದರ್ಭದಲ್ಲಿ ನಾನು ತುಂಬ ಮೆಚ್ಚುಗೆಯನ್ನು ಕೂಡ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಿಮ್ಮ ಕುಟುಂಬದ ಒಂದು ವಿಶೇಷತೆಯನ್ನು ನಾನು ಕಂಡೆ. ದಕ್ಷಿಣ ಭಾರತದಲ್ಲಿ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಮೊದಲನೇ ಭಾರಿ ಈ ಸರ್ಕಾರ ಬರುತ್ತಿರುವುದು ನಮ್ಮೆಲ್ಲರಿಗೂ ಕೂಡ ಒಂದು ಹೆಮ್ಮೆ. ಅದನ್ನು ಇತಿಹಾಸದಲ್ಲಿ ಬರೆದಿಡುವಂಥ ಒಂದು ಅಂಶ. ಅದೇ ಪ್ರಕಾರದಲ್ಲಿ ದಕ್ಷಿಣ ಭಾರತದ ಮೊದಲನೇ ಖಿಂಜಚಿಇಜಡಿ ತಾವು ಆಗುತ್ತಿರುವುದು ನಮ್ಮ ನೇತೃತ್ವದ ಸರ್ಕಾರಕ್ಕೆ ತಾವು ಆಗುತ್ತಿರುವುದು ನಮ್ಮೆಲ್ಲರಿಗೂ ಕೂಡ ಹೆಮ್ಮೆ. ಆ ಒಂದು ಇತಿಹಾಸಕ್ಕೂ ನೀವು ಸೇರುತ್ತಿರುವುದು ನಮ್ಮೆಲ್ಲರಿಗೂ ಕೂಡ ಆನಂದ. ಅದೇ ರೀತಿ ತಮ್ಮ ತಂದೆಯವರಾದ ಮಾನ್ಯ ಎಸ್.ಎಸ್.ಶೆಟ್ಟರ್‌ರವರೂ ಕೂಡ ದಕ್ಷಿಣ ಭಾರತದ ಜನಸಂಘದ ಹುಬ್ಬಳ್ಳಿ-ಧಾರವಾಡಕ್ಕೆ ಮೊದಲನೇ ಮೇಯರ್ ಎನ್ನುವುದನ್ನು ಕೂಡ ನಾನು ಗಮನಿಸಿದ್ದೇನೆ. ಅದೇ ರೀತಿ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ತಿಳಿಸಿದಂತೆ First MLA ದಕ್ಷಿಣ ಭಾರತದವರೂ ಕೂಡ ತಮ್ಮ ಚಿಕ್ಕಪ್ಪನವರಾಗಿದ್ದರು. ಈ ರೀತಿ ನಿಮ್ಮ ಕುಟುಂಬವೇ ಈ ಸಮಾಜದಲ್ಲಿ ನಮ್ಮ ಸಂಘಟನೆಯನ್ನು ಕಟ್ಟುವುದಕ್ಕೆ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡಿ ಯಶಸ್ವಿಯಾಗಿದೆ ಎನ್ನುವ ಅಂಶವನ್ನು ಕೂಡ ನಾನಂತೂ ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಪಕ್ಷದ ಎಲ್ಲಾ ಕಾರ್ಯಕರ್ತರು ಮತ್ತು ಹಿರಿಯರು ಕೂಡ ಅದನ್ನು ನೆನಪು ಮಾಡಿಕೊಂಡು ಆನಂದ ಪಡುವಂಥ ಒಂದು ಸಂದರ್ಭ ಇದು ಎಂದು ನಾನು ಭಾವಿಸುತ್ತೇನೆ. ಜೊತೆಗೆ ಈ ಒಂದು ಸ್ಥಾನದಲ್ಲಿ ತಾವು ಏನು ಕುಳಿತ್ತಿದ್ದೀರಿ. ಹಿಂದಿನ

ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ತಿಳಿಸಿದ ಹಾಗೆ ಹಿಂದೆ ಅನೇಕ ದಿಗ್ಗಜರು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತು ಆ ಒಂದು ಅಧ್ಯಕ್ಷ ಸ್ಥಾನದ ಮುಖಾಂತರ ಈ ಒಂದು ಸದನದ ಕಲಾಪಗಳನ್ನು ಮೇಲೆತ್ತಿ ಹಿಡಿದಿರುವುದನ್ನು ನಾವು ಕಂಡಿರುತ್ತೇವೆ. ಇಡೀ ದೇಶಕ್ಕೆ ಈ ಒಂದು ವಿಧಾನಸಬೆ ಮಾದರಿ ವಿಧಾನಸಭೆಯಾಗಿ ಕೆಲಸ ಮಾಡಿರುವುದನ್ನು ನಾವು ಕಂಡಿದ್ದೇವೆ. ಹೀಗಾಗಿ ಆ ಎಲ್ಲಾ ಕಾರ್ಯಕಲಾಪಗಳು ಕೂಡ ತಮ್ಮ ಮಾರ್ಗದರ್ಶನದ ಮುಖಾಂತರ ಮತ್ತೆ ಈ ಒಂದು ವಿಧಾನಸಭೆಯ ಘನತೆಯನ್ನು ಖಂಡಿತ ನಾವು ಮೇಲೆ ಎತ್ತುತ್ತೇವೆ ಎನ್ನುವಂಥ ಅಂಶವನ್ನು ಕೂಡ ಈ ಸಂದರ್ಭದಲ್ಲಿ ತಿಳಿಸುತ್ತಾ ತಮ್ಮ ಕಳಕಳಿಯನ್ನು ಇಡೀ ಕರ್ನಾಟಕ ವಿಶೇಷವಾಗಿ ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು ಎನ್ನುವ ತಮ್ಮ ಕಳಕಳಿ ಏನಿದೆ. ನಾವೆಲ್ಲರೂ ಕೂಡ ನಿಮ್ಮ ಕಳಕಳಿಗೆ ನಾವು ಬದ್ಧರಾಗಿದ್ದೇವೆ. ನಾವು ಸ್ಪಂದಿಸುತ್ತೇನೆ. ಖಂಡಿತ ಈ ಸರ್ಕಾರ ನಿಮ್ಮ ಕಳಕಳಿಗೆ ಸ್ಪಂದಿಸಿ ಎಂದೂ ಆಗದಿರುವಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎನ್ನುವಂಥ ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ದಿಕ್ಕಿನಲ್ಲಿ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ನಮ್ಮ ಸರ್ಕಾರ ಆ ದಿಕ್ಕಿನಲ್ಲಿ ಖಂಡಿತವಾಗಿ ದಿಟ್ಟ ಹೆಜ್ಜೆಯನ್ನು ಇಟ್ಟು ರಾಜ್ಯದ ಜನತೆಗೆ ಸಂತೃಪ್ತಿಯಾದ ಒಂದು ಅಭಿವೃದ್ಧಿಯನ್ನು ಮಾಡಿ ತೋರಿಸುತ್ತೇವೆ ಎನ್ನುವಂಥ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ ಮತ್ತೊಮ್ಮೆ ಈ ಒಂದು ವಿಶೇಷವಾದ ಕರ್ನಾಟಕ ರಾಜ್ಯದ ಈ ಒಂದು ವಿಧಾನಸಭೆಗೆ ಗೌರವದ ಅಧ್ಯಕ್ಷರಾಗಿ ತಾವು ಏನು ಇವೊತ್ತು ಆಯ್ಕೆಯಾಗಿದ್ದೀರಿ ಅದಕ್ಕೆ ನಿಮಗೆ ಅಭಿನಂದನೆಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) ; ಮಾನ್ಯ ಸಭಾಧ್ಯಕ್ಷರೆ. ತಾವು ಅವಿರೋಧವಾಗಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದು ನಾನು ತಮ್ಮನ್ನು ಅಭಿನಂದಿಸಲು ಇಲ್ಲಿ ನಿಂತಿದ್ದೇನೆ. ತಾವು ಈಗಾಗಲೇ ನಾಲ್ಕು ಸಲ ವಿಧಾನಸಭೆಯನ್ನು ಪ್ರವೇಶ ಮಾಡಿ ತಮ್ಮ ವ್ಯಕ್ತಿತ್ವ ಏನು ಎನ್ನತಕ್ಕಂಥದ್ದನ್ನು ಬಹಳಷ್ಟು ಜನರಿಗೆ ಪರಿಚಯವಿದೆ. ತಮ್ಮ ಸರಳತೆ ತಮ್ಮ ಮಾತಿನ ಧಾಟಿ ಬಹಳಷ್ಟು ಜನರಿಗೆ ಅರಿವು ಇದೆ. ತಾವು ಈ ಮನೆಯ ಅತ್ಯಂತ ಎತ್ತರದ ಸ್ಥಾನದಲ್ಲಿ ಕುಳಿತಿದ್ದೀರಿ. ಮುಖ್ಯಮಂತ್ರಿಗಳು ಇರಬಹುದು. ವಿರೋಧ ಪಕ್ಷದ ನಾಯಕರು ಇರಬಹುದು. ಆದರೆ ನಾನು ಕುಳಿತಿರತಕ್ಕಂಥ ಸ್ಥಾನದಿಂದ ನಮ್ಮೆಲ್ಲರಿಗಿಂತ ಎತ್ತರದ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಆರು ಕೋಟಿ ಜನರ ಪ್ರತಿನಿಧಿಗಳು ಇಲ್ಲಿ ಏನು ಬಂದಿದ್ದಾರೆ. ಅವರೆಲ್ಲರಿಗೂ ಕೂಡ ನೀವು ದೊಡ್ಡಣ್ಣನಂತೆ. ಈ ಮಹಾಮನೆಯಲ್ಲಿ ನೀವು ಅತ್ಯಂತ ಎತ್ತರದ ಸ್ಥಾನದಲ್ಲಿ

ಕುಳಿತಿರುವಂಥದ್ದು ತಮ್ಮ ಮೇಲೆ ಹೆಚ್ಚಿನ ಒಂದು ಜವಾಬ್ದಾರಿ ಇದೆ.

ಆ ಜವಾಬ್ದಾರಿಯನ್ನು ನಿರ್ವಹಿಸಿತಕ್ಕಂಥ ಶಕ್ತಿ ತಮಗೆ ಇದೆ ಎನ್ನತಕ್ಕಂಥ ಕಾರಣಕ್ಕೋಸ್ಕರ ಇವೊತ್ತು ಆಡಳಿತ ಪಕ್ಷದ ಬೆಂಚಿನಿಂದ ತಾವು ಇಲ್ಲಿ ಬಂದು ಕುಳಿತಿದ್ದೀರಿ. ನಾವು ಕೂಡ ಈ ಭಾಗದಲ್ಲಿ ಕುಳಿತು ಯಾವುದೇ ರೀತಿಯಲ್ಲಿಯೂ ಕೂಡ ಚುನಾವಣೆಗೆ ಅವಕಾಶ ನೀಡದೇ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದೇವೆ. ಒಪ್ಪಿಕೊಂಡಿದ್ದೇವೆ. ಸಭಾಧ್ಯಕ್ಷರೆ ಈ ಸಂದರ್ಭದಲ್ಲಿ ಮುಖ್ಯವಾಗಿ ನಾನು ಹೇಳುವಂಥದ್ದೂ ಬಹುಶಃ ಇಲ್ಲಿ ಬಂದಿರತಕ್ಕಂಥ 224 ಜನ ಸದಸ್ಯರು ತನ್ನದೇ ಆಗಿರತಕ್ಕಂಥ ಆಶೋತ್ತರಗಳನ್ನು ಇಟ್ಟುಕೊಂಡು ಅವರ ಕ್ಷೇತ್ರದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂಬ ದೃಷ್ಟಿಯಿಂದ ಇಲ್ಲಿ ಬಂದಿರಬೇಕಾದಾಗ. ಎಷ್ಟೋ ಬಾರಿ ನಾವು ಹಿಂದಿನ ನಡವಳಿಕೆಗಳನ್ನು ನೋಡಿದಂಥ ಸಂದರ್ಭದಲ್ಲಿ ನಾವು ಪ್ರಾಮುಖ್ಯವಾಗಿರುವ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಸಿಗದೇ ಇರತಕ್ಕಂಥದ್ದನ್ನು ನೋಡಿದಾಗ ಎಷ್ಟೋ ಸಾರಿ ಒಂದು ರೀತಿಯಲ್ಲಿ ಹೊಸದಾಗಿ ಬಂದಿರತಕ್ಕಂಥ ಸದಸ್ಯರಲ್ಲಿ ಒಂದು ನಿರಾಸಕ್ತಿಯನ್ನು ಮೂಡತಕ್ಕಂಥ ವಾತಾವರಣವನ್ನೂ ಕೂಡ ನಾವು ನೋಡಿದ್ದೇವೆ. ನಾವೂ ಕೂಡ ಹೊಸದಾಗಿ ಬಂದಂಥ ಸಂದರ್ಭದಲ್ಲಿ ನಮ್ಮ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಆಗಲಿಲ್ಲವಲ್ಲವೆಂದು ಬೇಸರ ಮಾಡಿಕೊಂಡು ಹೋಗಿರುವಂಥ ಸಂದರ್ಭಗಳೂ ಕೂಡ ಇವೆ. ಬಹುಶಃ ಅದೆಲ್ಲವನ್ನೂ ಕೂಡ ತಾವು ಅರಿತಿರುವಂಥವರು. ತಾವು ಕೂಡ ಶಾಸಕರಾಗಿ ಬಂದಂಥವರು. ತಮಗೂ ಕೂಡ ಈ ಅನುಭವ ಇದೆ. ಎಲ್ಲಾ ಶಾಸಕರಿಗೂ ಅವಕಾಶ ಸಿಗುವಂಥ ರೀತಿಯಲ್ಲಿ ತಾವು ಕಾರ್ಯವನ್ನು ನಿರ್ವಹಿಸುತ್ತೀರಿ. ಎಂಬ ವಿಶ್ವಾಸವನ್ನು ನಾನು ಇಟ್ಟಿದ್ದೇನೆ. ಬಹುಶಃ ಇವೊತ್ತು ಯಾವುದೇ ಒಂದು ವಿಚಾರ ಬಂದಂಥ ಸಂದರ್ಭದಲ್ಲಿ ತಾವು ಆದಷ್ಟು ಆಡಳಿತ ಪಕ್ಷದ ಕಡೆಗೆ ನೋಡುವುದರ ಬದಲು ವಿರೋಧ ಪಕ್ಷದ ಕಡೆಗೆ ನೋಡಿ ತೀರ್ಮಾನ ಕೊಡುವಂಥ ಕೆಲಸವನ್ನು ಮಾಡಿದರೆ ರಾಜ್ಯ ಸರ್ಕಾರವನ್ನು ಹೆಚ್ಚು ಸಮರ್ಥವಾಗಿ ನಡೆಸಲಿಕ್ಕೆ ಸಾಧ್ಯವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಾ ಬಹುಶಃ ನಿಮ್ಮ ತೀರ್ಪನ್ನು ನಿರ್ಲಕ್ಷಿಸುವಂಥ. ನಿಮ್ಮ ತೀರ್ಪಿನ ವಿರುದ್ಧವಾಗಿ ಅಪೀಲ್ ಮಾಡುವಂತಹ ಯಾವುದೇ ಸಂದರ್ಭ ಬರಲಿಕ್ಕೆ ಸಾಧ್ಯವಿಲ್ಲ. ತಾವು ಸಂವಿಧಾನ ಮತ್ತು ಆ ನಿಯಾಮಾವಳಿಗಳ ಚೌಕಟ್ಟಿನಲ್ಲಿ ಕಾರ್ಯವನ್ನು ನಿರ್ವಹಿಸಬೇಕಾದಾಗ ತಮ್ಮ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. ತಮ್ಮ ತೀರ್ಮಾನಕ್ಕೆ ಎಲ್ಲರೂ ಕೂಡ ಗೌರವಿಸುವಂಥದ್ದಾಗಿರಬೇಕು. ಸಭೆಯ

ಒಳಗೆ ಮತ್ತು ಸಭೆಯ ಹೊರಗೂ ಕೂಡ ಗೌರವವನ್ನು ತರುವಂಥ ರೀತಿಯಲ್ಲಿ ತಾವು ಕಾರ್ಯವನ್ನು ನಿರ್ವಹಿಸುತ್ತೀರೆಂಬ ವಿಶ್ವಾಸ ನನಗಿದೆ. ಬಹುಶಃ ತಮ್ಮ ಒಂದೊಂದು ತೀರ್ಮಾನವೂ ಕೂಡ ಈ ಸಭೆಯ ಘನತೆಯನ್ನು. ಗೌರವವನ್ನು ಹೆಚ್ಚಿಸುವಂಥ ರೀತಿಯಲ್ಲಿ ಆಗಬೇಕು. ಬಹುಶಃ ಹಿಂದೆ ಆ ಕುರ್ಚಿಯಲ್ಲಿ ಬಹಳಷ್ಟು ಜನ ಕುಳಿತು ಹೋಗಿದ್ದಾರೆ. ಕರ್ನಾಟಕದ ವಿಧಾನಸಭೆಗೆ ತನ್ನದೇ ಆದಂಥ ಸುಮಾರು 100 ವರ್ಷಗಳ ಇತಿಹಾಸವಿದೆ. ತಮ್ಮ ಕುರ್ಚಿಯಲ್ಲಿ ಬಹಳಷ್ಟು ಜನ ಕುಳಿತು ಹೋಗಿರುವಂಥ ಸಂದರ್ಭದಲ್ಲಿ ಅವರು ಯಾವ ರೀತಿಯಾಗಿ ಸಭೆಗಳನ್ನು ನಡೆಸುತ್ತಿದ್ದರು ಎನ್ನತಕ್ಕಂಥ ರೀತಿಯಲ್ಲಿ ಅನುಕರಣೆ ಮಾಡುವಂಥ ರೀತಿಯಲ್ಲಿ ತಾವು ಸದನವನ್ನು ನಡೆಸಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ತಾವು ಇಲ್ಲಿ ಕುಳಿತಿರುವಂಥ ಸಂದರ್ಭದಲ್ಲಿ ಸನ್ಮಾನ್ಯ ಎಸ್.ಎಂ.ಕೃಷ್ಣರವರು ವಿಧಾನಸಭೆಯ ಅಧ್ಯಕ್ಷರಾಗಿ ಕುಳಿತಿದ್ದಂಥ ಸಂದರ್ಭದಲ್ಲಿ ಬಹುಶಃ ಈ ಸಭೆಗೆ ಒಂದು ಘನತೆಯಿತ್ತು. ಆ ಕುರ್ಚಿಗೆ ಒಂದು ವಿಶೇಷವಾದಂಥ ಮಹತ್ವವಿತ್ತು ಎಂದು ಹೇಳಬಯಸುತ್ತೇನೆ. ಬಹುಶಃ ಅವರು ಈ hallಗೆ enter ಆಗುತ್ತಾರೆನ್ನುವಂಥ ಸಮಯದಲ್ಲಿ ಇಡೀ ಸದಸ್ಯರೆಲ್ಲರೂ ಕೂಡ ಕೊಡುವಂಥ ಗೌರವ. ಅವರು ಮಾತನಾಡತಕ್ಕಂಥ ಧಾಟಿ. ಅವರು ಸಭೆ ನಡೆಸತಕ್ಕಂಥ ರೀತಿ ನೀತಿಗಳನ್ನು ನೋಡಿದಾಗ ಬಹುಶಃ ಅದು ಅನುಕರಣೆ ಆಗುವಂಥ ರೀತಿಯಲ್ಲಿ ಹೋಗಲಿ ಎನ್ನತಕ್ಕಂಥ ಮಾತನ್ನು ಹೇಳಿ. ತಾವು ಆ ಕಾರ್ಯವನ್ನು ನಿರ್ವಹಿಸುವಂಥ ಶಕ್ತಿ ತಮಗಿದೆ ಎಂಬ ಮಾತನ್ನು ಹೇಳಿ. ಜೊತೆಗೆ ತಾವು ಇವೊತ್ತಿನಿಂದ ಯಾವ ಪಕ್ಷಕ್ಕೂ ಸೇರಿದವರಲ್ಲ. ಇವತ್ತು ಕರ್ನಾಟಕ ಜನತೆಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ. ತಾವು ಸಭೆಯನ್ನು ನಿರ್ವಹಿಸುವಂಥ ಶಕ್ತಿಯನ್ನು ಹೊಂದಿದವರಾಗಿದ್ದೀರಿ. ಮತ್ತು ನಮ್ಮೆಲ್ಲರ ವಿಶ್ವಾಸ. ಸಹಕಾರ ಕೂಡ ತಮಗೆ ಇದೆ ಎನ್ನತಕ್ಕಂಥ ಮಾತನ್ನು ಹೇಳುವುದರೊಂದಿಗೆ ನಿಯಮಾವಳಿಗಳ ಚೌಕಟ್ಟಿನಲ್ಲಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಎಲ್ಲರಿಗೂ ಕೂಡ ಪ್ರಾತಿನಿಧ್ಯ ಸಿಗುವಂತಾಗಬೇಕು. ಚರ್ಚೆಯಲ್ಲಿ ಭಾಗವಹಿಸುವುದು ಅದು ಕೆಲವೇ ಜನರ ಆಸ್ತಿಯಾಗಬಾರದು. ಕೆಲವೇ ಜನರಿಗೆ ಸೀಮಿತವಾಗಬಾರದು. ಕೆಲವೇ ಜನರಿಗೆ ಮಾತನಾಡಲಿಕ್ಕೆ ಅವಕಾಶವನ್ನು ನೀಡುವುದರ ಜೊತೆಗೆ ಎಲ್ಲರಿಗೂ ಅವಕಾಶವನ್ನು ಕೊಡುವಂಥ ರೀತಿಯಲ್ಲಿ ಆಗಬೇಕು ಎನ್ನುವಂಥ ಮಾತನ್ನು ಹೇಳಿ. ಜೊತೆಗೆ ಕರ್ನಾಟಕದ ಸರ್ವತೋಮುಖವಾದ ಅಭಿವೃದ್ಧಿಯಾಗಲಿಕ್ಕೆ ತಾವು ಯಾವ ರೀತಿ ಸಭೆಯನ್ನು ನಡೆಸುತ್ತೀರಿ ಎಂಬುದರ ಮೇಲೆ ಅದು ಅವಲಂಭಿತವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ.

ಅಂತಹ ಶಕ್ತಿಯನ್ನು ಕೊಡುವಂಥ ಸಾಮರ್ಥ್ಯ ತಮಗಿದೆ. ಹಾಗೆಯೇ ಇವತ್ತು ನಾನು ಸಭಾನಾಯಕರನ್ನು ನಾನು ಅಭಿನಂದಿಸಿ ಬೇಕಾಗುತ್ತದೆ. ಸೂಕ್ತವಾಗಿರತಕ್ಕಂಥ ವ್ಯಕ್ತಿಯನ್ನು ಇವತ್ತು ಮಾನ್ಯ ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಲಿಕ್ಕೆ ಸಹಕಾರ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿ ತಮ್ಮನ್ನು ಅಭಿನಂದಿಸಿ. ತಮ್ಮ ಸಹಕಾರವನ್ನು ಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಗೋವಿಂದ ಎಂ. ಕಾರಜೋಳ್‌ರವರು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಸಚಿವರು) :- ತಾವು ಸಭಾಧ್ಯಕ್ಷರಾದುದಕ್ಕೆ ತಮಗೆ ಸಂತೋಷವಾಗಿದೆಯೇ ಇಲ್ಲವೇ ಗೊತ್ತಿಲ್ಲ. ಆದರೆ ನನಗಂತೂ ಬಹಳ ಸಂತೋಷವಾಗಿದೆ. ಏಕೆಂದರೆ ತಾವು ನನ್ನ ಜಿಲ್ಲೆಯಲ್ಲಿ ಹುಟ್ಟಿದಂತಹವರು. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕೆರೂರುನಲ್ಲಿ ಹುಟ್ಟಿದಂಥವರು. ಅಲ್ಲಿ ಹುಟ್ಟಿ ಬಂದಂತಹ ವ್ಯಕ್ತಿ ಉನ್ನತ ಸ್ಥಾನಕ್ಕೆ ಬಂದದ್ದಕ್ಕಾಗಿ ನಾನು ಮೊಟ್ಟ ಮೊದಲಿಗೆ. ಈ ಮನೆಯ ಎಲ್ಲಾ ಸದಸ್ಯರಿಗೆ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಮಾನ್ಯ ಸಭಾಧ್ಯಕ್ಷರೆ. ತಾವು ಶಾಸಕರಾಗಿ. ವಿರೋಧ ಪಕ್ಷದ ನಾಯಕರಾಗಿ. ಪಕ್ಷದ ಅಧ್ಯಕ್ಷರಾಗಿ. ವಿದ್ಯಾರ್ಥಿಪರಿಷತ್‌ನಲ್ಲಿ ನಾಯಕರಾಗಿ ಮತ್ತು ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಚಳವಳಿಯಲ್ಲಿ ಭಾಗವಹಿಸಿರತಕ್ಕಂಥಂವರು. ತಮಗಿರತಕ್ಕಂಥ ಸಾಮಾಜಿಕ ಕಳಕಳಿ. ಕಾಳಜಿಯನ್ನು ನಾನು ವೈಯಕ್ತಿಕವಾಗಿ ಬಲ್ಲವನಾಗಿದ್ದೇನೆ. ಅದಲ್ಲದನೇ ತಾವು ಹುಬ್ಬಳ್ಳಿ-ಧಾರವಾಡ ಬಗ್ಗೆ ಮಾಡಿರತಕ್ಕಂಥ ಕೆಲಸ ಕಾರ್ಯಗಳನ್ನು ಈ ಸಂದರ್ಭದಲ್ಲಿ ನಾನು ನೆನಸಬೇಕಾಗುತ್ತದೆ. ವಿಮಾನ ವಿಲ್ದಾಣವಾಗಿರಬಹುದು. ಕೈಗಾರಿಕೆಗಳನ್ನು ತರುವುದರಲ್ಲಿ ಇರಬಹುದು. ಮೂಲಭೂತ ಸೌಕರ್ಯಗಳನ್ನು ಕೊಡಿಸುವುದರಲ್ಲಾಗಿರಬಹುದು. ತಾವು ಬಹಳ ಹೆಚ್ಚಿನ ಕೆಲಸ ಕಾರ್ಯಗಳನ್ನು ತಮ್ಮ ಅವಧಿಯಲ್ಲಿ ಮಾಡಿದ್ದೀರಿ. ಹುಬ್ಬಳ್ಳಿ-ಧಾರವಾಡಕ್ಕೆ ಚೋಟಾ ಬಾಂಬೆ ಎಂಬ ಇನ್ನೊಂದು ಹೆಸರು ಇದೆ. ಆ ಚೋಟಾ ಬಾಂಬೆ ಎನ್ನತಕ್ಕಂಥ ಸಿಟಿ ಸರಿಯಾಗಿರಲಿಲ್ಲ. ತಮ್ಮ ಅವಧಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಪಡೆಯುವುದಲ್ಲದೆ ಕೈಗಾರಿಕೆಗಳು, ಉದ್ಯೋಗ ಸೃಷ್ಟಿ ಮಾಡಿರುವಂಥದ್ದು. ಜನ ನೆಮ್ಮದಿಯಿಂದ ಬಾಳುವಂತೆ ಮಾಡಿರುವುದು ತಮ್ಮ ಅವಧಿಯಲ್ಲಿಯೇ. ಏಕೆಂದರೆ ಯಾವಾಗಲೂ ಹುಬ್ಬಳ್ಳಿ-ಧಾರವಾಡದಲ್ಲಿ ಗಲಭೆಗಳು ಜಾಸ್ತಿಯಾಗುತ್ತಿರುತ್ತದೆ. ಆ ಗಲಭೆಗಳನ್ನು ನಿಯಂತ್ರಣ ಮಾಡುವಂಥ ಶಕ್ತಿ ತಮಗಿರುವಂಥ ತಾಳ್ಮೆ ಎಲ್ಲವನ್ನೂ ಕೂಡ ನಾವು ಶ್ಲಾಘಿಸಬೇಕಾಗುತ್ತದೆ. ಆ ಕೆಲಸವನ್ನು ಈ ಸದನದಲ್ಲಿ ಮಾಡಿದ್ದೇವೆಂದು ನಾವು ಹೇಳುತ್ತೇವೆ. ಏಕೆಂದರೆ

ಎಲ್ಲಾ 224 ಸದಸ್ಯರು ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಲಿಕ್ಕೆ ಸಹಕರಿಸಿದ್ದಾರೆ. ತಮ್ಮಲ್ಲಿರತಕ್ಕಂಥ ಒಂದು ಪ್ರತಿಭೆಯನ್ನು. ತಮ್ಮ ವ್ಯಕ್ತಿತ್ವವನ್ನು ಗುರುತಿಸುವಂಥ ಕೆಲಸ ಈ ಸದನ ಮಾಡಿದೆ. ತಾವು ಸಮರ್ಥವಾಗಿ ಈ ಸದನವನ್ನು ನಡೆಸಿಕೊಂಡು ಹೋಗುತ್ತೀರಿ. ಎನ್ನತಕ್ಕಂಥ ವಿಶ್ವಾಸ 224 ಜನ ಸದಸ್ಯರಿಗೂ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ತಮ್ಮ ಬಗ್ಗೆ ಹೆಚ್ಚಿಗೆ ಹೇಳಲಿಕ್ಕೆ ಅವಶ್ಯಕತೆಯಿಲ್ಲ. ಏಕೆಂದರೆ ಇಡೀ ರಾಜ್ಯದುದ್ದಗಲಕ್ಕೂ ತಾವು ಪ್ರವಾಸ ಮಾಡಿದ್ದೀರಿ. ತಾವು ವಿರೋಧ ಪಕ್ಷದ ನಾಯಕರಾಗಿ. ಅಧ್ಯಕ್ಷರಾಗಿ. ಶಾಸಕರಾಗಿ ಎಲ್ಲವನ್ನು ತಾವು ಕಂಡಂಥವರಿದ್ದೀರಿ. ಈಗ ಉತ್ತರ ಕರ್ನಾಟಕದ ಬಗ್ಗೆ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದರು ಮತ್ತು ಇನ್ನೂ ಅನೇಕ ನಾಯಕರು ಸಹ ಹೇಳಿದ್ದಾರೆ. ಹಿಂದುಳಿದಿರುವಂಥ ಪ್ರದೇಶದ ಬಗ್ಗೆ. ಎಲ್ಲದರ ಬಗ್ಗೆ ತಾವು ತಿಳಿದವರಾಗಿದ್ದೀರಿ. ಸರ್ಕಾರದಲ್ಲಿ ನಾವೆಲ್ಲರೂ ಕೂಡಿ ಆ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಗೊಳಿಸಲಿಕ್ಕೆ ತಮ್ಮ ಸಹಾಯ, ಸಹಕಾರ ಇದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿ ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಚಿವರು) ; ಸಭಾಧ್ಯಕ್ಷರೆ. ತಾವು ಈ ಅಧ್ಯಕ್ಷ ಸ್ಥಾನಕ್ಕೆ ಎಲ್ಲಾ ಸದಸ್ಯರಿಂದ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ತಮ್ಮನ್ನು ನಾನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಇಡೀ ಸದನಕ್ಕೆ ನಮ್ಮೆಲ್ಲರಿಗೂ ತಮ್ಮಲ್ಲಿ ಸಂಪೂರ್ಣವಾದ ವಿಶ್ವಾಶವಿದೆ. ತಾವು ಈ ಸದನವನ್ನು ಅತ್ಯಂತ ಸಮರ್ಥವಾಗಿ ನಡೆಸುತ್ತೀರೆಂಬ ವಿಶ್ವಾಶವಿದೆ. ಆ ನಂಬಿಕೆಯಿದೆ. ಅದರ ಹಿನ್ನೆಲೆಯೇನೆಂದರೆ. ತಾವು 1994 ರಿಂದ ಈ ಸದನದಲ್ಲಿ ಪ್ರತ್ಯಕ್ಷವಾಗಿ. ಸಕ್ರಿಯವಾಗಿ ಭಾಗವಹಿಸಿ ಎಲ್ಲಾ ಕಾರ್ಯಕಲಾಪಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು. ತಾವು ಶಾಸಕರಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದ್ದೀರಿ. ವಿರೋಧ ಪಕ್ಷದ ನಾಯಕರಾಗಿ. ಕಂದಾಯ ಸಚಿವರಾಗಿ. ಹೀಗೆ ಸರ್ಕಾರದ ಅನೇಕ ಸಮಿತಿಗಳಲ್ಲಿದ್ದು. ಸರ್ಕಾರದ ಆಡಳಿತ ವ್ಯವಸ್ಥೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದವರಾಗಿರುವುದರಿಂದ ಎಲ್ಲಾ ಸದಸ್ಯರೊಂದಿಗೆ ಅತ್ಯಂತ ಸೌಜನ್ಯಪೂರ್ಣರಾಗಿ. ಅತ್ಯಂತ ತಾಳ್ಮೆಯಿಂದ. ಸಹನೆಯಿಂದ ವಿಶಾಲತೆಯಿಂದ ತಾವು ನಡೆದುಕೊಂಡಿರುವ ಹಿನ್ನೆಲೆ ಇರುವುದರಿಂದಾಗಿ ತಾವು ಈ ಸಧನವನ್ನು ಸಮರ್ಥವಾಗಿ ನಡೆಸುತ್ತೀರೆಂದು ವಿಶ್ವಾಸ ನಮಗೆ ಇದೆ. ತಮ್ಮ ಕಾರಣದಿಂದಾಗಿ ನಮ್ಮ ಈ ಸದನದ ಘನತೆ

ಗೌರವಗಳು ಹೆಚ್ಚಾಗುತ್ತೇವೆಂಬ ವಿಶ್ವಾಸ ಇದೆ. ಈ ಸದನದಲ್ಲಿರುವ ನಾವೆಲ್ಲರೂ ಸಹ ಅನುಭವಿಸುತ್ತಿದ್ದೇವೆ. ಈ 13ನೇ ವಿಧಾನಸಭೆಗೆ ನಾವು ಹಾಗೂ ಅನೇಕ ಹೊಸ ಸದಸ್ಯರು ಆಯ್ಕೆಯಾಗಿ ಬಂದಂತಹವರಿದ್ದೇವೆ. ನಾವು ಲೋಕಸಭೆಯನ್ನು ನೋಡುತ್ತೇವೆ. ಅನೇಕ ವಿಧಾನಸಭೆ. ಮತ್ತು ರಾಜ್ಯಸಭೆಗಳನ್ನು ನೋಡುತ್ತೇವೆ. ಅಲ್ಲಿಯ ಕಾರ್ಯಕಲಾಪಗಳು ಹೇಗೆ ನಡೆಯುತ್ತವೆಂದು ಅವಲೋಕಿಸುತ್ತೇವೆ. ಆದರೆ ಜನ ಇವತ್ತು ಈ ವ್ಯವಸ್ಥೆಯ ಬಗ್ಗೆ ವಿಶ್ವಾಸದ ಕೊರತೆಯನ್ನು ವ್ಯಕ್ತಪಡಿಸುತ್ತಿರುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ಮೂಲಕ. ಈ ಸದನದ ಮೂಲಕ ನಾವು ಈ ವ್ಯವಸ್ಥೆಯಲ್ಲಿ ಒಂದು ಪರಿವರ್ತನೆಯನ್ನು ತರುವುದಕ್ಕೆ ಬೇಕಾಗುವಂಥ ಪ್ರಯತ್ನವನ್ನು ಮಾಡುತ್ತಿರುವಂಥ ಸದನ ಕರ್ನಾಟಕದ ಸದನ ಅನ್ನುವಂಥ ಹೆಮ್ಮೆಗೆ ನಾವೆಲ್ಲರೂ ಕಾರಣೀಕರ್ತರಾಗಬೇಕು. ಅದಕ್ಕೆ ತಾವು ಯೋಗ್ಯವಾದಂಥ ಮಾರ್ಗದರ್ಶನವನ್ನು. ನೇತೃತ್ವವನ್ನು ನೀಡುತ್ತೀರೆಂಬ ಸಂಪೂರ್ಣ ವಿಶ್ವಾಸ ನಮಗಿದೆ. ನಾವು ಕೋಟ್ಯಾಂತರ ಜನರ ಪ್ರತಿನಿಧಿಯಾಗಿ ಬಂದು ಇಲ್ಲಿ ಭಾಗವಹಿಸುತ್ತಿದ್ದೇವೆ. ಹಾಗಾಗಿ ನಮ್ಮ ಭಾವನೆಗಳಿಗೆ ಸರ್ಕಾರದಿಂದ ಕಾರ್ಯ ಯೋಜನೆಗಳು ರೂಪಿತವಾಗಿ ಅದು ಆ ಕಷ್ಟದಲ್ಲಿರುವ ಜನರ ಸಮಸ್ಯೆಗಳನ್ನು ದೂರ ಮಾಡಲಿಕ್ಕೆ ಉತ್ತರವನ್ನು ಕಂಡುಹಿಡಿದುಕೊಳ್ಳುವಂಥ ವಿಶ್ವಾಸ ಇದೆ. ಏಕೆಂದರೆ ನಾವು ಸದಸ್ಯರುಗಳು ನಮ್ಮ ನಮ್ಮದೇ ಕಾರಣಗಳಿಗೋಸ್ಕರವಾಗಿ. ಅನೇಕ ವಿಷಯಗಳನ್ನು. ಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಬಯಸುತ್ತಿರುತ್ತೇವೆ. ಆದರೆ ನಮ್ಮ ಭಾವನೆಗಳು ನಮ್ಮ ವಿಷಯಗಳು ಯಾವ ಕಾರಣಕ್ಕೂ ಈ ಸದನದ ಮೂಲಕ ರಾಜ್ಯದ ಹಿತವನ್ನು ಬಯಸುತ್ತಿರುವಂಥವು ಎಂಬ ಸಂದೇಶ ಹೋಗುವಂಥ ರೀತಿಯಲ್ಲಿ ತಾವು ಮಾರ್ಗದರ್ಶನವನ್ನು ಮಾಡಬೇಕೆಂಬ ವಿಷಯವನ್ನು ನಾನು ಪ್ರಸ್ತಾಪಿಸುತ್ತೇನೆ.

ನಮ್ಮ ಕರ್ನಾಟಕದಲ್ಲಿ ಇತಿಹಾಸದಿಂದಲೂ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನರ ಭಾವನೆಗಳನ್ನು ಗೌರವಿಸುವುದರಲ್ಲಿ ನಾವು ನಾಡಿಗೆ ದಾರಿದೀಪವಾದಂಥವರು. ಹಿಂದೆ ರಾಜ ಮಹಾರಾಜರ ಆಡಳಿತ ವ್ಯವಸ್ಥೆಯಲ್ಲಿ ಹೇಗೆ ಜನಪರರನ್ನು ತೊಡಗಿಸಿಕೊಳ್ಳುತ್ತಿದ್ದರು ಎಂಬ ವಿಷಯವದ ಬಗ್ಗೆ ನಾನು ಹೆಚ್ಚು ಹೊಗದೇ 12ನೇ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದ ಉದಾಹರಣೆ ನಮಗಿದೆ. ಇದೇ ಅಧಿವೇಶನವೆ ಬಸವಣ್ಣನವರ ಆ ಅನುಭವಮಂಟಪದ ಒಂದು ವ್ಯವಸ್ಥೆ ಆಗಿ ರೂಪಿತವಾಗಿದ್ದನ್ನು ನೋಡಿದ್ದೇವೆ. ಮೈಸೂರು ಅರಸರ ಕಾಲದಲ್ಲಿ ವ್ಯವಸ್ಥಿತವಾದ ಒಂದು ಪ್ರಜಾಪ್ರತಿನಿಧಿಗಳ ಆಡಳಿತ ವ್ಯವಸ್ಥೆ ಹೇಗಿತ್ತು ಎಂಬುದನ್ನು ನಾವು ನೋಡಿದ್ದೇವೆ. ಹಾಗಾಗಿ ಕರ್ನಾಟಕ ಈ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ

ನಮ್ಮದೇ ಆದಂಥ ಹಿನ್ನೆಲೆಯನ್ನು ಹೊಂದಿರುವವರಾಗಿದ್ದೇವೆ. ಈ ಹಿನ್ನೆಲೆಯಿಂದ ನಾವು ಉಳಿದ ರಾಜ್ಯಗಳ ವಿಧಾನಸಭೆಗೆ ಮಾರ್ಗದರ್ಶನವನ್ನು ಕೊಡುವವರಿದ್ದೀರಿ ಎಂಬ ವಿಶ್ವಾಶವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಈ ಸಂದರ್ಭದಲ್ಲಿ ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡಲು ಬಯಸುತ್ತೇನೆ. ನಾವು 1994ರಲ್ಲಿ ಮೊದಲ ಸಲ ವಿಧಾನಸಭೆಗೆ ಆಯ್ಕೆಯಾದ ಸಂದರ್ಭದಲ್ಲಿ ನಮಗೆ ಈ ಆಡಳಿತ ವ್ಯವಸ್ಥೆಗಳು ಹೇಗೆ ರೂಪಿತವಾಗಿದೆ? ನಮ್ಮ ಜವಾಬ್ದಾರಿಗಳು ಕರ್ತವ್ಯಗಳು ಏನು? ನಾವು ಹೇಗೆ ಈ ಸದನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂಬ ಬಗ್ಗೆ ಆವತ್ತಿನ ನಮ್ಮ ಸಭಾಧ್ಯಕ್ಷರಾದಂಥ ಶ್ರೀಯುತ ರಮೇಶ್‌ಕುಮಾರ್‌ರವರು ಆಸಕ್ತಿವಹಿಸಿ ನಮಗೆ ತರಬೇತಿ ಕಾರ್ಯಗಾರವನ್ನು ನಡೆಸಿದರು. ಇವತ್ತು ಸುಮಾರು 90ಕ್ಕಿಂತ ಹೆಚ್ಚು ಜನ ಸದಸ್ಯರು ದೊಡ್ಡಸಂಖ್ಯೆಯಲ್ಲಿ ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ನಾವು ಜನರಿಂದ ಆಯ್ಕೆಯಾಗಿ ಬಂದಿದ್ದೇವೆ. ನಮಗೆ ಜನರ ಭಾವನೆ. ಕಷ್ಟಸುಖಗಳು ಗೊತ್ತಿದೆ. ಜನರು ಯಾವ್ಯಾವ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ. ಈ ವ್ಯವಸ್ಥೆಯ ಮೂಲಕ ಅದನ್ನು ಹೇಗೆ ಜಾರಿಗೆ ತರಬೇಕು ಎಂಬುದರು ಬಗ್ಗೆ ಈ ಸದನದ ಕಾರ್ಯಕಲಾಪಗಳು ಹೇಗೆ ನಡೆಯುತ್ತದೆ ಎಂಬ ಬಗ್ಗೆ ಅವರುಗಳಿಗೆ ತಿಳಿಸಿಕೊಡುವುದರ ಬಗ್ಗೆ ಬೇರೆ ಒಂದು ಅವಕಾಶವನ್ನು ತಾವು ಕಲ್ಪಿಸಿಕೊಡುವ ವ್ಯವಸ್ಥೆಯಾಗಬೇಕು. ಮುಂದಿನ ದಿವಸಗಳಲ್ಲಿ ತಾವು ಆ ರೀತಿಯ ತರಬೇತಿಯನ್ನು ನಡೆಸುವಂಥವರಾಗಬೇಕು. ಆ ಮೂಲಕ ಪ್ರಶ್ನೋತ್ತರ ಇರಬಹುದು. ಇಲ್ಲಿಯ ಅನೇಕ ರೀತಿಯ ಕಲಾಪಗಳು ಇರಬಹುದು. ಸದಸ್ಯರಿಗೆ ಮಾರ್ಗದರ್ಶನವನ್ನು. ತರಬೇತಿಯನ್ನು ನೀಡುವಂಥರಾಗಬೇಕು. ಆ ಕೆಲಸವನ್ನು ತಾವು ಮಾಡುತ್ತೀರಿ ಎಂಬ ವಿಶ್ವಾಶವನ್ನು ವ್ಯಕ್ತಪಡಿಸುತ್ತೇನೆ. ಈ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಇಡೀ ರಾಜ್ಯ. ದೇಶದ ಗಮನವನ್ನು ಸೆಳೆದಿದೆ. ಕೇವಲ ಕರ್ನಾಟಕದ ಭಾಗವಲ್ಲ ಇಡೀ ದೇಶದ ಗಮನವನ್ನು ಸೆಳೆದಿದೆ. ತಾವು ಸಭಾಧ್ಯಕ್ಷರಾಗಿ ಕರ್ನಾಟಕದ ಮೂಲಕ ಆಡಳಿತ ವ್ಯವಸ್ಥೆಯನ್ನು ಸದನದ ಕಲಾಪವನ್ನು ಶ್ರೀಯುತ ಯಡಿಯೂರಪ್ಪನವರು. ತಾವು ದೇಶದಲ್ಲೇ ಗುರುತಿಸಲ್ಪಡುವ ರೀತಿಯಲ್ಲಿ ವ್ಯವಸ್ಥೆಯನ್ನು ರೂಪಿಸುವುದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಆ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡುತ್ತೀರಿ ಎಂಬ ವಿಶ್ವಾಶವನ್ನು ವ್ಯಕ್ತಪಡಿಸುತ್ತಾ ತಮಗೆ ಮತ್ತೊಮ್ಮೆ ಅಭಿನಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ(ಸಚಿವರು) : ಮಾನ್ಯ ಅಧ್ಯಕ್ಷರೆ. ಮೊದಲನೆಯದಾಗಿ ರಾಷ್ಟ್ರದ ಉಚ್ಚ ಪರಂಪರೆ ಇರುವಂಥ ಈ ವಿಧಾನಸಭೆಯ

5th June 2008

ಸಭಾಧ್ಯಕ್ಷರಾಗಿ ಸರ್ವಾನುಮತದಿಂದ ತಾವು ಆಯ್ಕೆಯಾಗಿರುವುದಕ್ಕೆ ತಮಗೆ ಹೃದಯಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ನಾನು ವಿಧಾನಸಭೆಯ ಸದಸ್ಯನಾಗಿ ನನ್ನ ಮೊದಲನೆಯ ಭಾಷಣ ತಮ್ಮ ಅಭಿನಂದನಾ ಭಾಷಣವಾಗಿರುವುದು ನನ್ನ ಸುದೈವವೆಂದು ಭಾವಿಸುತ್ತೇನೆ. ನಾವು ನೀವು ಒಂದೇ ಊರಿನಲ್ಲಿ ಕೂಡಿ ಬೆಳೆದಿದ್ದೇವೆ. ವಿದ್ಯಾರ್ಥಿ ಜೀವನವನ್ನು ಕೂಡಿಕಲಿತ್ತಿದ್ದೇವೆ. ನಾವು ನೀವು ಅನಂತಕುಮಾರ್‌ರವರು ವಿದ್ಯಾರ್ಥಿ ಜೀವನದಲ್ಲಿ ವಿಶೇಷವಾಗಿ ತುರ್ತು ಪರಿಸ್ಥಿತಿಯಲ್ಲಿ ಮಾಡಿರುವಂಥ ಹೋರಾಟ ಜಯಪ್ರಕಾಶ್ ನಾರಾಯಣ್‌ರವರ ಪ್ರೇರಣೆ ಇವೆಲ್ಲವೂ ಕೂಡ ಇವತ್ತು ನನಗೆ ನೆನಪಾಗುತ್ತಿದೆ. ಇದರ ಜೊತೆಗೆ ನಿಮ್ಮ ಈ ಒಂದು ಪರಂಪರೆ ಸನ್ಮಾನ್ಯ ಸದಾಶಿವಶೆಟ್ಟರವರಿಂದ ಪ್ರಾರಂಭವಾಯಿತು. ಅವರನ್ನು ನಮ್ಮ ಹುಬ್ಬಳ್ಳಿ ಜನತೆ ಎಂದೂ ಮರೆಯಲು ಸಾಧ್ಯವಿಲ್ಲವೆಂದು ಭಾವಿಸುತ್ತೇನೆ. ಹಲವಾರು ಜನ ಶಾಸಕರಾಗಿದ್ದಾರೆ. ಮಂತ್ರಿಗಳಾಗಿದ್ದಾರೆ. ಆದರೆ ಇವತ್ತಿಗೂ ಹುಬ್ಬಳ್ಳಿಯಲ್ಲಿ ಅತ್ಯಂತ ಜನಪ್ರಿಯ ಶಾಸಕರು ಎಂದರೆ ಸದಾಶಿವಶೆಟ್ಟರ್‌ರವರು. ಅವರ ಸರಳ. ನೇರ. ಸಜ್ಜನಿಕೆಯ ಸ್ವಭಾವ ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಅಂಥ ಒಂದು ಪರಂಪರೆಗೆ ಇವೊತ್ತು ಸಂತೋಷವನ್ನು ತಂದಿದೆ ಎಂದು ಹೇಳಲು ಇಚ್ಛೆಪಡುತ್ತೇನೆ. ವೃತ್ತಿಯಲ್ಲಿ ತಾವು ಅತ್ಯಂತ ಯಶಸ್ವಿಯಾಗಿದ್ದೀರಿ. ಒಬ್ಬ ರಾಜಕಾರಣಿಗೆ ವೃತಿಯಲ್ಲಿ ಯಶಸ್ವಿಯಾಗುವುದು ಬಹಳ ಮುಖ್ಯವೆಂದು ನಾನು ಭಾವಿಸುತ್ತೇನೆ. ನಾವು ವೃತ್ತಿ ರಾಜಕಾರಣಕ್ಕಿಂತ ನಮ್ಮನಮ್ಮ ವೃತ್ತಿಯಲ್ಲಿ ಯಶಸ್ವಿಯಾಗಿ ಸಾರ್ವಜನಿಕ ಬದುಕಿನಲ್ಲಿ ಬಂದರೆ ನಮ್ಮದೇ ಆದ ಮೌಲ್ಯವನ್ನು ನಾವು ಸೃಷ್ಟಿಮಾಡಲು ಸಾಧ್ಯ. ಆ ವಿಟ್ಟಿನಲ್ಲಿ ತಾವು ವೃತ್ತಿಯಲ್ಲಿ ಯಶಸ್ವಿಯಾಗಿದ್ದೀರಿ. ಒಬ್ಬ ಯಶಸ್ವಿ ವಕೀಲರಾಗಿ ಕಕ್ಷಿದಾರರಿಗೆ ನ್ಯಾಯವನ್ನು ಕೊಡಿಸುವ ಚಾಕಚಕ್ಯತೆಯನ್ನು ಪಡೆದು ಇಡಿ ಹುಬ್ಬಳ್ಳಿಯ ಭಾಗದಲ್ಲಿ ಅತ್ಯಂತ ಯಶಸ್ವಿ ವಕೀಲರಾಗಿ ತಾವು ಕೆಲಸ ಮಾಡಿದ್ದೀರಿ. ಅದೇ ರೀತಿ ಸಾರ್ವಜನಿಕ ಬದುಕಿಗೆ ತಮಗೆ ಸುಲಭವಾದ ಮಾರ್ಗ ಇರಲಿಲ್ಲ. ಹಲವಾರು ಹೋರಾಟಗಳಲ್ಲಿ ಭಾಗವಹಿಸಿ. ಪಕ್ಷದಲ್ಲಿ ಬೆಳೆದು ವಿಶೇಷವಾಗಿ ತಾವು ಹುಬ್ಬಳ್ಳಿ ಈದ್ಗಾಮೈದಾನದ ಹೋರಾಟದಲ್ಲಿ ಪ್ರಮುಖವಾಗಿ ನಿಂತು ಇಡೀ ರಾಜ್ಯದ ಗಮನವನ್ನು ತಾವು ಸೆಳೆದಿದ್ದನ್ನು ನಾನು ನೆನಪು ಮಾಡಿಕೊಳ್ಳಲು ಇಚ್ಛೆಪಡುತ್ತೇನೆ. ಅನಂತರ ತಾವು 1994ರಲ್ಲಿ ಯಶಸ್ವಿಯಾಗಿ ನನ್ನನ್ನು ಸೋಲಿಸಿ ವಿಧಾನ ಸಭೆಗೆ ಪ್ರವೇಶ ಮಾಡಿದಿರಿ. ಅನಂತರ ತಮ್ಮ ಮುಂದೆ ಇದ್ದ ಮೊದಲನೆಯ ಸವಾಲು ಹುಬ್ಬಳ್ಳಿಗೆ ರೈಲ್ವೆ ಜೋನನ್ನು ತರುವಂಥದ್ದು. ಹಲವಾರು ಅಡೆತಡೆಗಳಿದ್ದು. ಹೋರಾಟಗಳಾಯಿತು. ಸರ್ಕಾರಗಳ ತೀರ್ಮಾನವಾಯಿತು. ಸರ್ಕಾರಗಳ ತೀರ್ಮಾನಗಳು ಬದಲಾವಣೆಯಾಯಿತು. ಆದರೂ ತಾವು ಬಿಡದೆ

ಸುಪ್ರೀಂಕೋರ್ಟ್‌ವರೆಗೆ ಹೋಗಿ ನ್ಯಾಯವನ್ನು ದೊರಕಿಸಿ ಹುಬ್ಬಳ್ಳಿ ಮಾತ್ರವಲ್ಲ ಉತ್ತರ ಕರ್ನಾಟಕಕ್ಕೆ ನೈರುತ್ಯ ರೈಲ್ವೆ ವಲಯವನ್ನು ತಂದಂಥ ಖ್ಯಾತಿ ತಮಗೆ ಸೇರುತ್ತದೆ ಎಂಬುದನ್ನು ಹೇಳಲು ಇಚ್ಛೆಪಡುತ್ತೇನೆ. ಯಾವುದಾದರೂ ಒಂದು ಹೋರಾಟವನ್ನು. ಕೆಲಸವನ್ನು ತಾವು ತೆಗೆದುಕೊಂಡರೆ ಅದನ್ನು ಬಿಡದೆ ಸಂಪೂರ್ಣಗೊಳಿಸುತ್ತೀರಿ ಎಂಬುದಕ್ಕೆ ಒಂದು ಉತ್ತಮವಾದ ಉದಾಹರಣೆಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಅದರ ಜೊತೆಗೆ ತಾವು ಶಾಸಕರಾಗಿ ಅತ್ಯಂತ ಯಶಸ್ವಿಯಾಗಿ ಕೆಲಸವನ್ನು ಆ ಭಾಗದಲ್ಲಿ ಮಾಡಿದ್ದೀರಿ. ಅದರ ಬಗ್ಗೆ ಈಗಾಗಲೇ ಅನೇಕರು ಹೇಳಿದ್ದಾರೆ. ಆದ್ದರಿಂದ ಅದನ್ನು ನಾನು ಪುನರುಚ್ಚಾರ ಮಾಡಲು ಹೋಗುವುದಿಲ್ಲ. ತಾವು ಸಮಾಜಮುಖಿಯಾಗಿ ಕೆಲಸ ಮಾಡಿದ್ದೀರಿ. ಹಲವಾರು ಸಂದರ್ಭದಲ್ಲಿ ಪಕ್ಷವನ್ನೂ ಮೀರಿ ನ್ಯಾಯವನ್ನು ಜನರಿಗೆ ಒದಗಿಸಿಕೊಟ್ಟಿದ್ದೀರಿ. ಈ ಗುಣ ತಮಗೆ ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಆಡಳಿತ ಪಕ್ಷದಲ್ಲಿ ಸಚಿವರಾಗಿ ಕೆಲಸ ಮಾಡಿದ್ದೀರಿ. ಎರಡೂ ಕಡೆಯಲ್ಲಿ ತಮಗೆ ಕೆಲಸ ಮಾಡಿ ಅನುಭವ ಇರುವುದರಿಂದ ತಾವು ಈ ಸದನಕ್ಕೆ ನ್ಯಾಯವನ್ನು ದೊರಕಿಸಿಕೊಡುತ್ತೀರಿ ಎಂಬುದನ್ನು ನಾನು ಹೇಳಲು ಇಚ್ಛೆಪಡುತ್ತೇನೆ. ಬೇರೆ ಮಾತುಗಳಿಗಿಂತ ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿರುವಂಥ ವೈಕುಂಠಬಾಳಿಗರವರ ಬಗ್ಗೆ ನಾನು ಹೇಳಲು ಇಚ್ಛೆಪಡುತ್ತೇನೆ. ಅವರು ಇಡೀ ಕರ್ನಾಟಕದ ಪರಂಪರೆಯಲ್ಲಿ ಅತ್ಯಂತ ಶ್ರೇಷ್ಠವಾದ ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಹಲವಾರು ಕ್ಲಿಷ್ಟಕರವಾದ ಸಂದರ್ಭದಲ್ಲಿ ಅವರು ಕೊಟ್ಟಿರುವಂಥ ತೀರ್ಮಾನ ನಮ್ಮೆಲ್ಲರಿಗೂ ಇಂದಿಗೂ ಮಾದರಿಯಾಗಿದೆ. ಅದೇ ಹಾದಿಯಲ್ಲಿ ತಮ್ಮ ತೀರ್ಮಾನಗಳು ಇರುತ್ತದೆ ಎಂಬ ಅಪೇಕ್ಷೆಯನ್ನು ನಾನು ಮಾಡುತ್ತೇನೆ. ತಾವು ಇಲ್ಲಿ ತೀರ್ಪನ್ನು ಕೊಡುವಾಗ ಕಾನೂನು ಮತ್ತು ನಿಯಮಾವಳಿಗಳು ಒಂದು ಕಡೆ. ಆದರೆ. ಈ ರಾಜ್ಯದ ಸಮಸ್ಯೆಯನ್ನು ಕಾನೂನಿನ ಮೂಲಕವೇ ಬಗೆಹರಿಯುತ್ತದೆ ಎಂಬುದು ತಪ್ಪು ಕಲ್ಪನೆಯಾಗಿದೆ. ಹಲವಾರು ಸಂದರ್ಭದಲ್ಲಿ ನಿಮ್ಮ ವಿವೇಚನೆಯನ್ನು ತಾವು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆ ರೀತಿಯಲ್ಲಿ ತಮ್ಮ ವಿವೇಚನೆಯನ್ನು ಉಪಯೋಗ ಮಾಡುವಾಗ ಅದು ಯಾವಾಗಲೂ ಕರ್ನಾಟಕದ ಜನತೆಯ ಪರವಾಗಿ ಇರಬೇಕು ಎಂಬುದು ನಮ್ಮೆಲ್ಲರ ಅಭಿಲಾಷೆಯಾಗಿದೆ. ಮಹಾತ್ಮ ಗಾಂಧಿಯವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಸಮಸ್ಯೆಯನ್ನು ಬಗೆಹರಿಸುವಾಗ ನಮಗೆ ಏನೂ ತೋಚದಿದ್ದಾಗ ಕಟ್ಟಕಡೆಯ ಮನುಷ್ಯನ ಕಣ್ಣೀರನ್ನು ಒರೆಸುವ ಕೆಲಸವನ್ನು

ತಾವು ಮಾಡಿದರೆ ಎಲ್ಲವೂ ಸರಿಯಾಗುತ್ತದೆ ಎಂದು ಹೇಳಿದ್ದಾರೆ. ಅದೇ ನಿಟ್ಟಿನಲ್ಲಿ ತಮ್ಮ ತೀರ್ಪು ಸಹ ಆಗಬೇಕು. ನಾನು ಕರ್ನಾಟಕ ರಾಜ್ಯದ ಜನತೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆಡಳಿತ ಯಾರು ಮಾಡಬೇಕು ಎಂದು ತೀರ್ಮಾನವನ್ನು ಮಾಡಿದ್ದಾರೆ. ವಿರೋಧ ಪಕ್ಷದ ಆಡಳಿತ ಪಕ್ಷದಷ್ಟೇ ಶಕ್ತಿಯುತವಾಗಿರಬೇಕು. ಆಡಳಿತ ಮಾಡುವವರು ಸರಿಯಾದ ಆಡಳಿತ ಮಾಡಬೇಕು. ಮಾಡದಿದ್ದ ಸಂದರ್ಭದಲ್ಲಿ ವಿರೋಧ ಪಕ್ಷಗಳು ತಮ್ಮ ಕರ್ತವ್ಯವನ್ನು ನಿಭಾಯಿಸಬೇಕು ಎಂಬ ತೀರ್ಮಾನವನ್ನು ಜನರು ಮಾಡಿದ್ದಾರೆ. ಆದ್ದರಿಂದ ಆಡಳಿತ ಪಕ್ಷದ ಮೇಲೆ ಮಾತ್ರ ಜವಾಬ್ದಾರಿ ಇಲ್ಲ. ವಿರೋಧ ಪಕ್ಷದವರಾದ ನಿಮ್ಮ ಮೇಲು ಸಹ ಇವತ್ತು ಜನರು ಜವಾಬ್ದಾರಿಯನ್ನು ವಹಿಸಿದ್ದಾರೆ ಎಂಬುದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಮನವಿ ಮಾಡಲು ಇಚ್ಛೆ ಪಡುತ್ತೇನೆ. ಆದ್ದರಿಂದ ನಮ್ಮ ನಮ್ಮ ಜವಾಬ್ದಾರಿಯನ್ನು ಸರಿಯಾಗಿ ನಾವುಗಳು ನಿಭಾಯಿಸಿದರೆ ನಮ್ಮ ಸಭಾಧ್ಯಕ್ಷರ ಕೆಲಸ ಸ್ವಲ್ಪ ಹಗುರವಾಗುತ್ತದೆ. ಅವರ ಕೆಲಸ ಹಗುರವಾಗಬೇಕಾದರೆ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ.

ಆದುದರಿಂದ ಸರ್ಕಾರ ನಡೆಸಿ ನೀವೆಲ್ಲರೂ ಇದ್ದೀರಿ. ನಿಮಗೆ ಅನುಭವವಿದೆ. ಯಾವ ಸಂದರ್ಭದಲ್ಲಿ ಯಾವ ರೀತಿಯಾಗಿ ಯಾವ ತೀರ್ಮಾನಗಳನ್ನು ತೆಗೆದುಕೊಂಡಿದ್ದೀರಿ ಎಂಬುದು ತಮ್ಮಲಿದೆ. ಆ ಅನುಭವದ ಹಂಚಿಕೆ ಈ ಕಡೆಯೂ ಆಗಲಿ. ನಾವು ನೀವು ಸೇರಿ ಒಟ್ಟಾರೆ ಈ ಕರ್ನಾಟಕದ ಜನತೆಯ ಅಭಿಲಾಷೆ ಏನಿದೆ ಅದನ್ನು ನಾವು ನಡೆಸಿಕೊಡೋಣ. ಇವತ್ತು ಈ ಸಂದನವನ್ನು ಐದೂವರೆ ಕೋಟಿ ಜನತೆ ನೋಡುತ್ತಿದ್ದಾರೆ. ಇವರು ಯಾವ ರೀತಿಯಾಗಿ ನಮ್ಮ ಪರಂಪರೆಯನ್ನು ಉಳಿಸುವುದಷ್ಟೆ ಅಲ್ಲ. ಇಂದಿನ ನಮ್ಮ ಆಧುನಿಕ ಸಮಸ್ಯೆಗಳನ್ನು ಯಾವ ರೀತಿಯಾಗಿ ಬಗೆಹರಿಸುತ್ತಾರೆಂಬುದನ್ನು ನೋಡುತ್ತಿದ್ದಾರೆ. ಆ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿ ಕೂಡ ಇದೆ. ನಮ್ಮ ಸಂಪೂರ್ಣ ಸಹಕಾರ ಕೂಡ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ತಾವು ಈ ಸಭಾಧ್ಯಕ್ಷರ ಸ್ಥಾನದಿಂದ ಈ ಸದನದ ಪರಂಪರೆಯ ಜೊತೆಗೆ ಹೊಸ ಒಂದು ಪರಂಪರೆಯನ್ನು ತಾವು ಹಾಕಬೇಕು. ನಿಮ್ಮ ಹೆಜ್ಜೆಯ ಗುರುತುಗಳನ್ನು ಇಲ್ಲಿ ಬಿಡಬೇಕಾಗುತ್ತದೆ. ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ. ಜನಸಂಖ್ಯೆ ಹೆಚ್ಚಾಗಿದೆ. ಇದರ ಜೊತೆಗೆ ಹೊಸ ಹೊಸ ಸಮಸ್ಯೆಗಳು ಬಂದಿವೆ. ಅದೇ ರೀತಿಯಾಗಿ ಈ ಸದನ ಚಲನಶೀಲವಾಗಿರಬೇಕು. Dynamic ಆಗಿರಬೇಕು. ನಾವು ಇದನ್ನು Statistic ಆಗಿ ಇಡಲು ಸಾಧ್ಯವಿಲ್ಲ. ಆ ಚಲನಶೀಲತೆಗೆ ತಾವು ಚಾಲನೆ ಕೊಡಬೇಕೆನ್ನುವ ಮನವಿಯೊಂದಿಗೆ ನಾನು ಮತ್ತೊಮ್ಮೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು ; ಇನ್ನು 8-10 ಸದಸ್ಯರು ಮಾತನಾಡುವವರಿದ್ದಾರೆ. ಅದಕ್ಕೆ ಸಂಕ್ಷಿಪ್ತವಾಗಿ ಮಾತನಾಡಿದರೆ ಒಳ್ಳೆಯದಾಗುತ್ತದೆಂಬುದು ನನ್ನ ಅಭಿಪ್ರಾಯ.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೆ. 13ನೇ ವಿಧಾನ ಸಭೆಯ ಅಧ್ಯಕ್ಷರಾಗಿ ಮತ್ತು ಮೇಲಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಕ್ಕೆ ಮೊದಲನೆಯದಾಗಿ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ತಾವು ಅಧ್ಯಕ್ಷರಾಗಿದ್ದು ತಮಗೆ ಸಂತೋಷವನ್ನು ತಂದಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ. ಬಾಂಬೆ ಕರ್ನಾಟಕ. ಹೈದರಾಬಾದ್-ಕರ್ನಾಟಕದ ಸಮಗ್ರ ಪರಿಚಯ ತಮಗಿದೆ. ಆ ಕಾರಣಕ್ಕಾಗಿ ಇವತ್ತು ನಂಜುಂಡಪ್ಪನವರು ಒಂದು ವರದಿಯನ್ನೇನು ಕೊಟ್ಟಿದ್ದಾರೆ. ಆ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ವಿಧಾನಸಭೆಯ ಒಳಗಡೆ ನಮ್ಮಂತಹ ಶಾಸಕರು ಸಮಸ್ಯೆಗಳನ್ನು ಎತ್ತಿದಾಗ ಅದಕ್ಕೆ ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ತಾವು ಮಾಡುತ್ತೀರೆನ್ನುವ ಆ ಒಂದು ಬಲವಾದ ನಂಬಿಕೆಯನ್ನು ಕೂಡ ನಾನು ಇಟ್ಟುಕೊಂಡಿದ್ದೇನೆ. ತಮಗೆ ಅಪಾರವಾದ ಒಂದು ಅನುಭವವೂ ಕೂಡ ಇದೆ. ಏಕೆಂದರೆ. 4 ಸಾರಿ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾಗಿ ಕೆಲಸ ನಿರ್ವಹಿಸುವಂತಹವರು ಮತ್ತು ವಿರೋಧ ಪಕ್ಷದ ನಾಯಕರಾಗಿಯೂ ಕೂಡ ಕೆಲಸ ಮಾಡಿದ್ದೀರಿ. ಹಾಗೂ ಕಾನೂನು ಪದವೀಧರರಾಗಿದ್ದೀರಿ ಜೊತೆಗೆ ಮಂತ್ರಿಗಳಾಗಿ ಕೆಲಸ ಮಾಡಿರುವ ಹಿನ್ನೆಲೆಯನ್ನು ನೋಡಿದಾಗ. ಇವತ್ತು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಬಗ್ಗೆ ತಮ್ಮ ಒಂದು ನಿಲುವಿನಿಂದಾಗಿ ತಮ್ಮ ಒಂದು ಪ್ರಯತ್ನವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿಶೇಷವಾಗಿ ನಮ್ಮ ಭಾಗದವರಾದ ತಾವು ಇವತ್ತು ಮುಖ್ಯಮಂತ್ರಿಗಳಿಗಿಂತ ಹೆಚ್ಚಿನದಾದ ಸ್ಥಾನದಲ್ಲಿ ಕುಳಿತಿದ್ದೀರೆಂದು ಹೇಳಬೇಕಾಗುತ್ತದೆ. ಆ ಸ್ಥಾನದಲ್ಲಿ ಕುಳಿತು ಹಿಂದೆ ಈ ರಾಷ್ಟ್ರದ ಮತ್ತು ಈ ರಾಜ್ಯದ ಗೌರವವನ್ನು ಎತ್ತಿಹಿಡಿಯುವ ಕೆಲಸ ಮಾಡಿರುವವರ ಸಾಲಿನಲ್ಲಿ ತಾವು ಬರಬೇಕೆಂಬುದು ನನ್ನ ಬಲವಾದ ಒಂದು ಆಸೆ ಇದೆ. ಹಾಗಾಗಿ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) ; ಸನ್ಮಾನ್ಯ ಸಭಾಧ್ಯಕ್ಷರೆ. ಇವತ್ತಿನ ದಿವಸ ಅತ್ಯಂತ ಗೌರವಾನ್ವಿತವಾದ ಈ ಸದನದ ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕಾಗಿ ನಾನು ತಮ್ಮನ್ನು ವಿಶೇಷವಾಗಿ ಅಭಿನಂದಿಸುತ್ತಾ. ತಾವು ಈ ಸದನದ ಶಾಸಕರಾಗಿ, ವಿರೋಧಪಕ್ಷದ ನಾಯಕರಾಗಿ. ಸಚಿವರಾಗಿ ತಮ್ಮದೇ ಆದ ವಿಶಿಷ್ಟವಾದ ಅನುಭವವನ್ನು ಪಡೆದುಕೊಂಡಿದ್ದೀರಿ. ಅದರಲ್ಲೂ ವಿಶೇಷವಾಗಿ ವಿರೋಧಪಕ್ಷದ

ನಾಯಕರಾಗಿ ತಾವು ನಿರ್ವಹಿಸಿದಂತಹ ಕಾರ್ಯವನ್ನು ನಾವೆಲ್ಲಾ ಈ ಸದನದ ಸದಸ್ಯರಾಗಿ ಬಹಳ ಸಮೀಪದಿಂದ ಕಂಡಿದ್ದೇವೆ. ಬಹಳ ರಚನಾತ್ಮಕವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡುವುದು. ಬಹಳ ಪ್ರಗತಿಪರವಾದ ಧೋರಣೆಗಳಿಗೆ ತಾವು ಹೆಚ್ಚು ಒತ್ತು ಕೊಡುವುದು ಮತ್ತು ಸರ್ಕಾರದ ಸಾರ್ವಜನಿಕ ಮಹತ್ವ ವಿಚಾರಗಳಿಗೆ ವಿಶೇಷವಾದಂತಹ ಆದ್ಯತೆಯನ್ನು ತಾವು ಕೊಡುತ್ತಿರುವುದು. ತಾವು ಮಾತನಾಡುವ ಸಂದರ್ಭದಲ್ಲಿ ಬಹಳ ನಿರ್ಧಿಷ್ಟವಾದ ಅಂಕಿಅಂಶಗಳ ಸಮೇತ ಬಹಳ ಸಂಕ್ಷಿಪ್ತವಾಗಿ ತಮ್ಮ ಪ್ರಸ್ತಾಪವನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿರತಕ್ಕಂತಹ ವಿಚಾರಗಳನ್ನು ತಾವು ನಿರ್ವಹಿಸಿದಂತಹ ಕಾರ್ಯವೈಖರಿಯನ್ನು ನೋಡಿದಾಗ ಬಹುಶಃ ಈ ಸಮರ್ಪಕ ನಾಯಕತ್ವದ ಗುಣಗಳನ್ನು ಹೊಂದಿರುವ ಈ ಒಬ್ಬ ನಾಯಕರಾದ ತಮಗೆ. ಈ ಸಭೆಯನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವ ಶಕ್ತಿ ಇದೆ ಎಂದು ಇವತ್ತು ಇಡೀ ಸದನ ತಮ್ಮನ್ನು ಅವಿರೋಧವಾಗಿ ಅಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಿದೆ. ನಮ್ಮ ಕರ್ನಾಟಕದ ಇತಿಹಾಸದಲ್ಲಿ ಈ ವಿಧಾನಸಭೆಗೆ ತನ್ನದೇ ಆದ ವಿಶೇಷವಾದ ಘನತೆ. ಗಾಂಭೀರ್ಯವಿದೆ. ಬಹುಶಃ ಅದನ್ನೆಲ್ಲಾ ಕಾಪಾಡಿಕೊಂಡು ಹೋಗುವ ಶಕ್ತಿ ತಮಗಿದೆ ಎಂದು ನಾವೆಲ್ಲಾ ಭಾವಿಸಿಕೊಂಡಿದ್ದೇವೆ. ನಾನಾದರೂ ಈ ಸಂದರ್ಭದಲ್ಲಿ ವಿಶೇಷವಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ. ವಿರೋಧ ಪಕ್ಷದವರು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಅವರ ಗಮನಕ್ಕೆ ತರುವ ಸಂದರ್ಭದಲ್ಲಿ ಅನೇಕ ಸಾರ್ವಜನಿಕ ಮಹತ್ವವುಳ್ಳ ವಿಚಾರಗಳಿರುತ್ತವೆ. ಅದಕ್ಕೆ ಹೆಚ್ಚು ಒತ್ತು ಕೊಡಲು ವಿರೋಧಪಕ್ಷದ ಕಡೆಗೆ ತಮ್ಮ ಒಲವು ಹೆಚ್ಚಿಗೆ ಇದ್ದರೆ ಬಹುಶಃ ಆಡಳಿತ ಚುರುಕಾಗುವುದಕ್ಕೆ ಸಾಧ್ಯವಾಗುತ್ತದೆ. ಈ ಆಡಳಿತದಲ್ಲಿರುವ ಜಡ್ಡುತನ ಸ್ವಲ್ಪ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ತಾವು ವಿರೋಧಪಕ್ಷಕ್ಕೆ ಹೆಚ್ಚಿನ ಅವಕಾಶ ಕೊಡಬೇಕೆನ್ನುವ ಒಂದು ಮನವಿಯನ್ನೂ ಕೂಡ ಇವೊತ್ತು ತಮ್ಮ ಮುಂದೆ ಇಡುತ್ತೇನೆ. ಆ ದಿಶೆಯಲ್ಲಿ ಈ ಸದನದ ತಮ್ಮ ಅಧ್ಯಕ್ಷರ ಸ್ಥಾನ ಯಶಸ್ವಿಯಾಗಲೆಂದು ನಾನು ಈ ಸಂದರ್ಭದಲ್ಲಿ ಹಾರೈಸಿ ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೆಂಗಳೂರು ಉತ್ತರ) : ಸನ್ಮಾನ್ಯ ಅಧ್ಯಕ್ಷರೆ. ತಾವು ಈ ರಾಜ್ಯ ವಿಧಾನಸಬೆಯ 17ನೇ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಸ್ಥಾನದಲ್ಲಿ ಹಿಂದೆ ಸನ್ಮಾನ್ಯ ವೆಂಕಟಪ್ಪನವರು. ಸಿದ್ದಯ್ಯನವರು, ರುದ್ರಪ್ಪನವರು, ಕಂಠಿಯವರು, ವೈಕುಂಠಬಾಳಿಗರವರು. ಕೊಠಾವಳೆ ಅವರು, ನಾಗರತ್ನಮ್ಮನವರು.

ವೆಂಕಟರಮಣರವರು. ಕೆ.ಹೆಚ್.ರಂಗನಾಥ್ ಅವರು. ಡಿ.ಬಿ.ಚಂದ್ರೇಗೌಡರು. ಬಣಕಾರ್ ಅವರು. ಎಸ್.ಎಂ.ಕೃಷ್ಣರವರು. ವಿ.ಎಸ್.ಕೌಜಲಗಿಯವರು. ರಮೇಶ್ ಕುಮಾರ್ ಅವರು. ಎಂ.ವಿ.ವೆಂಕಟಪ್ಪನವರು. ಕೃಷ್ಣರವರು ಹೀಗೆ ಅನೇಕ ಜನರು ಒಳ್ಳೆಯ ಸಂಪ್ರದಾಯವನ್ನು ನಮ್ಮ ಕರ್ನಾಟಕ ವಿಧಾನ ಸಭೆಗೆ ಹಾಕಿಕೊಟ್ಟಿದ್ದಾರೆ. ಆ ಸ್ಥಾನಕ್ಕೆ ತಾವು ಇವೊತ್ತು ಸರ್ವಾನುಮತದಿಂದ ಆಯ್ಕೆಯಾಗಿರುವುದಕ್ಕೆ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಾವು ಈ ವಿಧಾನ ಸಭೆಯಲ್ಲಿ 4 ಭಾರಿ ಶಾಸಕರಾಗಿ ವಿರೋಧಪಕ್ಷದ ನಾಯಕರಾಗಿ ಅನುಭವವನ್ನು ಹೊಂದಿದ್ದೀರಿ. ಹಿಂದೆ 1999–2004ರ ತನಕ ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ ಎಂ.ವಿ.ವೆಂಕಟಪ್ಪನವರು ಸಭಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ತಾವು ಆ ಸಭಾಧ್ಯಕ್ಷರಿಗೆ ತಮ್ಮ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿರಿ. ಆ 5 ವರ್ಷಗಳ ಕಾಲ ಅದೇ ಬೆಂಬಲವನ್ನು. ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ತುಂಬಾ ಅನುಭವವಿರುವ ನಾಯಕರಿದ್ದಾರೆ. ಖಂಡಿತವಾಗಿಯೂ ಅವರ ನೇತೃತ್ವದಲ್ಲಿ. ನಮ್ಮ ಹಿರಿಯ ನಾಯಕರಾದ. ನಮ್ಮ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರೂ ಸೇರಿದಂತೆ ಎಲ್ಲರೂ ಕೂಡ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಾರೆ. ತಾವು ಯಶಸ್ವಿಯಾಗುತ್ತೀರೆಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ಕಳೆದ 2–3 ವರ್ಷಗಳಿಂದ ನಮ್ಮ ರಾಜ್ಯ ಪ್ರಗತಿ ಅತ್ಯಂತ ವೇಗದಲ್ಲಿ ನಡೆಯುತ್ತಿರುವುದನ್ನು ಗಮನಿಸುತ್ತಿದ್ದೇವೆ. ಬಹುಶಃ ಈ 5 ವರ್ಷಗಳ ಕಾಲದಲ್ಲಿ ಕರ್ನಾಟಕ ರಾಜ್ಯದ ಪ್ರಗತಿಯಲ್ಲಿ ತಾವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತೀರೆಂದು ನಾನಂತೂ ನಂಬಿದ್ದೇನೆ. ತಾವು ಒಬ್ಬ grass-root level ಕಾರ್ಯಕರ್ತರಾಗಿ. ಖ್ಯಾತ ವಕೀಲರಾಗಿ. ಶಾಸಕರಾಗಿ ಮಾಡಿರುವ ಅನುಭವ ಈ ವಿಧಾನ ಸಭೆಯಲ್ಲಿರುವ ನಾನೂ ಸೇರಿದಂತೆ ಎಲ್ಲರಿಗೂ ಸಿಗುತ್ತದೆಂದು ನಾನು ಭಾವಿಸಿದ್ದೇನೆ. ತಮ್ಮ ತಂದೆಯವರು ಇವೊತ್ತು ಕೂಡ ಖ್ಯಾತ ವಕೀಲರಾಗಿ ಕೋರ್ಟಿಗೆ ಹೋಗುತ್ತಿರುವುದು ನಮಗೆ ಹೆಮ್ಮೆ ತರುವ ವಿಚಾರ. ಅವರು 80 ವಯಸ್ಸನ್ನು ದಾಟಿದ್ದಾರೆ. ತಮ್ಮ ತಾಯಿಯವರೂ ಕೂಡ ಇವೊತ್ತು ತಮಗೆ ಒಳ್ಳೆಯ ಆಶೀರ್ವಾದವನ್ನು ಮಾಡಿದ್ದಾರೆಂದು ನಾನಂತೂ ಭಾವಿಸಿದ್ದೇನೆ. ಈ ಜಾಗದಲ್ಲಿ ಅನೇಕ ಹಿರಿಯರು. ಈ ಸದನದಲ್ಲಿ ಅನೇಕ Constitution Amendment ತಂದಾಗ ಸುಲಭವಾಗಿ ಎಲ್ಲವನ್ನು ಬಗೆಹರಿಸಿದಂತಹ ಉದಾಹರಣೆಯನ್ನು ನಾನು ಕಂಡಿದ್ದೇವೆ. ಹಾಗಾಗಿ ಬರುವ 5 ವರ್ಷಗಳಲ್ಲಿ ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ತಾವು ನಮಗೆ ಎಲ್ಲಾ ರೀತಿಯ

ಮಾರ್ಗದರ್ಶನವನ್ನು ನೀಡುತ್ತೀರೆಂದು ತಮಗೆ ಶುಭಾಷಯವನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಲಕ್ಷಣ ಸಂಗಪ್ಪ ಸವದಿ (ಸಚಿವರು) : ಸನ್ಮಾನ್ಯ ಅಧ್ಯಕ್ಷರೆ. ಇವತ್ತಿನದಿವಸ ಸಭಾಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯ ನಿರ್ವಹಿಸಿರತಕ್ಕಂಥದ್ದು ನಮಗೆಲ್ಲರಿಗೂ ಬಹಳ ಸಂತೋಷ ತಂದಿರತಕ್ಕಂತಹ ಸಂಗತಿ. ವಿಶೇಷವಾಗಿ ಹುಬ್ಬಳ್ಳಿಯ ಸಿದ್ದಾರೂಢರ ತಪೋ ಭೂಮಿಯಲ್ಲಿ ತಾವು ಬೆಳೆದು ಬಂದು. ಆ ಧರ್ಮದ ವಾಸನೆಯನ್ನು ಪಡೆದುಕೊಂಡಿರತಕ್ಕಂಥ ವ್ಯಕ್ತಿಗಳಲ್ಲಿ ತಾವು ಪ್ರಮುಖ ವ್ಯಕ್ತಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ಹಿನ್ನೆಲೆಯಲ್ಲಿ ಇವೊತ್ತಿನ ದಿವಸ ತಾವು ಆ ಸ್ಥಾನವನ್ನು ಅಲಂಕರಿಸಿದ ಮೇಲೆ ಇಡೀ ರಾಜ್ಯಕ್ಕೆ ಮತ್ತು ಐದೂವರೆ ಕೋಟಿ ಜನರಿಗೆ ನ್ಯಾಯಬದ್ಧವಾಗಿ ಇರತಕ್ಕಂತಹ ಸಂದೇಶವನ್ನು ಕಳುಹಿಸುವುದರಲ್ಲಿ ತಾವು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತೀರಿ ಎನ್ನುವ ವಿಶ್ವಾಸವನ್ನು ನಾವೆಲ್ಲರೂ ಇಟ್ಟುಕೊಂಡಿದ್ದೇವೆ. ಆ ಹಿನ್ನೆಲೆಯಲ್ಲಿ ಇವೊತ್ತಿನ ದಿವಸ ತಾವು ವಿಶೇಷವಾಗಿ ಹಿಂದಿನ ಸರ್ಕಾರದಲ್ಲಿ ಕಂದಾಯ ಸಚಿವರಾಗಿ ನಮ್ಮ ಬೆಳಗಾವಿ ಜಿಲ್ಲೆಗೆ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡುವುದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ ಒಂದು ವಿಶೇಷವಾಗಿರತಕ್ಕಂತಹ ಅಧಿವೇಶನವನ್ನು ಮಾಡುವುದರಲ್ಲಿ ತಾವು ಕೂಡ ಪ್ರಮುಖ ಪಾತ್ರ ವಹಿಸಿದ್ದೀರಿ. ಅಂತಹ ಒಂದು ಕಾರ್ಯ ಶೈಲಿಯನ್ನು ಪಡೆದುಕೊಂಡಿರುವ ತಾವು ಸಭಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಆಗಿರುವುದು ನಮ್ಮ ಭಾಗದ ಎಲ್ಲ ಜನರಿಗೂ ಅತ್ಯಂತ ಸಂತೋಷದ ಸಂಗತಿ ಎಂದರೆ ತಪ್ಪಾಗಲಾರದು. ಆ ಹಿನ್ನೆಲೆಯಲ್ಲಿ ಇವತ್ತಿನ ದಿವಸ ನಾನು ವೈಯಕ್ತಿಕವಾಗಿ ಅತ್ಯಂತ ಗೌರವದಿಂದ ತಮ್ಮನ್ನು ಅಭಿನಂದಿಸುತ್ತೇನೆ. ವಿಶೇಷವಾಗಿ ತಾವು ಆ ಒಂದು ಧರ್ಮದ ಭೂಮಿಯಲ್ಲಿ ಬೆಳೆದು ಬಂದು ಇಲ್ಲಿಯವರೆಗೆ ತಮ್ಮ ಜೀವನದ ಉದ್ದಕ್ಕೂ ಕೂಡ ಅನೇಕ ಜನರ ಕಣ್ಣೀರನ್ನು ಒರೆಸಿರತಕ್ಕಂತಹ ಕಾರ್ಯಗಳನ್ನು ನಾವು ಕಂಡಿದ್ದೇವೆ. ಆ ವಿಚಾರದಲ್ಲಿ ಧರ್ಮದ ಹಿನ್ನೆಲೆ ಪಡೆದಿರತಕ್ಕಂತಹವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರತಕ್ಕಂಥದ್ದು ನಮಗೆಲ್ಲರಿಗೂ ಹೆಮ್ಮೆ ತರತಕ್ಕಂಥದ್ದು ಎಂದು ಹೇಳಿ ತಾವು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆ ಆಗಿರುವುದಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ. ತಾವು ಈ ಸದನದ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿರತಕ್ಕಂತಹ ಸಂದರ್ಭದಲ್ಲಿ ಸದನದ ನಾಯಕರು ಹಾಗೂ ನಮ್ಮ ಶಾಸಕಾಂಗ ಪಕ್ಷದ ನಾಯಕರೂ

ಇತರ ಸದಸ್ಯರು ಎಲ್ಲರೂ ಕೂಡ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಈಗಾಗಲೇ ಸಲ್ಲಿಸಿದ್ದಾರೆ. ನಾನೂ ಕೂಡ ಅದರಲ್ಲಿ ಭಾಗಿಯಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸಭಾಧ್ಯಕ್ಷರಾಗಿರತಕ್ಕಂತಹವರು ಆಡಳಿತ ಪಕ್ಷದ ಇಚ್ಛೆಗನುಗುಣವಾಗಿ ಆಗತಕ್ಕಂಥದ್ದು. ಆದರೆ ಏಕೋ ಈಗ ಸ್ವಲ್ಪ ಗೊಂದಲವಾಯಿತು. ಏಕೆಂದರೆ. ಮಾತನಾಡಿದಂತಹವರು ಹೇಳಿದ ಹಾಗೆ ಹಿಂದೆ ಸದನದ ಸಭಾಧ್ಯಕ್ಷರಾಗಿದ್ದಂತಹ ದಿಗ್ಗಜರನ್ನು ನಾನು ನೋಡಿದ್ದೇವೆ. ಆ ದಿಗ್ಗಜರ ಸಾಲಿನಲ್ಲಿ ತಾವು ಬರಬೇಕಾದರೆ. ಏಕೋ ತಮಗೆ ಸಂಪೂರ್ಣವಾದ ಮನಸ್ಸು ಇರಲಿಲ್ಲವೆಂದು ಕಾಣುತ್ತದೆ. ಏಕೆಂದರೆ. ಈ ಹುದ್ದೆ ಪಕ್ಷಾತೀತವಾದುದು. ತಾವು ಯಾವುದೋ ಪಕ್ಷದ ಸಂಘಟನೆ ಹಿನ್ನೆಲೆಯಲ್ಲಿ ಬಂದು ಸಚಿವರಾಗಿ. ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿ. ನಾಲ್ಕನೇ ಭಾರಿಗೆ ಸದನದಲ್ಲಿ ಆಯ್ಕೆಯಾಗಿ. ಹಿಂದುಳಿದ ಭಾಗಗಳಾಗಿರತಕ್ಕಂತಹ ತಮ್ಮ ಜಿಲ್ಲೆಗಳ ಅಭಿವೃದ್ಧಿ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ತಮ್ಮ ಮನಸ್ಸಿನಲ್ಲಿತ್ತು. ವಿಶೇಷವಾಗಿ ಈ ಸದನದ ನಾಯಕರಾಗಿರತಕ್ಕಂತಹವರು. ಇವೊತ್ತು ಭಾರತೀಯ ಜನತಾ ಪಕ್ಷಕ್ಕೆ ಹತ್ತಿರ ಹತ್ತಿರ ಏನು ಬಹುಮತ ಬಂದಿದೆ. ಅದರಲ್ಲಿ ಅವರು ತಮಗೆ ಆಯ್ಕೆ ಮಾಡಿಕೊಂಡರು. ತಾವು ಅದಕ್ಕೆ ಸೂಕ್ತವಾದ ವ್ಯಕ್ತಿಯೆಂದು ಅವರು ಭಾವಿಸಿದರು. ಕೊನೆಗೆ ಏನೇ ಆಗಲಿ ತಾವು ಈ ಸದನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ನಮಗೆಲ್ಲರಿಗೂ ಕೂಡ ಬಹಳ ಸಂತೋಷವಾಗಿರತಕ್ಕಂತಹ ವಿಚಾರ. ವಿಶೇಷವಾದ mandate ಬಂದಿರತಕ್ಕಂಥದ್ದು. ತಮ್ಮ ಅನುಭವ ಮತ್ತು ನನ್ನ ಸಂಸತ್ತಿನ ಅನುಭವದಲ್ಲಿ ಹೇಳುವುದಾರೆ. ಈ ಹುದ್ದೆಯಲ್ಲಿ abundant patience ಬೇಕಾಗುತ್ತದೆ. ಸಭಾಧ್ಯಕ್ಷರ ಸ್ಥಾನಕ್ಕೆ ತಮ್ಮ ಹಿರಿತನದ ಮತ್ತು ಅನುಭವದ ಜೊತೆಗೆ ಅಪಾರವಾದ ತಾಳ್ಮೆ ಬಹಳ ಮುಖ್ಯ. ತಮ್ಮಲ್ಲಿ ಇರತಕ್ಕಂಥದ್ದು. ಸದನದಲ್ಲಿ ಯಾವುದೇ ಕಾರ್ಯಕಲಾಪಗಳು ನಡೆಯತಕ್ಕಂತಹ ಸಂದರ್ಭದಲ್ಲಿ ಪರ ವಿರೋಧ ಆಗತಕ್ಕಂಥದ್ದು ಸಹಜ. ಬಹಳ ತಾಳ್ಮೆಯಿಂದ ತಾವು ಅದನ್ನು ಆಲಿಸಿ. ಅದಕ್ಕೆ ಸರಿಯಾದ ರೀತಿಯಲ್ಲಿ ನಿಭಾಯಿಸುವ ಶಕ್ತಿ ತಮ್ಮಲ್ಲಿ ಇದೆ. you are the custodian of the House. ತಾವು ಈ ಸದನದ ವಾರಸುದಾರರಾಗಿರತಕ್ಕಂಥವರು. ವಾರಸುದಾರರೆಂದರೆ. ಸದನದ ನಿಯಮಗಳನ್ನು ರೂಪಿಸಿದವರೇ ನಾವು. ಸದನದ ಸದಸ್ಯರೇ ರೂಪಿಸಿರತಕ್ಕಂತಹ ನಿಯಮಗಳನ್ನು ತಾವು ತಮ್ಮ ನಿಯಮಗಳ ಜೊತೆಗೆ ತಮ್ಮ ವಿವೇಚನೆ ಮತ್ತು ಸಂಪ್ರದಾಯಗಳನ್ನು ಅನುಸರಿಸಿ ತಮ್ಮ ತೀರ್ಮಾನವನ್ನು. ಕೊಡತಕ್ಕಂತಹ ರೀತಿಯಲ್ಲಿ ಸದನದ ಕಾರ್ಯಕಲಾಪಗಳನ್ನು

ನಡೆಸತಕ್ಕಂತಹ ಒಂದು ದೊಡ್ಡ ಜವಾಬ್ದಾರಿ ತಮ್ಮ ಮೇಲೆ ಇದೆ ಎಂದು ತಿಳಿಸುತ್ತಾ. ಅದರಲ್ಲಿಯೂ ವಿಶೇಷವಾದ mandate ಬಂದಿರತಕ್ಕಂಥದ್ದು. ಆಡಳಿತ ಪಕ್ಷಕ್ಕೆ ಬಹುಮತ ಬರತಕ್ಕಂತಹ ರೀತಿಯಲ್ಲಿ ಹತ್ತಿರ ಹತ್ತಿರದಲ್ಲಿ ಬಂದಾಗ ಕೂಡ ಪಕ್ಷೇತರೆ ಸದಸ್ಯರ ಜೊತೆಯಲ್ಲಿ ಅವರು ಬಹುಮತ ಪಡೆದು ಅಷ್ಟೇ ಸಮ ಬಲದಿಂದ ಸಮ ಸಂಖ್ಯೆಯಲ್ಲಿರತಕ್ಕಂತಹ ವಿರೋಧ ಪಕ್ಷ ಕೂಡ ಇದೆ. ಇವೊತ್ತು ಜನತೆಯ ಆದೇಶದಂತೆ ಆಡಳಿತ ನಡೆಸತಕ್ಕಂತಹವರು ಸ್ವೇಚ್ಛಾಚಾರವಾಗಿ ನಡೆಸುವುದಕ್ಕಾಗುವುದಿಲ್ಲ. ತಮ್ಮ ವಿವೇಚನೆಯಿಂದ ಅದನ್ನು ಮಾಡಬೇಕಾಗುತ್ತದೆ. ವಿರೋಧಪಕ್ಷದಲ್ಲಿರುವ ನಾವೂ ಕೂಡ ತಾತ್ಸಾರ ಮನೋಭಾವನೆಯನ್ನು ತಾಳುವುದಕ್ಕಾಗುವುದಿಲ್ಲ. ಜನ ನಮಗೆ ನಿರ್ಲಕ್ಷಿಸಿದ್ದಾರೆಂದೇನೂ ಇಲ್ಲ. ನಾವೂ ಕೂಡ ಹತ್ತಿರ ಹತ್ತಿರ ಬಹುಮತದಿಂದ ಬಂದಿರತಕ್ಕಂತಹವರು. 108 ಜನ ಸದಸ್ಯರಿರುವುದು. ಇದೂ ಕೂಡ ಇಲ್ಲಿ ಬಹಳ ಮುಖ್ಯವಾದುದು. ಹಾಗಾಗಿ ಆಡಳಿತ ಪಕ್ಷದವರು ಆಡಳಿತದಲ್ಲಿ ಸ್ವೇಚ್ಛಾಚಾರವಾಗಿ ನಡೆಸುವುದಕ್ಕೆ ಅವಕಾಶವಿಲ್ಲ. ನಾನು ಕೂಡ ತಾತ್ಸಾರ ಭಾವನೆ ತಾಳತಕ್ಕಂತಹ ಅವಕಾಶವೂ ಕೂಡ ಇಲ್ಲ. ನಾವೂ ಕೂಡ ಬಹಳ responsible opposition. ನಾವೂ ಕೂಡ ಜವಾಬ್ದಾರಿಯುತವಾದ ಅಪೋಸಿಷನ್ ಇರತಕ್ಕಂತಹವರು. ನಮ್ಮಲ್ಲಿಯೂ ಕೂಡ ಅಪಾರವಾದ ಅನುಭವ ಇರುವವರು ಇರುವುದರಿಂದ ತಾವು ತಮ್ಮ ಚಾಕಚಕ್ಯತೆ ಮತ್ತು ಅನುಭವದಿಂದ ಇವೊತ್ತು ಸದನದ ನಿಯಮಗಳನ್ನು ಒಳಗೊಂಡಂತಹ ರೀತಿಯಲ್ಲಿ ಈ ಸದನವನ್ನು ತಾವು ನಡೆಸಬೇಕಾದ ದೊಡ್ಡ ಜವಾಬ್ದಾರಿ ತಮಗೆ ಇದೆ. ಬಹುಶಃ ನನ್ನ ದೃಷ್ಟಿಯಲ್ಲಿ ತಮ್ಮ ಅಪಾರವಾದ ರಾಜಕೀಯ ಅನುಭವ. ಹಿನ್ನೆಲೆ. ಮತ್ತು ತಮಗೆ ಇರತಕ್ಕಂತಹ ತಾಳ್ಮೆ ಇವೆಲ್ಲವುಗಳನ್ನು ಒಟ್ಟುಗೂಡಿಸಿ. ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಾದ ಭಿನ್ನಾಭಿಪ್ರಾಯಗಳು ಗೊಂದಲಗಳು. ಅನೇಕ ರೀತಿಯಾದ ಸಮಸ್ಯೆಗಳು ಬರಲಿಕ್ಕೆ ಅವಕಾಶ ಇರುವಂತಹ ಸಂದರ್ಭದಲ್ಲಿ ತಾವು ಸದನವನ್ನು ಒಟ್ಟಿಗೆ ತೆಗೆದುಕೊಂಡು ಸದನವನ್ನು ನಡೆಸುವಂತಹ ಶಕ್ತಿ ತಮಗೆ ಇದೆ. ಬಹುಶಃ ವಿರೋಧ ಪಕ್ಷದಿಂದಲೂ ಕೂಡ ತಮ್ಮ ನಿರೀಕ್ಷೆಗೂ ಮೀರಿ ಖಂಡಿತ ನಾವೆಲ್ಲರೂ ತಮಗೆ ಸಹಕಾರವನ್ನು ಕೊಡುತ್ತೇವೆ ಎನ್ನತಕ್ಕಂಥದ್ದನ್ನು ಕೂಡ ಹೇಳಿ. ತಾವು ಕೂಡ ಮೊದಲನೇ ಸಾರಿ ಆಯ್ಕೆಯಾದಾಗ ತಮಗೂ ಕೂಡ ನಿರಾಸೆಯಾಗಿರುತ್ತದೆ. ಬಹುಶಃ ಅನೇಕ ವಿಷಯಗಳ ಬಗ್ಗೆ ಕ್ಷೇತ್ರ ಇರಬಹುದು. ಜಿಲ್ಲೆ ಇರಬಹುದು. ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಮೊದಲನೇ ಭಾರಿಗೆ ಆಯ್ಕೆಯಾಗಿರುವವರಿಗೆ ಅವಕಾಶಗಳು

ಸಿಗುವುದು ಬಹಳ ಕಡಿಮೆ. ಬಹುಶಃ ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ತಮ್ಮ ಗಮನವನ್ನು ಕೊಡುತ್ತೀರಿ. ಸದನದಲ್ಲಿ ಮೊದಲನೇ ಸಾರಿ ಆಯ್ಕೆಯಾಗಿರುವವರಿಗೂ ಕೂಡ ಅವರ ಉತ್ಸಾಹಕ್ಕೆ ತಣ್ಣೀರೆರಚುವ ರೀತಿ ಆಗಬಾರದು. ತಾವು ಅವರಿಗೂ ಕೂಡ ಅವಕಾಶಗಳನ್ನು ಕೊಡಬೇಕು. ಅದರ ಬಗ್ಗೆ ತಾವು ಹೆಚ್ಚಿನ ರೀತಿಯಲ್ಲಿ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸಿ ಹೇಳಿ. ನಾನು ಮೊದಲೇ ಹೇಳಿದ ಹಾಗೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರೂ ಕೂಡ ತಮ್ಮ ಜೊತೆಯಲ್ಲಿ ಹೆಚ್ಚಿನ ರೀತಿಯಲ್ಲಿ ನಿಯಮಗಳನುಸಾರ ಕಾರ್ಯಕಲಾಪಗಳನ್ನು ನಡೆಸುವಲ್ಲಿ ಹೆಚ್ಚಿನ ಸಹಕಾರ ನೀಡಿ ಸಹಕರಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿ. ಈ ಸಂದರ್ಭದಲ್ಲಿ ಮತ್ತೊಮ್ಮೆ ನನ್ನ ತುಂಬು ಹೃದಯದ ಅಭಿನಂದನೆಗಳನ್ನು ತಮಗೆ ಸಲ್ಲಿಸಿ. ನಮ್ಮ ಮುಂದಿನ ಕಾರ್ಯಕಲಾಪಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸುವಂತೆ ನಿಮಗೆ ಶಕ್ತಿ ಸಿಗಲಿ ಎಂದು ಹಾರೈಸುತ್ತೇನೆ.

ಶ್ರೀ ಕರುಣಾಕರರೆಡ್ಡಿ (ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ. ಗಂಧದ ನಾಡಾಗಿ, ಕವಿಗಳ ಬೀಡಾಗಿ. ಶಾಂತಿಪ್ರಿಯ ನಾಡಾದ, ವಿಜ್ಞಾನದ ಕೇಂದ್ರ ಬಿಂದುವಾಗಿರುವಂತಹ ನಾಡಿನಿಂದ ತಾವು 13ನೇ ವಿಧಾನಸಭೆಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿದ್ದಕ್ಕೆ ತಮಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ತಾವು ಸತತ ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿ. ಭಾರತೀಯ ಜನತಾಪಕ್ಷದ ಅಧ್ಯಕ್ಷರಾಗಿ. ವಿರೋಧ ಪಕ್ಷದ ನಾಯಕರಾಗಿ. ಸಚಿವರಾಗಿ ಇವೊತ್ತು ಕರ್ನಾಟಕ ರಾಜ್ಯದ ಅತ್ಯುನ್ನತವಾದ ವಿಧಾನಸಭೆಯ ಸ್ಥಾನವಾದಂತಹ ಸಭಾಧ್ಯಕ್ಷರ ಸ್ಥಾನಕ್ಕೆ ಆಯ್ಕೆಯಾಗಿದ್ದೀರಿ. ಈ ರಾಜ್ಯದ ಅನೇಕ ಸಮಸ್ಯೆಗಳು ಇಲ್ಲಿ ಚರ್ಚೆಗೆ ಬರುತ್ತವೆ. ಅದನ್ನು ನಿಭಾಯಿಸುವಲ್ಲಿ ಹಾಗೂ ಎಲ್ಲರಿಗೂ ಅದರಲ್ಲಿ ಭಾಗವಹಿಸುವುದಕ್ಕೆ ವಿಶ್ವಾಸ ಇದೆ. ನಾನೂ ಕೂಡ ಹಿಂದೆ ನಾಲ್ಕು ವರ್ಷ ಲೋಕಸಭೆಯಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿದ್ದು ಸೇವೆ ಸಲಿಸಿದ್ದೇನೆ. ಇವೊತ್ತು ಕರ್ನಾಟಕ ರಾಜ್ಯದ ಆರು ಕೋಟಿ ಜನರ ಆಶೀರ್ವಾದದಿಂದ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದು ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿ ಖಂಡಿತ ಈ ರಾಜ್ಯಕ್ಕೆ ಒಂದು ಒಳ್ಳೆಯ ಆಡಳಿತ ಕೊಟ್ಟು. ಮಾದರಿ ರಾಜ್ಯವಾಗಿ ಮಾಡುತ್ತಾರೆ ಎನ್ನುವ ವಿಶ್ವಾಸ ನನ್ನಲ್ಲಿದೆ. ಆ ಹಿನ್ನೆಲೆಯಲ್ಲಿ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟು. ಬಳ್ಳಾರಿ ಜಿಲ್ಲೆಯ ಜೊತೆಗೆ ನಮಗೆ ಅನೇಕ ವಿಚಾರಗಳಲ್ಲಿ ತಾವು ವಿರೋಧ ಕ್ಷದ ನಾಯಕರಾಗಿ ಅಧ್ಯಕ್ಷರಾಗಿ. ಸಚಿವರಾಗಿ ನಮಗೆ ಮಾರ್ಗದರ್ಶನ ಕೊಟ್ಟಿದ್ದೀರಿ. ಒಂದು ಒಳ್ಳೆಯ

ನಡತೆಯಲ್ಲಿ ಕೂಡ ತಮ್ಮ ಸಹಕಾರ ಸಂಪೂರ್ಣವಾಗಿ ನಮಗೆ ಇತ್ತು ಎನ್ನುವ ಸಂತೋಷದ ವಿಚಾರವನ್ನು ನಾನು ತಮಗೆ ತಿಳಿಸಿ. ತಮಗೆ ಶುಭವಾಗಲಿ. ಕರ್ನಾಟಕ ರಾಜ್ಯದ ಸಭಾಧ್ಯಕ್ಷರಾಗಿ. ದೇಶದಲ್ಲಿಯೇ ಮಾದರಿಯ ಸಭಾಧ್ಯಕ್ಷರಾಇ ತಾವು ಯಶಸ್ಸು ತರುತ್ತೀರಿ ಎನ್ನುವ ವಿಶ್ವಾಸ ನನ್ನಲ್ಲಿದೆ ಎಂದು ಹೇಳಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QAMURUL ISLAM (GULBARGA NORTH): ಮಾನ್ಯ ಅಧ್ಯಕ್ಷರೆ. Hon'ble Chief Minister. Hon'ble Leader of the opposition and Hon'ble Member of JD(S) and many other members have given congratulations. I also on behalf of myself and on behalf of my party. congratulate you. Sir. you are the custodian of this House. Every member who has been elected. wants to represent in this House. The SPeaker is one who allows all to speak and gives more opportunities. who does justice to all. Sir. I have entered in 1971. I was the lone member of a party. But still i congratulate those speakers who gave me opportunity. They never thought that i am one or I am belonging to a party. Sir. now I am in a national party. I have seen Sri Sangmaji. who was the Speaker in the Lok Sabha. when so much he was generated in the House. his smile was cooling down everyone. I have seen three prime ministers in a short period of 18 months. Here. you have got very good quality. I have seen you working for your own party. you have got an opportunity and there is unanimity. Sir. you are elected as a Speaker. I hope that this is a very very crucial period. we have come here to carry out the business. to put forth the problems of the people and the opposition's duty is to bring those problems to the notice of the Government through you. we expect from the Government that instead of giving examples. ಆ ಕಾಲದಲ್ಲಿ ಏನಾಗಿದೆ. ನಿಮ್ಮ ಕಾಲದಲ್ಲಿ ಏನಾಗಿದೆ. ಈ

ಕಾಲದಲ್ಲಿ ಏನಾಗಿದೆ. ಆ history ಬೇಡ. ನಾನು ಏನು ಹೇಳುತ್ತಿದ್ದೇನೆಂದರೆ. ಹೊಸ history create ಮಾಡಬೇಕು. ತಾವು maximum business carry out ಮಾಡಬೇಕು. maximum business carry out ಆದರೆ ಒಂದು ಹೊಸ history create ಆಗುತ್ತದೆ. ಜನರ ಕೆಲಸ ನಡೆಯುತ್ತದೆ. Lastly. once again I congratulate you on behalf of myself. Thank yor very much. Sir.

ಶ್ರೀ ಶೈಲಪ್ಪ ಬಿದರೂರು (ಗದಗ) : ಮಾನ್ಯ ಅಧ್ಯಕ್ಷರೆ. ತಮ್ಮ ಸರ್ವಾನುಮತದಿಂದ ಆಯ್ಕೆ ನಿಜವಾಗಿಯೂ ನಮಗೆ ಸಂತೋಷವನ್ನುಂಟುಮಾಡಿರುವ ಸಂಗತಿಯೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈ ಗೌರವಾನ್ವಿತ ಸದನದಲ್ಲಿ ತಮ್ಮನ್ನು ಅಭಿನಂದಿಸುವಂತಹ ಸೌಭಾಯ ನನ್ನದಾಗಿರುವುದು ನನ್ನ ಪಾಲಿನ ಸೌಭಾಗ್ಯವೆಂದು ನಾನು ಭಾವಿಸುತ್ತೇನೆ. ನಾನು ತಮ್ಮನ್ನು ಬಹಳ ಸಮೀಪದಿಂದ ಬಲ್ಲವನಂತಹವನಾಗಿದ್ದೇನೆ. ಎರಡು ದಶಕಗಳ ಕಾಲ ತಮ್ಮ ರಾಜಕೀಯ ಜೀವನವನ್ನು ಬಹಳ ಸಮೀಪದಿಂದ ನೋಡಿದಂತಹವನಾಗಿದ್ದೇನೆ. ಮೊದಲನೆಯ ಬಾರಿಗೆ ತಾವೇನು 1994 ರಲ್ಲಿ ವಿಧಾನಸಭೆಗೆ ಪ್ರವೇಶವನ್ನು ಮಾಡಿದಿರಿ ಅದೇ ಕಾಲದಲ್ಲಿ ನಾನೂ ಕೂಡ ವಿಧಾನಸಭೆಗೆ ಪ್ರವೇಶ ಮಾಡುವಂತಹ ಅವಕಾಶ ನನಗೆ ಲಭಿಸಿತ್ತು. ತಮ್ಮದು ಸರಳ ನೇರ ಮಾತುಗಳು. ಬಹುಶಃ ತಾವು ಮೃದು ಭಾಷಿಗಳು. ಅದಕ್ಕಿಂತ ಮಿಗಿಲಾಗಿ ಯಾವುದೇ ವಿಷಯಗಳನ್ನು ಬಹಳ ಆಸಕ್ತಿಯಿಂದ ಗ್ರಹಿಸುವಂತಹವರು. ತಾವು ಸದನಕ್ಕೆ ವಿಶಿಷ್ಟವಾದಂಥ ಶಕ್ತಿಯನ್ನು ತುಂಬುವಂತಹವರಾಗಿದ್ದೀರಿ ಎನ್ನುವ ಭಾವನೆ ನನಗಿದೆ. ಕನ್ನಡ ನಾಡಿನ ಜನರು ಬಹಳ ತಮ್ಮ ಆಶೋತ್ತರಗಳಿಂದ. ಈ ಸದನವನ್ನು ನೋಡತಕ್ಕಂಥವರಾಗಿದ್ದಾರೆ. ಈ ಸದನದ ಹಿರಿಮೆ ಗರಿಮೆಯನ್ನು ಜನ ಸಾಮಾನ್ಯರು ಮನಸ್ಸಿಗೆ ಹಿಡಿಸುವಂತೆ ಮುಟ್ಟಿಸುವಂಥ ಬಹಳ ಪವಿತ್ರವಾದಂಥ ಸ್ಥಾನದಲ್ಲಿ ತಾವು ಕುಳಿತಿದ್ದೀರಿ ಅದು ನಿಜವಾಗಿಯೂ ಸಂತೋಷವನ್ನುಂಟುಮಾಡಿದೆ. ಈ ನಾಡಿನ ಈ ಸದನದ ಹಿರಿಮೆ ಗರಿಮೆಯನ್ನು ಉಚ್ಛ್ರಾಯ ಸ್ಥಿತಿಗೆ ಒಯ್ಯತಕ್ಕಂಥ ಕೀರ್ತಿ ತಮ್ಮದಾಗಲಿ ಎನ್ನತಕ್ಕಂಥ ಸದಾಶಯವನ್ನು ಸಲ್ಲಿಸುವುದರ ಮೂಲಕ ಇದು ತಮ್ಮ ಮುಕುಟದಲ್ಲಿ ಮತ್ತೊಂದು ಗರಿ ಎಂದು ನಾನು ಭಾವಿಸುತ್ತೇನೆ. ಈ ಸ್ಥಾನಕ್ಕೆ ಶಕ್ತಿ ತುಂಬತಕ್ಕಂಥ. ಚೈತನ್ಯ ತುಂಬತಕ್ಕಂಥ ನಿಟ್ಟಿನೊಳಗೆ ತಾವು ಕೆಲಸವನ್ನು ಮಾಡುತ್ತೀರಿ ಎನ್ನತಕ್ಕಂಥ ಆಶಯವನ್ನು ವ್ಯಕ್ತಪಡಿಸುವುದರ ಮೂಲಕ ವಿಶೇಷವಾಗಿ ತಮ್ಮನ್ನು ಈ ಸದನದ ಎಲ್ಲ ಸದಸ್ಯರುಗಳೂ ಈ ಸ್ಥಾನಕ್ಕೆ ಸರ್ವಾನುಮತದಿಂದ

ಆಯ್ಕೆ ಮಾಡಿರುವುದಕ್ಕೆ ಕಾರಣೀಭೂತರಾಗಿದ್ದಾರೆ. ಅವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಜೊತೆಗೆ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ. ವಿಧಾನಸಭೆಯ ಅತ್ಯುನ್ನತ ಸ್ಥಾನಕ್ಕೆ ತಾವು ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಾವು ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ. ಸಚಿವರಾಗಿ. ಇವೊತ್ತು ವಿಧಾನಸಭೆಯ ಅಧ್ಯಕ್ಷರಾಗಿದ್ದೀರಿ. ನನಗಂತೂ ಬಹಳ ಸಂತೋಷವಾಗಿದೆ. ಕಾರಣ. ನೀವು ಸರಳ ವ್ಯಕ್ತಿಗಳು. ಸದಾ ಹಸನ್ಮುಖಿಗಳು. ತಾವು ಕಂದಾಯ ಸಚಿವರಾಗಿದ್ದಾಗ ಬಹಳ ಹತ್ತಿರದಲ್ಲಿ ನಾನು ತಮ್ಮನ್ನು ನೋಡಿದ್ದೇನೆ. ಇವೊತ್ತು ಸರಿಯಾದ ವ್ಯಕ್ತಿಗ ಸರಿಯಾದ ಸ್ಥಾನ ದೊರಕಿದೆ. ಅದಕ್ಕಾಗಿ ನಾನು ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ನಾನು ಈಗ ಎರಡನೆಯ ಬಾರಿ ಆಯ್ಕೆಯಾಗಿದ್ದೇನೆ. ಕಳೆದ ವಿಧಾನಸಭೆಯಲ್ಲಿ ನಾವು 104 ಜನ ಶಾಸಕರಾಗಿ ಹೊಸದಾಗಿ ಆಯ್ಕೆಯಾಗಿದ್ದೆವು. ಆಗ ಮೊದಲನೆಯ ಇಪ್ಪತ್ತು ತಿಂಗಳಲ್ಲಿ ನಮಗೆ ಕೊನೆಯ ಬೆಂಚಿನಲ್ಲಿ ಕೂರಿಸಿದ್ದರು. ನಮಗೆ ಮಾತನಾಡಲು ಅವಕಾಶವೇ ಸಿಗುತ್ತಿರಲಿಲ್ಲ. ನಮ್ಮ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಹೇಳಿದ ಹಾಗೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರುಗಳಿಗೆ ತಾವು ಅವಕಾಶ ಕೊಡಬೇಕು. ನಾವು ಬಹಳಷ್ಟು ಸಾರಿ ಪ್ರಯತ್ನ ಪಟ್ಟರೂ ಕೂಡ ನಮಗೆ ಅವಕಾಶ ಈ ಹಿಂದೆ ಸಿಗುತ್ತಿರಲಿಲ್ಲ. ಮೊನ್ನೆ ಎರಡನೆಯ ಸಾರಿ ಚುನಾವಣೆಗೆ ನಾವು ಹೋದಾಗ ನಮ್ಮ ಜನತೆಯಿಂದ ನಮ್ಮ ಬಗ್ಗೆ ರಿಯಾಕ್ಷನ್ ಬಂತು. ವಿಧಾನಸಭೆಯಲ್ಲಿ ಒಂದು ಬಾರಿ ಕೂಡ ನೀವು ಮಾತನಾಡಲಿಲ್ಲವೆಂದು ನಮಗೆ ಕೇಳಿದರು. ಪ್ರಶ್ನೋತ್ತರಗಳನ್ನು ಬಿಟ್ಟರೆ ಬೇರೆ ಬಿಸಿನೆಸ್‌ನಲ್ಲಿ ನಾವು ಭಾಗವಹಿಸುವುದಕ್ಕಾಗಲಿ ಅಥವಾ ಬೇರೆ ಯಾವುದೇ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದ ನಮಗೆ ಹಿಂದೆ ಅವಕಾಶ ಸಿಗುತ್ತಿರಲಿಲ್ಲ. ಈಗ ನಾನು ಹೊಸದಾಗಿ ಬಂದಿರತಕ್ಕಂಥ ಸದಸ್ಯರುಗಳ ಪರವಾಗಿ ಹಾಗೂ ಮಿಕ್ಕವರೆಲ್ಲರ ಪರವಾಗಿ ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ತಾವು ಖಂಡಿತವಾಗಿ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುಬೇಕು. ಇಲ್ಲಿರುವ 224 ಸದಸ್ಯರುಗಳನ್ನೂ ಕೂಡ ತಾವು ಒಂದೇ ರೀತಿಯಲ್ಲಿ ಭಾವಿಸಬೇಕು. ಕೆಲವು ಸದಸ್ಯರು ಎರಡು ಗಂಟೆ. ಮೂರು ಗಂಟೆ ಮಾತನಾಡುತ್ತಾರೆ. ಹೊಸದಾಗಿ

ಬಂದಂಥ ಸದಸ್ಯರುಗಳಿಗೆ ಹಿಂದಿನ ಬಾರಿ ಐದು ನಿಮಿಷ ಕೂಡ ಮಾತನಾಡಲು ಅವಕಾಶ ಸಿಗುತ್ತಿರಲಿಲ್ಲ. ಹಿರಿಯರಿಗೆ ಒಂದೂವರೆ ಗಂಟೆ. ಎರಡು ಗಂಟೆ ಮಾತನಾಡಲು ಅವಕಾಶ ಕೊಡಿ. ನಾವು ಬೇಡ ಎಂದು ಹೇಳುವುದಿಲ್ಲ. ಹೊಸಬರಿಗೆ ಅರ್ಧ ಗಂಟೆಯನ್ನಾದರೂ ಕೊಡದೇ. ಕುಳಿತುಕೊಳ್ಳಿ. ಕುಳಿತುಕೊಳ್ಳಿ" ಎಂದು ಹೇಳುತ್ತಾ ಹೋದರೆ ಖಂಡಿತ ಇಲ್ಲಿಯೇ ಅಂದರೆ ವಿಧಾನಸಭೆಯಲ್ಲಿಯೇ ಭೇದಭಾವನೆ ಪ್ರಾರಂಭವಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ಮತ್ತೊಂದು ಬಾರಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇಲ್ಲಿ 224 ಸದಸ್ಯರುಗಳು ಏನಿದ್ದಾರೆ ಅವರು ಕಾರ್ಯಕಲಾಪದಲ್ಲಿ ಅವರ ಧ್ವನಿಯಾಗಿ ಮಾತನಾಡುವುದಿಲ್ಲ. ತಾಲ್ಲೂಕಿನ ಜನಗಳ ಪ್ರತಿನಿಧಿಯಾಗಿ ಮಾತನಾಡುತ್ತಾರೆಯೇ ವಿನಃ ವೈಯಕ್ತಿಕವಾಗಿ ನಮ್ಮ ಪರವಾಗಿಯೇ ನಾವು ಮಾತನಾಡುವುದಿಲ್ಲ. ಆದುದರಿಂದ ತಾವೇನು ಇಂದು ಒಳ್ಳೆಯ ಸ್ಥಾನಕ್ಕೆ ಒಳ್ಳೆಯ ವ್ಯಕ್ತಿಯಾಗಿ ಆಯ್ಕೆಯಾಗಿದ್ದೀರಿ. ಅದಕ್ಕಾಗಿ ತಮಗೆ ಮತ್ತೊಂದು ಸಾರಿ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಿದ್ದು ಸವದಿಯವರು ಮಾತನಾಡಿ. ಇನ್ನೂ ಅನೇಕರು ಮಾತನಾಡುವವರಿದ್ದಾರೆ. ಮುಂದೆ ಮಾತನಾಡುವವರೆಲ್ಲರೂ ಕೂಡ ಹಂದಿನ ಸದಸ್ಯರುಗಳು ಹೇಳಿದ್ದನ್ನೇ ರಿಪೀಟ್ ಮಾಡದೇ ಸಂಕ್ಷಿಪ್ತವಾಗಿ ಹೇಳಿದರೆ ಒಳ್ಳೆಯದು. ಏಕೆಂದರೆ ಸಮಯದ ಕೊರತೆಯಿಂದ ದೃಷ್ಟಿಯಿಂದ ಎಲ್ಲರಿಗೂ ಹೇಳುತ್ತಿದ್ದೇನೆ.

ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಅಧ್ಯಕ್ಷರೆ. ನಿಮಗೆ ಅಭಿನಂದನೆಯನ್ನು ಹೇಳುವಂಥ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಅದೇ ಪ್ರಕಾರ ಸದನದ ಎಲ್ಲಾ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರಿಗೆ. ಸಭಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿ ಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೆ. ಇವೊತ್ತು ನನಗಂತೂ ಬಹಳ ಸಂತೋಷವಾಗಿದೆ. ಹಿಂದೆ ಕೂಡ ನಾನು ಈ ಸದನದಲ್ಲಿ ಸದಸ್ಯನಾಗಿ ಭಾಗವಹಿಸಿದಾಗ ಏನೋ ಮುಜುಗರ ಇತ್ತು. ಆದರೆ ಈಗ ನಮ್ಮ ಮನೆಯ ಒಬ್ಬ ಹಿರಿಯಣ್ಣನೆ ಮನೆಯ ಹಿರಿತನವನ್ನು ವಹಿಸಿಕೊಂಡಾಗ ಆ ಮನೆಯ ಸದಸ್ಯರಿಗೆ ಎಷ್ಟು ಆನಂದವಾಗುತ್ತದೋ ಆ ರೀತಿಯಾಗಿ ಇವೊತ್ತು ನನಗೆ ಸಂತೋಷ ಆಗಿದೆ. ಇನ್ನು ತಮ್ಮ ಈ ಒಂದು ಅವಧಿಯಲ್ಲಿ ಈ ಪೀಠದ ಘನತೆ ಇನ್ನೂ ಎತ್ತರಕ್ಕೆ ಬೆಳೆಯಲಿ ಎನ್ನುವ ಆಶಾಭಾವನೆಯಿಂದ ಅದರಲ್ಲೂ ವಿಶೇಷವಾಗಿ ಹಿಂದಿನ ಆಡಳಿತಗಳಲ್ಲಿ ಉತ್ತರ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವಂತಹ ವ್ಯವಸ್ಥೆ ತಮ್ಮ

ಆಡಳಿತದಲ್ಲಿ ಆಗಲಿ ಎನ್ನುವಂತಹ ಆಸೆ ನನ್ನದಾಗಿದೆ. ಏಕೆಂದರೆ. ಉತ್ತರ ಕರ್ನಾಟಕದಲ್ಲಿ ನೀರಾವರಿ ಇರಬಹುದು. ರೈಲ್ವೆ ಲೈನ್ ಇರಬಹುದು. ಹೈಕೋರ್ಟ್ ಪೀಠ ಇರಬಹುದು. ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಇರಬಹುದು. ನಂಜುಂಡಪ್ಪ ವರದಿ ಇರಬಹುದು. ಆ ಎಲ್ಲಾ ವಿಷಯಗಳ ಚರ್ಚೆಗೆ ಹೆಚ್ಚು ಅವಕಾಶವನ್ನು ಕೊಡುವಂತಹ ವ್ಯವಸ್ಥೆ ತಮ್ಮ ಆಡಳಿತದಲ್ಲಿ ಆಗಲಿ ಎನ್ನುವಂತಹ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೇ ಈಗಾಗಲೇ ನಮ್ಮ ಹೊಸ ಸಹಪಾಠಿ ಸದಸ್ಯರು ಮಾತನಾಡಿದ ಪ್ರಕಾರ ಹಿಂದಿನ ಸದನದ ಸಭೆಗಳಲ್ಲಿ ಹೊಸ ಸದಸ್ಯರಿಗೆ ಚರ್ಚೆಗೆ ಅವಕಾಶ ಬಹಳ ಕಡಿಮೆ ಇತ್ತು. ಆದರೂ ಸಹ ಒಂದು ಕಡೆ ನನಗೆ ಸಂತೋಷ ಅನಿಸುತ್ತಿದೆ. ಏಕೆಂದರೆ. ಬಹಳ ಅನುಭವಿ ಸದಸ್ಯರುಗಳು ಹಿಂದಿನ ಸದನದಲ್ಲಿ ಇದ್ದುದ್ದರಿಂದ ನಮಗೆ ಒಂದು ರೀತಿಯಲ್ಲಿ ವಿಶೇಷ ಮಾರ್ಗದರ್ಶನ ಸಿಗುತ್ತಿತ್ತು. ಅವರ ಚರ್ಚೆಗಳನ್ನು ನಾವು ಕುಳಿತು ಕೇಳುವಾಗ ಬಹಳಷ್ಟು ಆನಂದವಾಗುತ್ತಿತ್ತು. ಆದರೂ ಸಹ ಹೊಸ ಸದಸ್ಯರಿಗೆ ಅವಕಾಶ ಸಿಗುವುದು ಬಹಳ ಕಡಿಮೆ ಇರುತ್ತಿತ್ತು. ಆದರೆ ಈ ಬಾರಿ ಮಾತನಾಡಲಿ ಎಂದು ಅವಕಾಶವನ್ನು ಭಗವಂತ ಹೊಸ ಸದಸ್ಯರಿಗೆ ಒದಗಿಸಿ ಕೊಟ್ಟಿದ್ದಾನೆ ಎಂದು ಸಂತೋಷ ಒಂದು ಕಡೆಯಾಗುತ್ತದೆ. ಇನ್ನೊಂದು ಕಡೆ ಅನುಭವಿ ಸದಸ್ಯರು ಈ ಬಿಟ್ಟು ಹೋದರು ಎನ್ನುವಂತಹ ದುಃಖ ಒಂದು ಕಡೆ ಆಗುತ್ತಿದೆ. ಆದರೂ ಸಹ ಹೆಚ್ಚಿನ ಅವಕಾಶ ಈ ಬಾರಿ ದೊರಕಿದೆ ಎನ್ನುವಂತಹ ಮಾತನ್ನು ಹೇಳಿ. ಇನ್ನೊಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಹೊಸ ಸದಸ್ಯರಿಗೆ ಸರ್ಕಾರದ ಒಂದು ವ್ಯವಸ್ಥೆಯಲ್ಲಿ ಒಂದೊಂದು ಕಡೆ ಮೋಸ ಹೋಗುವಂತಹ ವ್ಯವಸ್ಥೆಯಾಗುತ್ತಿದೆ. ಅದನ್ನು ಯಾವ ಸದಸ್ಯರು ತಮ್ಮ ಗಮನಕ್ಕೆ ತರುತ್ತಾರೋ ಅದರ ಬಗ್ಗೆ ಕಟ್ಟುನಿಟ್ಟಾಗಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುದರ ಮುಖಾಂತರ ಸದಸ್ಯರ ಘನತೆ ಗೌರವಗಳನ್ನು ಎತ್ತಿಹಿಡಿಯುವ ಕೆಲಸ ತಮ್ಮ ಅಧಿಕಾರ ಅವಧಿಯಲ್ಲಿ ಆಗಲಿ ಎನ್ನುವ ಆಶಾಭಾವನೆಯನ್ನು ವ್ಯಕ್ತಪಡಿಸಿ ಮತ್ತೊಮ್ಮೆ ತಮಗೆ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ. ತಾವು 13ನೇ ವಿಧಾನಸಭೆಯ ಸಭಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿರುವುದು ನನಗೆ ವೈಯಕ್ತಿಕವಾಗಿ ಸಂತೋಷ ತರಕ್ಕಂಥ ವಿಚಾರ. ಏಕೆಂದರೆ ಈ ವಿಧಾನಸಭೆಯನ್ನು ಪ್ರಪ್ರಥಮವಾಗಿ ನಾವಿಬ್ಬರೂ 1994ರಲ್ಲಿ ಪ್ರವೇಶ ಮಾಡಿದ್ದು. ಇದೇ ಚೇರ್‌ನಲ್ಲಿ ಅಕ್ಕಪಕ್ಕದಲ್ಲಿ ಕುಳಿತು ತಾವು ಯಶಸ್ವಿಯಾಗಿ ಸದನದ ಕಾರ್ಯಕಲಾಪಗಳಲ್ಲಿ

ಭಾಗವಹಿಸಿರುವುದನ್ನು ನಾನು ಹತ್ತಿರದಿಂದ ನೋಡಿರತಕ್ಕಂಥವನು. ತದನಂತರ ತಾವು ವಿರೋಧ ಪಕ್ಷದ ನಾಯಕನಾಗಿ ಹಾಗೂ ಆಡಳಿತ ಪಕ್ಷದಲ್ಲಿ ಸಚಿವರಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕಾನೂನು ತಜ್ಞರಾಗಿ. ತಾವು ಹೊಂದಿರತಕ್ಕಂಥ ಅನುಭವ ಬಹುಶಃ ಆ ಜಾಗದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ನಾನಾದರೂ ಭಾವಿಸಿದ್ದೇನೆ. ಈಗ ಇಲ್ಲಿಗೆ 90 ಜನ ಶಾಸಕರು ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ವಿರೋಧ ಪಕ್ಷದ ಕಡೆ ಹೆಚ್ಚಿನ ಗಮನವನ್ನು ತಾವು ಕೊಡಬೇಕಾಗುತ್ತದೆ. ಏಕೆಂದರೆ ಆಡಳಿತ ಪಕ್ಷದಲ್ಲಿ ಆಗತಕ್ಕಂಥ ಲೋಪದೋಷಗಳನ್ನು ತಿದ್ದುವಂತಹ ಜವಾಬ್ದಾರಿ ವಿರೋಧ ಪಕ್ಷದ ಮೇಲೆ ಇರುವುದರಿಂದ ತಾವು ಹೆಚ್ಚಿನ ಅವಕಾಶವನ್ನು ಹೊಸಬರಿಗೆ ಮತ್ತು ವಿರೋಧ ಪಕ್ಷದವರಿಗೆ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತಾ. ನಾವು. ಆ ಜಾಗದಲ್ಲಿ ಕುಳಿತು ಯಶಸ್ವಿಯಾಗಿ ಕೆಲಸ ಮಾಡಿದಂತಹ ಅನೇಕ ಜನ ಹಿರಿಯರನ್ನು ಏನು ನೆನೆಸಿಕೊಳ್ಳುತ್ತೇವೆ. ಆ ಒಂದು ಮಹತ್ವವಾದಂತಹ ಜಾಗಕ್ಕೆ ತಾವು ಕೂಡ ಸೇರುತ್ತೀರಿ ಎಂದು ಭಾವಿಸುತ್ತಾ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ (ಮುದ್ದೇಬಿಹಾಳ್) : ಮಾನ್ಯ ಅಧ್ಯಕ್ಷರೆ. ತಾವು ಈ 13ನೇ ವಿಧಾನಸಭೆಗೆ ಸರ್ವಾನುಮತದಿಂದ ಆಯ್ಕೆಯಾಗಿರುವುದಕ್ಕೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುವುದಕ್ಕ ಇಚ್ಛೆಪಡುತ್ತೇನೆ. ಉತ್ತರ ಕರ್ನಾಟದಿಂದ ಶ್ರೀಮಾನ್ ಬಣಕಾರ್. ಶ್ರೀಮಾನ್ ಕೌಜಲಗಿ ಹಾಗೂ ತಾವು ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಈ ಸಭೆಯ ಒಂದು ಅತ್ಯುನ್ನತವಾದಂತಹ ಸ್ಥಾನವನ್ನು ಅಲಂಕರಿಸುವುದರಲ್ಲಿ ತಾವೂ ಕೂಡ ಒಬ್ಬರಾಗಿದ್ದು ನಮಗೆಲ್ಲರಿಗೂ ಕೂಡ ಹೆಮ್ಮೆ ತರತಕ್ಕಂಥ ವಿಷಯವಾಗಿದೆ. ನಾನು ಹುಬ್ಬಳ್ಳಿಯಲ್ಲಿ ಓದುತ್ತಿದ್ದೆ. ತಾವು ಹುಬ್ಬಳ್ಳಿಯಲ್ಲಿ ಕಲಿಯುತ್ತಿದ್ದಾಗ. ತಮ್ಮ ಸ್ವಭಾವ. ತಮ್ಮ ಮನೆತನದ ಹಿನ್ನೆಲೆ ಹಾಗೂ ನೀವು ನಡೆದು ಬಂದ ದಾರಿ ಎಲ್ಲಾ ನಾನು ಚೆನ್ನಾಗಿ ಬಲ್ಲೆ. ನಾನು 1989ರಲ್ಲಿ ಮೊದಲನೆ ಸಾರಿ ಇಲ್ಲಿಗೆ ಪ್ರವೇಶಿಸಿದೆನು. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸದನದ ಕಲಾಪಗಳು 1989ರಲ್ಲಿ ಯಾವ ರೀತಿ ನಡೆಯುತ್ತಿತ್ತು. ನಂತರ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ನೋಡಿದಾಗ ಮನಸ್ಸಿಗೆ ಖೇದ ಉಂಟಾಗುತ್ತದೆ. ಆ ಮೌಲ್ಯಗಳು deterioration ಏನಾಗುತ್ತಿದೆ ಅದು ಆಗದೆ ಹಾಗೆ ತಾವು ದಯವಿಟ್ಟು ಆ ಮೌಲ್ಯಗಳನ್ನು ಎತ್ತಿಹಿಡಿದು ಈ ಸದನದ ಗೌರವವನ್ನು ಕಾಪಾಡುವುದರಲ್ಲಿ ತಾವು ಯಶಸ್ವಿಯಾಗಿ ಕಾರ್ಯಗಳನ್ನು

ನಿರ್ವಹಿಸುತ್ತೀರಿ ಎಂದು ನನ್ನ ಭಾವನೆಯಾಗಿದೆ ಹಾಗೂ ನನ್ನ ನಂಬಿಕೆಯಾಗಿದೆ. ಅದೇ ರೀತಿಯಾಗಿ ತಮ್ಮ ಆಳಲು ಉತ್ತರ ಕರ್ನಾಟಕದ ಅಭಿವೃದ್ಧಿಯಲ್ಲಿ ಸ್ವಲ್ಪ ಹಿನ್ನಡೆ ಉಂಟಾಗಬಹುದು ಎನ್ನುವ ಕೊರಗು ಏನಿದೆ. ತಾವು ಆ ಸ್ಥಾನಕ್ಕೆ ಹೋದ ಮೇಲೆ ಬಹುಶಃ ನನಗೆ ಅನ್ನಿಸುತ್ತದೆ. ಇನ್ನೂ ಹೆಚ್ಚಿನ ಕೆಲಸವನ್ನು ತಾವು ಈ ಸ್ಥಾನದಿಂದ ಮಾಡುವುದಕ್ಕೆ ಸಾಧ್ಯವಿದೆ. ಪಕ್ಷಾತೀತವಾಗಿ ಎಲ್ಲಾ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರುಗಳೆಲ್ಲರನ್ನೂ ಕೂಡ ಒಟ್ಟಿಗೆ ತೆಗೆದುಕೊಂಡು ಹೋಗಿ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ಎಂದು ನನ್ನ ಭಾವನೆಯಾಗಿದೆ. ಶ್ರೀಮಾನ್ ಎಸ್.ಎಂ. ಕೃಷ್ಣರವರು ಕೂಡ ಈ ಕುರ್ಚಿಯಲ್ಲಿ ಕುಳಿತಿದ್ದಾಗ ನಮಗೆ ಯಾವುದಾದರೂ ಸಂಕಟಗಳು ಬಂದಾಗ. ಕೆಲಸಗಳು ಆಗದೇ ಇದ್ದಾಗ ಅವರ ಮುಖಾಂತರ ನಾವು ಕೆಲಸಗಳನ್ನು ಮಾಡಿಸಿಕೊಂಡವರಾಗಿದ್ದೇವೆ. ಈಗ ಆ ಸ್ಥಾನದಲ್ಲಿ ತಾವು ಇದ್ದೀರಿ. ಅದು ಕೀರ್ತಿ ಇರತಕ್ಕಂಥ ಒಂದು ಸ್ಥಾನ. ಅದಕೋಸ್ಕರ ಇರತಕ್ಕಂಥ ಸಮಸ್ಯೆಗಳಿಗೆ ತಾವು ಹೆಚ್ಚಿನ ಆದ್ಯತೆ ಕೊಟ್ಟು. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ಹೆಚ್ಚಿನ ಗೌರವವನ್ನು ಕೊಟ್ಟು. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸಮಬಲ ಇರತಕ್ಕಂಥ ವಿರೋಧಪಕ್ಷ ಎಂದು ಹೇಳಿದ್ದಾರೆ. ನಾವು ಈ ಸದನದ ಸದಸ್ಯರಾದ ಮೇಲೆ. ಜನರ ಇಂಥಾದ್ದೇ ಸರ್ಕಾರ ರಚನೆಯಾಗುತ್ತದೆ ಎನ್ನುವ ಭಾವನೆಯಿಂದ ನಮ್ಮನ್ನು ಕಳುಹಿಸಿರುವುದಿಲ್ಲ. ಕಳುಹಿಸುವಾಗ ತಮ್ಮನ್ನು ಪ್ರತಿನಿಧಿಸತಕ್ಕಂಥ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಅಭ್ಯರ್ಥಿಯನ್ನಾಗಿ ಕಳುಹಿಸಿರುತ್ತಾರೆ. ನಾವು ಇಲ್ಲಿ ಬಂದಮೇಲೆ ಎಲ್ಲರೂ ಕೂಡ ಈ ಸದನದ ಸದಸ್ಯರು. ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರೆಲ್ಲರೂ ಒಟ್ಟಿಗೆ ಸೇರಿ ಈ ಸಭೆಯನ್ನು ಈ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ನಾವು collective ಮತ್ತು constructive opposition ಆಗಿ ಸೇರಿಸಿಕೊಂಡು ಕೆಲಸ ಮಾಡುತ್ತೇವೆ ವಿನಃ ನಾವು ವಿರೋಧ ಮಾಡಬೇಕು ಎನ್ನುವ ಚಪಲಕ್ಕೆ ವಿರೋಧ ಮಾಡುವುದಿಲ್ಲ. ಆ ದೃಷ್ಟಿಕೋನ ಇಟ್ಟುಕೊಂಡು ನಮಗೂ ಕೂಡ ಅವಕಾಶಗಳನ್ನು ಈ ಸದನದಲ್ಲಿ ಕೊಟ್ಟು ಮುಂದೆ ಬರುವಂತಹ ದಿವಸಗಳಲ್ಲಿ ಈ ಸದನಕ್ಕೆ ಹೆಸರು ಮತ್ತು ಗೌರವವನ್ನು ತರುತ್ತೀರೆಂದು ತಮ್ಮಲ್ಲಿ ವಿಶ್ವಾಸವನ್ನು ಇಟ್ಟಿದ್ದೇವೆ. ಅದಕ್ಕೆ ನಮ್ಮ ಬೆಂಬಲ ಸದಾ ತಮ್ಮ ಜೊತೆ ಇರುತ್ತದೆ ಎಂದು ಹೇಳುತ್ತಾ. ಈಗ ಒಂದು ಸಮಸ್ಯೆಯನ್ನು ಹೇಳಬೇಕೋ ಬೇಡವೋ ಗೊತ್ತಿಲ್ಲ. ಮೊದಲನೆಯದಾಗಿ ಇರುವಂಥಾದ್ದು. ನಮ್ಮ ಹೈಕೋರ್ಟ್ ಪೀಠ ಏನಾಗಿದೆ ಎಂದರೆ ಬಿಜಾಪುರದಿಂದ ತೆಗೆದುಕೊಂಡು ಹೋಗಿ ಅದನ್ನು ಗುಲ್ಬರ್ಗ jurisdictionಗೆ ಹಾಕಿದ್ದಾರೆ. ನಮ್ಮ divisional head-quarter

ಇರತಕ್ಕಂಥಾದ್ದು ಬೆಳಗಾಂ ಮತ್ತು ಹುಬ್ಬಳ್ಳಿಗೆ ಸೇರತಕ್ಕಂಥಾದ್ದು. ಈ ವಿಷಯವನ್ನು ತಾವು ಬಹಳ ಚೆನ್ನಾಗಿ ಬಲ್ಲಿರಿ. ಪ್ರಥಮವಾಗಿ ಅದನ್ನು ತಮ್ಮ ಪೀಠದ ಮುಖೇನವಾಗಿ ನಿವಾರಣೆ ಮಾಡತಕ್ಕಂಥಾದ್ದು ನಮ್ಮ jurisdiction ಅನ್ನು ಹುಬ್ಬಳ್ಳಿಗೆ ಸೇರಿಸುವಂತಹ ಕೆಲಸವನ್ನು ತಾವು ಮಾಡಬೇಕು ಎಂದು ನಾನು ವಿನಂತಿಯನ್ನು ಮಾಡಿಕೊಂಡು ತಮಗೆ ಆ ದೇವರು ಯಶಸ್ಸನ್ನು ಕೊಡಲಿ. ಆರೋಗ್ಯ ಕೊಡಲಿ ಎಂದು ಹೇಳಿ. ಇನ್ನು ಹೆಚ್ಚು ಕೀರ್ತಿಗೆ ಪಾತ್ರರಾಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) ; ಸನ್ಮಾನ್ಯ ಅಧ್ಯಕ್ಷರೆ. ತಾವು 13ನೇ ವಿಧಾನಸಭೆಗೆ ಅವಿರೋಧವಾಗಿ ಸಭಾಧ್ಯಕ್ಷರಾಗಿ ಆಯ್ಕೆ ಆಗಿರುವುದು ತುಂಬಾ ಸಂತೋಷದ ಸಂಗತಿ ಮತ್ತು ತಮಗೆ ನನ್ನ ವೈಯಕ್ತಿಕವಾದಂತಹ ಅಭಿನಂದನೆಗಳು. ಮಾನ್ಯ ಅಧ್ಯಕ್ಷರೆ. ತಾವು ವಿದ್ಯಾರ್ಥಿ ದೆಸೆಯಿಂದ ಜನಪರವಾದಂತಹ ನಿಲುವುಗಳನ್ನು ಪ್ರತಿಪಾದನೆ ಮಾಡಿ. ವಕೀಲರಾಗಿ. ಈ ಮನೆಯ ಸದಸ್ಯರಾಗಿ. ವಿರೋಧ ಪಕ್ಷದ ನಾಯಕರಾಗಿ. ರಾಜ್ಯದ ಮಂತ್ರಿಯಾಗಿ ಮತ್ತು ಅತ್ಯುನ್ನತವಾದ ಸಂವಿಧಾನಿಕವಾದ ವೇದಿಕೆಯಾದಂತಹ ವಿಧಾನಸಭೆಯ ಅಧ್ಯಕ್ಷರಾಗಿ ಇವತ್ತು ಪೀಠವನ್ನು ಅಲಂಕರಿಸಿದ್ದೀರಿ. ನಮಗೆ ಮುಂದೆ ಏನೇನು ಕೆಲಸವಾಗಬೇಕು ಎಂದು ಹೇಳುವಂತಹ ಸಮಯ ಇದಲ್ಲ. ನಾನು ಈ ವಿಧಾನಸಭೆಗೆ 1985ರಲ್ಲಿ ಮೊದಲನೇ ಬಾರಿಗೆ ಪ್ರವೇಶ ಮಾಡಿದೆ. ಅಂದಿನಿಂದ ಇಂದಿನವರೆಗೆ ವಿಧಾನಸಭೆಯ ಅಧ್ಯಕ್ಷರನ್ನು ಸಂಭೋಧಿಸಿ ಮಾತನಾಡುವಾಗ. ಉಲ್ಲೇಖ ಮಾಡುವಂತಹ ಮೊದಲನೇ ಹೆಸರು ಸನ್ಮಾನ್ಯ ವೈಕುಂಠ ಬಾಳಿಗರವರು. ಮಾನ್ಯ ವೈಕುಂಠ ಬಾಳಿಗರವರು ಹೆಸರನ್ನು ಎಲ್ಲರು ಏಕೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ ಎಂದರೆ. ಈ ಒಂದು ಆಸನಕ್ಕಿಂತ ತಾವು ಕುಳಿತಿರುವಂತಹ ಆಸನವನ್ನು ಎತ್ತರದಲ್ಲಿ ಏಕೆ ಇಟ್ಟಿದ್ದಾರೆ ಎಂದರೆ ಆ ಸ್ಥಾನ. ಆ ಪೀಠ ಜಾತಿ-ಧರ್ಮ ಎಲ್ಲವನ್ನು ಮೀರಿ. ಪಕ್ಷವನ್ನು ಮೀರಿದಂತಹ ನಡವಳಿಕೆ ಮುಖಾಂತರ ರಾಜ್ಯದ ಅಭಿವೃದ್ಧಿಯನ್ನು ಜನರ ಹಿತವನ್ನು ಕಾಯ್ದುಕೊಳ್ಳತಕ್ಕಂಥ ಒಂದು ಸಂವಿಧಾನಿಕವಾದಂತಹ ಜವಾಬ್ದಾರಿ ಆ ಪೀಠ ಮತ್ತು ಅಧ್ಯಕ್ಷರಿಗೆ ಇರುವುದರಿಂದ ಅದೊಂದು ಮಹತ್ತರವಾದಂತಹ ಅಧಿಕಾರವಾಗಿದೆ. ತಾವು ಅತ್ಯಂತ ಕಠಿಣವಾದಂಥ ಸಂದರ್ಭದಲ್ಲಿ ವಿಧಾನಸಭೆಯ ಅಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದೀರಿ. ಆ ಕಡೆ ಭಾರತೀಯ ಜನತಾ ಪಕ್ಷದಿಂದ 110 ಜನ ಸದಸ್ಯರು ಗೆದ್ದಿದ್ದಾರೆ. ಮತ್ತೆ ಆರು ಜನ ಶಾಸಕರು ಪಕ್ಷೇತರ ಅಭ್ಯರ್ಥಿಗಳಾಗಿ ಗೆದ್ದಿದ್ದಾರೆ. ವಿರೋಧ ಪಕ್ಷದಲ್ಲಿ 108 ಸದಸ್ಯರುಗಳಿದ್ದಾರೆ. 1983ನೇ ಇಸವಿಯಲ್ಲಿ

ದಿವಂಗತ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಸರ್ಕಾರವನ್ನು ರಚನೆ ಮಾಡಿದಂಥ ಸಂದರ್ಭದಲ್ಲಿ ಇದ್ದಂಥ ರಾಜಕೀಯ ಪರಿಸ್ಥಿತಿ ಹೆಚ್ಚು ಕಡಿಮೆ ಈಗಲೂ ಹಾಗೆ ಇದೆ. ಇಂತಹ ಕಠಿಣವಾದಂಥ ಸಂದರ್ಭದಲ್ಲಿ. ಈಗ 90ಕ್ಕೂ ಹೆಚ್ಚು ಸದಸ್ಯರು ಮೊದಲನೇ ಬಾರಿಗೆ ವಿಧಾನ ಸಭೆಯನ್ನು ಪ್ರವೇಶ ಮಾಡಿದ್ದಾರೆ. ಅವರಿಗೆ ರಾಜ್ಯಾಂಗ ಬದ್ಧವಾದಂಥ ನಡವಳಿಕೆಯುನ್ನು ತಿಳಿಸಿ ಕೊಡುವುದರ ಮುಖಾಂತರ ಆರೋಗ್ಯಕರವಾದಂಥ ಚರ್ಚೆಗಳಲ್ಲಿ ಭಾಗವಹಿಸಿ. ರಾಜ್ಯದ ಅಭಿವೃದ್ಧಿ ಮತ್ತು ಜನರ ಹಿತವನ್ನು ಸಂರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ತಮ್ಮ ಮೇಲೆ ಇದೆ. ತಾವು ವಿದ್ಯಾರ್ಥಿ ದಿಶೆಯಿಂದ ಇಲ್ಲಿಯವರೆಗೆ ಪಡೆದಂಥ ಅನುಭವ ಮತ್ತು ಸಂವಿಧಾನಿಕವಾದಂಥ ಜ್ಞಾನ ಸಂಪತ್ತು. ಎಲ್ಲವನ್ನೂ ಬಳಸಿ ಪಕ್ಷವನ್ನು ಮೀರಿ. ರಾಜ್ಯ ಅಭಿವೃದ್ಧಿಯತ್ತ ನಡೆಯಬೇಕಾದರೆ ಸರ್ಕಾರ ಮತ್ತು ವಿರೋಧ ಪಕ್ಷಗಳು ಸಂಘಟನಾತ್ಮಕವಾದಂಥ ವಿಷಯಗಳನ್ನು ಮಂಡನೆ ಮಾಡುವ ಮುಖಾಂತರ. ಅಭಿವೃದ್ಧಿಯತ್ತ ಗಮನ ಕೊಡುವುದರ ಮುಖಾಂತರ. ತಮ್ಮ ನಿಲುವು ಪಕ್ಷವನ್ನು ಮೀರಿದಂಥ ನಡವಳಿಕೆಗಳ ಮುಖಾಂತರ ಮತ್ತೊಮ್ಮೆ ಸನ್ಮಾನ್ಯ ವೈಕುಂಠ ಬಾಳಿಗರವರ ಅಧಿಕಾರವನ್ನು. ಅವರ ನಡವಳಿಕೆಯನ್ನು ಅನುಸರಿಸುವ ರೀತಿಯಲ್ಲಿ ತಾವು ಜವಾಬ್ದಾರಿಯಿಂದ ನಡೆಸಬೇಕು. ತಮಗೆ ಆ ಶಕ್ತಿ. ಸಾಮಾರ್ಥ್ಯ ಇದೆಯೆಂದು ಹೇಳಿ. ನಾನು ತಮಗೆ ಶುಭವನ್ನು ಕೋರಿ. ಈ ವಿಧಾನ ಸಭೆ ರಾಜ್ಯಾಂಗ ಬದ್ಧವಾದಂಥ ನಡವಳಿಕೆಗಳ ಮುಖಾಂತರ. ವೈಜ್ಞಾನಿಕ ವಿಚಾರಗಳ ಮುಖಾಂತರ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡ್ಯೋಯುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಿ. ತಮಗೆ ಆ ಶಕ್ತಿ ಲಭಿಸಲಿ ಎಂದು ಹೇಳುತ್ತಾ. ತಮಗೆ ಶುಭವಾಗಲಿ ಎಂದು ಹೇಳುತ್ತಾ. ನಾನು ತಮಗೆ ಧನ್ಯವಾದಗಳನ್ನು ಹೇಳುತ್ತಾ. ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಮಾಡಾಳ್ ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಇದೊಂದು ವಿಶೇಷವಾದಂಥ ಸಭೆ. ಏಕೆಂದರೆ ಆಡಳಿತ ಪಕ್ಷದವರು 116 ಜನ ಸದಸ್ಯರಿದ್ದು. 108 ಜನ ಸದಸ್ಯರು ವಿರೋಧ ಪಕ್ಷದವರು ಇರುವಂಥಾದ್ದು ಇದೊಂದು neck to neck ಇರುವಂಥ ಇಲ್ಲಿ ಒಂದು ಆರೋಗ್ಯಕರವಾದ ಚರ್ಚೆ ನಡೆದು. ಈ ಸದನದಲ್ಲಿ ಒಳ್ಳೆಯ ಶಾಸನ ರೂಪಿತವಾಗುವುದಕ್ಕೆ ಜನರು ಜನಾದೇಶವನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಕರ್ನಾಟಕ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿ, ಈ ರಾಜ್ಯದಲ್ಲಿ ತಾವುಗಳು ಭಾರತೀಯ ಜನತಾ ಪಕ್ಷವನ್ನು ಸಂಘಟಿಸಿ, ಈ ದಿವಸ ಭಾರತೀಯ ಜನತಾ ಪಕ್ಷದ ಸರ್ಕಾರ ಮಾನ್ಯ

ಯಡಿಯೂರಪ್ಪನವರ ನಾಯಕತ್ವದಲ್ಲಿ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ. ತಾವು ಈ ಎತ್ತರವಾದ ಸ್ಥಾನದಲ್ಲಿ ಕುಳಿತು. ಸಭಾಧ್ಯಕ್ಷರಾಗಿ ಇರುವಂಥಾದ್ದು. ನಮಗೆಲ್ಲರಿಗೂ ಸಂತೋಷಕರವಾದಂಥ ವಿಚಾರವಾಗಿದೆ. ತಾವು ಈ ರಾಜ್ಯದಲ್ಲಿ ಕಂದಾಯ ಸಚಿವರಾಗಿ ಮಾಡಿದಂಥ ಸೇವೆ ನಿಜಕ್ಕೂ ಮೆಚ್ಚುವಂಥಾದ್ದು. ಅದೇ ರೀತಿ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿರುವಂಥಾದ್ದು...

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ. ಒಂದು ನಿಮಿಷ. ಮಾನ್ಯ ಸದಸ್ಯರು ತಮ್ಮ ಚೇರನಲ್ಲಿ ಇದ್ದಾರೋ. ಇಲ್ಲವೋ ಗೊತ್ತಿಲ್ಲ. ಮಾನ್ಯ ಸದಸ್ಯರ ಚೇರ್ ಯಾವುದು? ಅವರು ತಮ್ಮ ಚೇರ್‌ಗೆ ಹೋಗಬೇಕು.

ಶ್ರೀ ಮಾಡಾಳ್ ವಿರೂಪಾಕ್ಷಪ್ಪ : ಇಲ್ಲೇ ಕೊಟ್ಟಿದ್ದಾರೆ. ನಾನು ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು ; ಮಾನ್ಯ ಮಾಡಾಳ್ ವಿರೂಪಾಕ್ಷಪ್ಪನವರೆ. ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಪ್ರಸ್ತಾಪ ಮಾಡಿದ ವಿಷಯಗಳನ್ನೇ ಮತ್ತೆ ಪ್ರಸ್ತಾಪ ಮಾಡಬೇಡಿ. ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವುದಕ್ಕೆ ಇದ್ದಾರೆ. ಆದುದರಿಂದ ಎಲ್ಲಾ ಸದಸ್ಯರು ಸಂಕ್ಷಿಪ್ತವಾಗಿ ಮಾತನಾಡಬೇಕೆಂದು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಮಾಡಾಳ್ ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ. ಆಯಿತು. ನಾನು ಎರಡು ನಿಮಿಷಗಳಲ್ಲಿ ಮಾತನಾಡುತ್ತೇನೆ. ಮಾನ್ಯ ವಿರೋಧಪಕ್ಷದವರು 108 ಜನ ಸದಸ್ಯರಿದ್ದರೂ ಸಹ ಸರ್ವಾನುಮತದಿಂದ ತಮ್ಮನ್ನು ಆಯ್ಕೆ ಮಾಡಿದ್ದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಈ ರಾಜ್ಯದ ಮುಖ್ಯಮಂತ್ರಿಯಾಗಿ. ಈ ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿ ಮಾಡಬೇಕೆಂಬ ಕನಸನ್ನು ಹೊತ್ತಿರುವಂಥ ಮಾನ್ಯ ಯಡಿಯೂರಪ್ಪನವರು ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಒಳ್ಳೆಯ ಆಡಳಿತವನ್ನು ನಡೆಸಲು ವಿರೋಧಪಕ್ಷದವರು ಈ ದಿವಸ ಯಾವ ರೀತಿಯಲ್ಲಿ ತಮ್ಮ ಸಹಕಾರವನ್ನು ನೀಡಿ ಸಭಾಧ್ಯಕ್ಷರನ್ನಾಗಿ ಮಾಡಲು ಸರ್ವಾನುಮತದಲ್ಲಿ ಆಯ್ಕೆಗೆ ಅನುಮತಿಯನ್ನು ಕೊಟ್ಟಿದ್ದೀರಿ. ಅದೇ ರೀತಿಯಾಗಿ ಆರೋಗ್ಯಕರವಾದಂಥ ಬೆಳವಣಿಗೆ ಈ ಸದನದಲ್ಲಿ ಬೆಳೆದು. ಈ ರಾಜ್ಯ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಲಿ ಎಂದು ಆಶಿಸುತ್ತಾ. ನಮ್ಮ ಸಭಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ. ಈ ಸದನಕ್ಕೂ ಮತ್ತು ಮಾನ್ಯ ಸಭಾಧ್ಯಕ್ಷರಿಗೂ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ (ಸಚಿವರು) ; ಮಾನ್ಯ ಅಧ್ಯಕ್ಷರೆ. ತಾವು 13ನೇ ವಿಧಾನಸಭೆಗೆ ಅವಿರೋಧವಾಗಿ ಸಭಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಈ ಒಂದು ಸಂದರ್ಭದಲ್ಲಿ ಆಯ್ಕೆ ಮಾಡುವ ಸಲುವಾಗಿ ಸೂಚನೆಯನ್ನು ತಂದಿರುವಂಥ ಈ ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿರುವಂಥ ಸನ್ಮಾನ್ಯ ಯಡಿಯೂರಪ್ಪನವರಿಗೆ ಹಾಗೂ ಅವಿರೋಧವಾಗಿ ಆಯ್ಕೆ ಮಾಡುವುದಕ್ಕೆ ಸಹಕಾರ ಕೊಟ್ಟಂಥ ವಿರೋಧ ಪಕ್ಷದ ನಾಯಕರಾಗಿರುವಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ. ಹಾಗೂ ಸದನದ ಎಲ್ಲಾ ಸದಸ್ಯರಿಗೆ ನಾನು ಅಭಿನಂದನೆಗಳನ್ನು ಹೇಳಬಯಸುತ್ತೇನೆ. ನಾವು 1999ರಲ್ಲಿ ಪ್ರಥಮ ಬಾರಿಗೆ ಶಾಸಕನಾಗಿ ಆಯ್ಕೆಯಾದಂಥ ಸಂದರ್ಭದಲ್ಲಿ ತಾವು ಈ ಸದನದಲ್ಲಿ ವಿರೋಧಪಕ್ಷದ ನಾಯಕರಾಗಿದ್ದೀರಿ. ತಮ್ಮ ನಾಯಕತ್ವದಲ್ಲಿ ತಮಗೆ ಇರುವಂಥ ಸಹನೆ. ತಾಳ್ಮೆ ಎಲ್ಲವನ್ನು ತಾವು ಅಳವಡಿಸಿಕೊಂಡು. ಯಶಸ್ವಿಯಾಗಿ ನಾಲ್ಕು ವರ್ಷ ಶಾಸಕನಾಗಿ ಜನಪರ ಕೆಲಸಗಳನ್ನು ಮಾಡುವುದಕ್ಕೆ ತಾವು ಮಾರ್ಗದರ್ಶನ ಮಾಡಿದ್ದನ್ನು ನಾನು ಎಂದೂ ಮರೆಯುವುದಿಲ್ಲ. ಉತ್ತರ ಕರ್ನಾಟಕವೆಂದರೆ ಶರಣರಿಗೆ. ಸಂತರಿಗೆ ಜನ್ಮ ಕೊಟ್ಟಿರುವಂಥ ಪವಿತ್ರವಾದ ಸ್ಥಳವಾಗಿದೆ. ಅದರಲ್ಲೂ ಹುಬ್ಬಳ್ಳಿಯಲ್ಲಿ ಪೂಜ್ಯ ಸಿದ್ಧಾರೂಢರು ಹುಟ್ಟಿದಂಥ ಸ್ಥಳದಲ್ಲಿ ತಾವು ಹುಟ್ಟಿ ಆ ಒಂದು ಶರಣರ ಪರಂಪರೆಯನ್ನು ಹೊಂದಿಕೊಂಡು. ತಮ್ಮ ತಂದೆಯವರ ಕಾಲದಿಂದಲೂ ಸಾಮಾಜಿಕ ಸೇವೆಯನ್ನು ನಿರಂತರವಾಗಿ ಮಾಡಿಕೊಂಡು ಬಂದು ತಾವು ಹಂತ ಹಂತವಾಗಿ ಮೇಲೆ ಬಂದು. ಈ ಹುದ್ದೆಯನ್ನು ಅಲಂಕರಿಸಿರುವುದಕ್ಕೆ ತಮ್ಮಲ್ಲಿರುವಂಥ ಸಹನಾ ಶಕ್ತಿಯೇ ಕಾರಣವೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ 13ನೇ ವಿಧಾನ ಸಭೆ ಬಹಳ ವಿಶೇಷವಾಗಿರುವಂಥಾದ್ದು. ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಬಂದಿರುವಂಥಾದ್ದು. ಅದೇ ಪ್ರಕಾರ ಈ ಸದನದಲ್ಲಿ 108 ಜನ ವಿರೋಧಪಕ್ಷದ ಶಾಸಕರು ಆಯ್ಕೆಯಾಗಿದ್ದು. ಪ್ರಜಾಪ್ರಭುತ್ವದಲ್ಲಿ ಯಶಸ್ವಿಯಾಗಿ ಈ ಸದನದಲ್ಲಿ ಚರ್ಚೆಯ ಮೂಲಕ ಈ ನಾಡಿನ ಜನತೆಗೆ ಒಳ್ಳೆಯ ಯೋಜನೆಗಳನ್ನು ಕೊಡುವ ಸಲುವಾಗಿ ಈ ನಾಡಿನ ಐದೂವರೆ ಕೋಟಿ ಜನತೆ ಒಂದು ಒಳ್ಳೆಯ ಜನಾದೇಶವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಹೊಸದಾಗಿ ಕ್ಷೇತ್ರ ಪುನರ್ ವಿಂಗಡಣೆಯಾದ ಮೇಲೆ ಚುನಾವಣೆ ಆಯುಕ್ತರಾದಂಥ ಗೋಪಾಲಸ್ವಾಮಿಯವರು ಚುನಾವಣೆ ನಡೆಸಿದ್ದಾರೆ. ಸ್ವಾತಂತ್ರ್ಯ ಸಿಕ್ಕಿ 60 ವರ್ಷಗಳಾದರೂ ಕೂಡ ಚುನಾವಣಾ ವ್ಯವಸ್ಥೆ ಪೂರ್ಣ ಹದಗೆಟ್ಟು ಹೋಗಿತ್ತು. ಸಾಮಾನ್ಯ ಜನರು ಚುನಾವಣೆಯಲ್ಲಿ

ಆರಿಸಿ ಬರುವುದು ಕನಸಿನ ಮಾತಾಗಿತ್ತು. ಅಂತಹ ಸಂದರ್ಭದಲ್ಲಿ ಈ ಚುನಾವಣೆಯಲ್ಲಿ ಬಹಳಷ್ಟು ಜನ ಗೂಂಡಾಗಿರಿಗೆ. ಹಣಕ್ಕೆ ಬಲಿಯಾಗದೆ ಕರ್ನಾಟಕದ ಜನತೆ ಸತ್ಯಕ್ಕೆ. ನ್ಯಾಯಕ್ಕೆ ಬೆಲೆಯನ್ನು ಕೊಟ್ಟು. ಒಳ್ಳೆಯ ನಿಲುವನ್ನು ತಂದದ್ದಕ್ಕೆ. ಚುನಾವಣಾ ಆಯುಕ್ತರಿಗೂ ನಾವು ಧನ್ಯವಾದವನ್ನು ಹೇಳಬೇಕು. ಇಂತಹ ಸಂದರ್ಭದಲ್ಲಿ ತಾವು ಈ ಒಂದು ಉನ್ನತ ಹುದ್ದೆಯನ್ನು ಅಲಂಕರಿಸಿದ್ದೀರಿ. ಈ ಸಂದರ್ಭದಲ್ಲಿ ಕೂಡ ಕರ್ನಾಟಕದ ಜನತೆ ಈ ಸದನದಿಂದ ಒಳ್ಳೆಯ ನಿರೀಕ್ಷೆಯನ್ನು ಇವತ್ತು ಬಯಸುತ್ತಿದ್ದಾರೆ. ಇವೊತ್ತು ನಾಡಿನ ಜನತೆ ಒಳ್ಳೆಯ ಆಡಳಿತವನ್ನು ಬಯಸುತ್ತಿದ್ದಾರೆ. ಕರ್ನಾಟಕ ವಿಧಾನಸಭೆಯು ಯಾವಾಗಲೂ ಒಂದು ಸತ್ಸಂಪ್ರದಾಯಕ್ಕೆ ಹೆಸರಾಗಿರುವಂಥಾದ್ದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾವು ಹಲವಾರು ಕಡೆಗಳಲ್ಲಿ ನೋಡಿದರೆ ಅದು ಪಾರ್ಲಿಮೆಂಟ್ ಇರಬಹುದು. ಒರಿಸ್ಸಾ ಇರಬಹುದು. ಬೇರೆ ಬೇರೆ ರಾಜ್ಯಗಳ ಸದನದಲ್ಲಿ ಶಾಸಕರು ಬಡಿದಾಡುವಂಥಾದ್ದು. ಮೈಕ್ ಎತ್ತಿ ಹೊಡೆಯುವಂಥ ದೃಶ್ಯವನ್ನು ನೋಡಿದರೆ. ನಮ್ಮ ಇಡೀ ದೇಶದ ಜನತೆ ನಾಚಿಕೆ ಪಡುವಂಥ ದೃಶ್ಯವನ್ನು ನಾವು ಹಲವಾರು ಬಾರಿ ನೋಡಿದ್ದೇವೆ. ಆ ರೀತಿ ಆಗಬಾರದು. ಏಕೆಂದರೆ ಅಣ್ಣ ಬಸವಣ್ಣನವರು 12ನೇ ಶತಮಾನದಲ್ಲಿ ಈ ಸಮಾಜಕ್ಕೆ ನ್ಯಾಯ ಕೊಡಬೇಕು. ಸಮಾನತೆ ತರಬೇಕೆಂಬ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಆಗಲೇ ಆಚರಣೆಗೆ ತಂದಿರುವಂಥ ನಾಡು ಇದು. ಇಡೀ ದೇಶದ ಜನತೆ ಕರ್ನಾಟಕ ರಾಜ್ಯದ ಮಾದರಿಯನ್ನು ಅಪೇಕ್ಷೆ ಪಡುತ್ತಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ಅದು ಆಡಳಿತ ಪಕ್ಷವಿರಬಹುದು. ವಿರೋಧಪಕ್ಷವಿರಬಹುದು. ಅವರೆಲ್ಲರ ಜೊತೆಗೆ ಒಂದು ಪರಿಪೂರ್ಣವಾದ ಚರ್ಚೆಯಾಗಿ. ಈ ನಾಡಿನ ಜನತೆಗೆ ಒಂದು ನ್ಯಾಯ ಸಿಗಬೇಕು. ಜನರು ಸುಖವಾಗಿ ಬದುಕುವಂಥಾದ್ದು ಆಗಬೇಕೆಂಬ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಇವೊತ್ತು ಬಿಜಾಪುರದ ಸಂಚಾರಿ ಹೈಕೋರ್ಟ್ ಪೀಠದ ಬಗ್ಗೆ ನಮ್ಮ ಬಿಜಾಪುರದ ಜನತೆ ಇಲ್ಲಿಗೆ ಬಂದಿದ್ದಾರೆ. ತಾವು ತಮ್ಮ ನೇತೃತ್ವದಲ್ಲಿ ಈ ಸದನವನ್ನು ಯಶಸ್ವಿಯಾಗಿ ನಡೆಸಿ. ನಮ್ಮ ನಾಡಿನ ಜನತೆಗ ಒಂದು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ತಾವು ಸಹಕಾರ ಕೊಡಬೇಕೆಂದು ತಮಗೆ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗಾಗಲೇ ಸಮಯ ಬಹಳವಾಗಿದೆ. ಸದಸ್ಯರು ಸಂಕ್ಷಿಪ್ತವಾಗಿ ಮಾತನಾಡಬೇಕು.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ) : ಗೌರವಾನ್ವಿತ

ಅಧ್ಯಕ್ಷರೆ. ನೂತನವಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವ ನಿಮಗೆ ಅಭಿನಂದನೆಗಳನ್ನು ಹೇಳುತ್ತೇನೆ. ಈ ಒಂದು ಸದನವನ್ನು ಎರಡನೇ ಬಾರಿ ಪ್ರತಿನಿಧಿಸತಕ್ಕಂಥ ಅವಕಾಶ ಲಭಿಸಿರುವ ನನಗೆ, ತಮ್ಮ ಪಾತ್ರ ತಮ್ಮ ಸ್ಥಾನ. ಬಹುಶಃ ಹಲವಾರು ಕನಸುಗಳನ್ನು ಹೊತ್ತಿರತಕ್ಕಂಥ ನನ್ನಂಥ 224 ಜನ ಶಾಸಕರ ಧ್ವನಿಯಾಗಲಿಕ್ಕೆ. ನಾವು ನಮ್ಮ ಕ್ಷೇತ್ರಗಳ ಮತ್ತು ರಾಜ್ಯದ ಎಲ್ಲಾ ಸಮಸ್ಯೆಗಳ ಬಗ್ಗೆ ಪರಿಹಾರವನ್ನು ಕಾಣಬೇಕು ಎನ್ನುವ ಹೊಂಗನಸನ್ನು ಹೊತ್ತಿರತಕ್ಕಂಥ ಈ ಸಂದರ್ಭದಲ್ಲಿ ಆ ಅಧ್ಯಕ್ಷೀಯ ಪೀಠ ಆಡಳಿತ ಪಕ್ಷದ ಕೈಗೊಂಬೆಯಾಗದೇ. ಪಕ್ಷಾತೀತವಾಗಿ ಈ ರಾಜ್ಯದ ಹಿತದೃಷ್ಟಿಯಿಂದ. ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ಕೆಲಸ ಮಾಡುವ ದಿಕ್ಕಿನಲ್ಲಿ ಕೆಲಸ ಮಾಡುತ್ತೀರಿ ಎನ್ನತಕ್ಕಂಥ ಸಂಪೂರ್ಣ ವಿಶ್ವಾಸವನ್ನು ನಿಮ್ಮ ಮೇಲೆ ಈ ಸಂದರ್ಭದಲ್ಲಿ ವ್ಯಕ್ತಪಡಿಸಲಿಕ್ಕೆ ನಾನು ಬಯಸುತ್ತೇನೆ. ಏಕೆಂದರೆ. ಕಳೆದ ಬಾರಿ ಮೂರು ವರ್ಷ ಎರಡು ತಿಂಗಳು ನಡೆದಂಥ ಅವಧಿಯಲ್ಲಿ ನಾವು ಎಷ್ಟೋ ಸಮಸ್ಯೆಗಳನ್ನು ಎತ್ತಬೇಕೆನ್ನುವ ಸಂದರ್ಭದಲ್ಲಿ ಅವುಗಳನ್ನು ಇಲ್ಲಿ ಮಾತನಾಡಲಿಕ್ಕೂ, ಹೇಳಲಿಕ್ಕೂ ಆಗದೆ. ಎಷ್ಟೋ ವಿಷಯಗಳು ಚರ್ಚೆಯಾಗದೆ ಹಾಗೆಯೇ ಇಲ್ಲಿ ಪಾಸ್ ಆಗಿ ನಾವು ಜನಗಳ ಹತ್ತಿರ ಹಲವಾರು ಬಾರಿ ಛೀಮಾರಿ ಹಾಕಿಸಿಕೊಂಡಿರತಕ್ಕಂಥ ಉಲ್ಲೇಖಗಳಿವೆ. ಈ ಸಂದರ್ಭದಲ್ಲಿ ನಾನು ಬಯಸುವುದಾದರೂ ಇಷ್ಟೆ. ತಮ್ಮನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ತಾವು ಬಹಳ ಶಾಂತಮೂರ್ತಿಗಳು. ತ್ಯಾಗಮಯಿಗಳು. ಏಕೆಂದರೆ. ಇವತ್ತು ನೀವು ತ್ಯಾಗ ಮಾಡಿಯೇ ಆ ಒಂದು ಸ್ಥಾನವನ್ನು ಅಲಂಕರಿಸಿದ್ದೀರಿ. ತಾವು ಆ ಸ್ಥಾನವನ್ನು ಒಪ್ಪುತ್ತಿಲ್ಲ ಎನ್ನುವುದನ್ನು ನಾವು ಪತ್ರಿಕೆಗಳಲ್ಲಿ ಓದಿದಾಗ. ಅದನ್ನು ಕೇಳಿದಾಗ. ನಮಗೆ ಎಲ್ಲೋ ಒಂದು ಕಡೆ. ಏಕೆ ಹೀಗೆ ಮಾಡಿದರು ಅನ್ನಿಸಿತು. ಆಮೇಲೆ ನೀವು ಒಪ್ಪಿಕೊಂಡರು ಎಂದ ತಕ್ಷಣ ನನಗೆ ನೆನಪಾದದ್ದು ಕಸ್ತೂರಿ ನಿವಾಸದಲ್ಲಿನ ಡಾ: ರಾಜ್‌ಕುಮಾರ್‌ರವರು. ಏಕೆಂದರೆ, ತಾವು ಕಷ್ಟಪಟ್ಟು ಕಟ್ಟಿದಂಥ ಒಂದು ಮನೆಯಲ್ಲಿ ನೀವು ಬಯಸಿದ್ದು ಸಿಗಲಿಲ್ಲ. ಆದರೂ ನೀವು ತ್ಯಾಗ ಮಾಡಿ. ಈ ರಾಜ್ಯದ ಹಿತದೃಷ್ಟಿಯಿಂದ ಆ ಸ್ಥಾನಕ್ಕೆ ಬಂದಿದ್ದೀರಿ. ನಿಮಗೆ ಗೊತ್ತಿರಬಹುದು. ಆ ಒಂದು ಸ್ಥಾನ ಮುಖ್ಯಮಂತ್ರಿಗಳಿಗಿಂತ ಬಹಳ ಜವಾಬ್ದಾರಿ ಇರತಕ್ಕಂಥ ಸ್ಥಾನ. ನೀವು ಆ ಸ್ಥಾನದಲ್ಲಿದ್ದುಕೊಂಡು ರಾಜ್ಯದ ಇಡೀ 224 ಕ್ಷೇತ್ರಗಳನ್ನು ಸರ್ವತೋಮುಖ ಅಭಿವೃದ್ಧಿಯ ದಿಕ್ಕಿನಲ್ಲಿ ಕೆಲಸ ಮಾಡಬೇಕು. ಕೇವಲ ಉತ್ತರ ಕರ್ನಾಟಕ ಮಾತ್ರವಲ್ಲ. ಅದು ದಕ್ಷಿಣ ಕರ್ನಾಟಕ ಇರಬಹುದು. ರೆವಿನ್ಯೂ ಕೊಡತಕ್ಕಂಥ ನಗರ

ಪ್ರದೇಶಗಳಿರಬಹುದು. ಇವೆಲ್ಲವನ್ನು ಕಾಪಾಡತಕ್ಕಂಥ ದಿಕ್ಕಿನಲ್ಲಿ ತಾವು ಯಶಸ್ವಿಯಾಗಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನ ಈ ಸಂದರ್ಭದಲ್ಲಿ ಹೇಳುತ್ತೇನೆ. ಕಿತ್ತು ತಿನ್ನುತ್ತಿರತಕ್ಕಂಥ ಸಮಸ್ಯೆಗಳ ಬಗ್ಗೆ ನಾವು ಆಗಲೇ ಹೇಳಿದ್ದೆವು. ಕಳೆದ ಬಾರಿ ಯುವ ಶಾಸಕರಾದ ನಾವು ಒಂದು ವೇದಿಕೆಯನ್ನೇ ಮಾಡಿ ಕೊಂಡಿದ್ದೆವು. ಏಕೆಂದರೆ ನಮಗೆ ಇಲ್ಲಿ ಧ್ವನಿ ಎತ್ತಲಿಕ್ಕೆ ಅವಕಾಶಗಳು ಸಿಗುತ್ತಿರಲಿಲ್ಲ. ಈ ವೇದಿಕೆಯ ಮುಖೇನ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ದಯವಿಟ್ಟು ಈ ಬಾರಿ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಡಬೇಕು. ಇಲ್ಲಿ ವಿಚಾರ ಮಂಥನವಾಗಿ. ಅನುಭವ ಮಂಟಪದ ಮುಖೇನ ಆಡಳಿತದಲ್ಲಿ ತುಕ್ಕು ಹಿಡಿದಿರತಕ್ಕಂಥಾದ್ದನ್ನು ಸರಿ ಮಾಡುವ ದಿಕ್ಕಿನಲ್ಲಿ ಮತ್ತು ಮಂದಗತಿಯಲ್ಲಿ ಆಗುತ್ತಿರುವ ಈ ವ್ಯವಸ್ಥೆಯನ್ನು ಸರಿಪಡಿಸುವ ದಿಕ್ಕಿನಲ್ಲಿ ತಾವು ಪ್ರಮುಖ ಸ್ಥಾನವನ್ನು ವಹಿಸುತ್ತೀರಿ ಎನ್ನುವ ಮಾತನ್ನು ಹೇಳುತ್ತಾ. ತಮ್ಮ ಸ್ನೇಹಮಯ ಮತ್ತು ಶಾಂತ ಸ್ವಭಾವ ಮತ್ತು ಸಂಸ್ಕಾರ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಒಂದು ಮಾತಿದೆ. ಶಾಸನಗಳು ಮಾಡದ್ದ ನ್ನು ಸಂಸ್ಕಾರಗಳು ಮಾಡಬಲ್ಲವು ಎಂದಿದೆ. ಆ ರೀತಿ ತಾವು ಮಾಡುತ್ತೀರಿ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೊಮ್ಮೆ. ತಮ್ಮ ಈ ಸ್ಥಾನದಿಂದ ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪಕ್ಷಾತೀತವಾಗಿ ನೆರವು ಸಿಗುತ್ತದೆ ಎಂದು ಭಾವಿಸಿದ್ದೇನೆ. ಆಗಲೇ ಮಾತನಾಡಿದಂಥ ಒಬ್ಬರು ಹೇಳುತ್ತಿದ್ದರು. ಹಣಬಲ. ಭುಜಬಲ ಈ ಒಂದು ಚುನಾವಣೆಯಲ್ಲಿ ಆಯಿತು. ಆದರೂ ನಾವು ಗೆದ್ದು ಬಂದಿದ್ದೇವೆ ಎಂದು ಹೇಳಿದರು. ಅದು ಖಂಡಿತವಾಗಿಯೂ ನಿಜ. ಜನಗಳು ಆಯ್ಕೆ ಮಾಡಿರುವುದರಿಂದ. ನಮ್ಮ ಕ್ಷೇತ್ರ ನಮ್ಮ ರಾಜ್ಯ. ಎಲ್ಲ ವರ್ಗದ ಜನರನ್ನು ಹಿತವನ್ನು ಕಾಪಾಡಬೇಕು. ಯಾವುದೋ ಒಂದು ವರ್ಗದ ಜನತ ಹಿತವನ್ನು ಕಾಪಾಡದೇ ಸರ್ವಾಂಗೀಣವಾಗಿ ಕಾಪಾಡುವ ದಿಕ್ಕಿನಲ್ಲಿ ತಾವು ನಿಷ್ಪಕ್ಷಪಾತವಾದ. ನ್ಯಾಯಾದೀಶರ ಸ್ಥಾನದಲ್ಲಿ ಕುಳಿತುಕೊಂಡು ನಮಗೆ ಅವಕಾಶವನ್ನು ನ್ಯಾಯವಾಗಿ ದೊರಕಿಸಿಕೊಡಬೇಕು ಎಂದು ಹೇಳುತ್ತೇನೆ.

ಡಿ.ವಿ.ಜಿ.ಯವರು ಹೇಳಿದ ಹಾಗೆ.

5th June 2008

"ಹುಲ್ಲಾಗು ಬೆಟ್ಟದಡಿ.

ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೆ.

ಮನೆಗೆ ಮಲ್ಲಿಗೆಯಾಗು.

ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ"

ಎನ್ನುವಂತೆ 224 ಕ್ಷೇತ್ರಗಳಿಗೂ ಒಳ್ಳೆಯದು ಮಾಡಿ ಎಂದು ಹೇಳಿ. ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಸಚಿವರು) : ಮಾನ್ಯ ಅಧ್ಯಕ್ಷರೆ, ಅವಿರೋಧವಾಗಿ ತಾವು ಆಯ್ಕೆಯಾಗಿದ್ದಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತೇನೆ. ಸಭಾಧ್ಯಕ್ಷರೆ. ತಮ್ಮೊಂದಿಗೆ ಕೆಲಸ ಮಾಡುವಂಥ ಅವಕಾಶ ನಮ್ಮ ಪಕ್ಷದಲ್ಲಿ ನನಗೆ ದೊರೆತಿತ್ತು. ತಾವು ರಾಜ್ಯದ ಅಧ್ಯಕ್ಷರಾಗಿದ್ದೀರಿ. ಆ ಸಂದರ್ಭದಲ್ಲಿ ನನ್ನನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಂಡು ನನ್ನೊಂದಿಗೆ ಅನೇಕರಿಗೆ ತಾವು ಸ್ಫೂರ್ತಿಯಾಗಿ ಕೆಲಸಗಳನ್ನು ನಡೆಸಿಕೊಟ್ಟಿದ್ದೀರಿ. ತಮಗೆ ಸಾಕಷ್ಟು ಅನುಭವ ಇದೆ. ಪಕ್ಷದ ಅಧ್ಯಕ್ಷರಾದಂಥ ಸಂದರ್ಭದಲ್ಲಿ ಅನೇಕ ಕ್ರೈಸಿಸ್‌ಗಳನ್ನು ತಾವು ಯಶಸ್ವಿಯಾಗಿ ನಿಭಾಯಿಸಿದ್ದೀರಿ. ಈಗ ಈ ಸದನದಲ್ಲಿ ಆಡಳಿತ ಪಕ್ಷದಲ್ಲಿ 116 ಜನ ಸದಸ್ಯರು. ವಿರೋಧ ಪಕ್ಷದಲ್ಲಿ 108 ಜನ ಸದಸ್ಯರಿದ್ದರೂ ಕೂಡ ಎಲ್ಲರಿಗೂ ನ್ಯಾಯ ಸಿಗುವಂಥ ಒಂದು ಕೆಲಸವನ್ನು ತಾವು ಮಾಡುತ್ತೀರಿ ಎನ್ನುವ ವಿಶ್ವಾಸ ನನಗಿದೆ. ಹೊಸ delimitationನ ಆಧಾರದ ಮೇಲೆ ಈ ಸದನ ರಚನೆಯಾಗಿದೆ. ಹಾಗಾಗಿ ನನಗೂ ಕೂಡ ಈ ಸದನದ ಒಳಗೆ ಬರುವುದಕ್ಕೆ ಅವಕಾಶ ಸಿಕ್ಕಿದೆ. delimitationನ ಆಧಾರದ ಮೇಲೆ ರಚನೆಯಾಗಿರುವ ಈ ಸದನವು ಸದಸ್ಯರಾಗಿ ತಾವು. ಹಿರಿಯರಾದಂಥ ಖರ್ಗೆಯವರು ಮತ್ತು ಅನೇಕ ಹಿರಿಯ ಸದಸ್ಯರು ಯಾರಿದ್ದಾರೆ. ಅವರೊಂದಿಗೆ ಕೆಲಸ ಮಾಡಿ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯಕ್ಕೆ delimationನ ಸೂತ್ರಗಳ ಮೇಲೆ ನ್ಯಾಯವನ್ನು ಕೊಡುವಂಥ ಒಂದು ಕೆಲಸವನ್ನು ಮಾಡಿಕೊಟ್ಟಿರತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ವಿಶೇಷವಾಗಿ, ಉತ್ತರ ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಬೆಳೆಸುವುದರಲ್ಲಿ ತಾವು ಗಣನೀಯ ಪಾತ್ರವನ್ನು ವಹಿಸಿದ್ದೀರಿ. ಬರೀ ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಲ್ಲದೆ ಅದು ಬೆಳಗಾಂ ಜಿಲ್ಲೆಯಾಗಿರಬಹುದು. ಬಾಗಲಕೋಟೆ ಜಿಲ್ಲೆಯಾಗಿರಬಹುದು. ಬಿಜಾಪುರ ಜಿಲ್ಲೆಯಾಗಿರಬಹುದು. ಹೈದರಾಬಾದ್ ಕರ್ನಾಟಕದ ಬೀದರ್. ಗುಲ್ಬರ್ಗ.

ರಾಯಚೂರು. ಕೊಪ್ಪಳ. ಬಳ್ಳಾರಿ ಈ ಜಿಲ್ಲೆಗಳೂ ಆಗಿರಬಹುದು. ಆ ಜಿಲ್ಲೆಗಳಲ್ಲಿಯೂ ಕೂಡ ಪಕ್ಷವನ್ನು ಬೆಳೆಸುವುದರಲ್ಲಿ ಮತ್ತು ಅಲ್ಲಿರತಕ್ಕಂಥ ಅನೇಕ ಕಾರ್ಯಕರ್ತರಿಗಷ್ಟೇ ಅಲ್ಲ. ಅಲ್ಲಿರತಕ್ಕಂಥ ನಾಗರೀಕರಿಗೂ ಕೂಡ ತಾವು ಮಾರ್ಗದರ್ಶಕರಾಗಿ. ಅಲ್ಲಿರತಕ್ಕಂಥ ಸಮಸ್ಯೆಗಳನ್ನು ತಮ್ಮ ಹತ್ತಿರ ತೆಗೆದುಕೊಂಡು ಬಂದಂಥ ಸಂದರ್ಭದಲ್ಲಿ ತಾವುಗಳು ಮಂತ್ರಿಗಳಾದಂಥ ಸಮಸ್ಯೆಗಳನ್ನು ತಮ್ಮ ಹತ್ತಿರ ತೆಗೆದುಕೊಂಡು ಬಂದಂಥ ಸಂದರ್ಭದಲ್ಲಿ ಆ ಸಮಸ್ಯೆಗಳಿಗೆ ತಾವು ಸಮಾಧಾನವಾಗಿ ಏನು ಪರಿಹಾರವನ್ನು ಕೊಡುತ್ತಿದ್ದೀರಿ. ನಿಜವಾಗಿಯೂ ನಿಮ್ಮ ಆ ಒಂದು ಸಹನೆ ಮತ್ತು ಸಮಾಧಾನ ಈ ಒಂದು ಸದನವನ್ನು ಯಶಸ್ವಿಯಾಗಿ ನಡೆಸುತ್ತದೆ ಎನ್ನುವ ವಿಶ್ವಾಸ ನನಗಿದೆ. ಯಾವುದೇ ಸಮಸ್ಯೆಗಳು ಬಂದಾಗಲೂ ಕೂಡ. ಯಾವುದೇ ಸದಸ್ಯರು ಬಂದಾಗಲೂ ಕೂಡ. ಯಾವುದೇ ನಾಗರೀಕರು ಬಂದಾಗಲೂ ಕೂಡ. ಸಮಸ್ಯೆಗಳನ್ನು ತೆಗೆದುಕೊಂಡು ಬಂದಾಗ ಅಥವಾ ಹೇಳಿದಾಗ ತಾವು ಸಮಾಧಾನವಾಗಿ ಕೇಳುವಂಥಾದ್ದೇ ನಿಮ್ಮ ದೊಡ್ಡ ಆಸ್ತಿ ಎಂದು ನಾನು ಭಾವಿಸುತ್ತೇನೆ. ಆ ಸಮಾಧಾನದ ಮುಖಾಂತರ ಈ ಸದನವನ್ನು ಯಶಸ್ವಿಯಾಗಿ ನಿಭಾಯಿಸುತ್ತೀರಿ ಎನ್ನುವಂಥ ಭರವಸೆ ನನಗಿದೆ. ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತಿಗೆ ವಿರಾಮವನ್ನು ಇಡುತ್ತೇನೆ.

ಶ್ರೀ ಬಿ.ರಮಾನಾಥ ರೈ (ಬಂಟ್ವಾಳ) : ಸನ್ಮಾನ್ಯ ಅಧ್ಯಕ್ಷರೆ. ತಾವು ಅವಿರೋಧವಾಗಿ ಈ ಸದನದ ಎಲ್ಲರ ಒಂದು ವಿಶ್ವಾಸದ ಮೇಲೆ ಈ ಉನ್ನತ ಪೀಠದಲ್ಲಿ ತಾವು ಕುಳಿತಿದ್ದೀರಿ. ತಮಗೆ ನನ್ನ ವೈಯಕ್ತಿಕವಾದಂಥ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ನಿಮ್ಮ ಸಾಮಾಜಿಕ. ರಾಜಕೀಯ ಹಿನ್ನೆಲೆಯನ್ನು ನಾವು ತಿಳಿದುಕೊಂಡಂತೆ. ಕಿರಿಯ ವಯಸ್ಸಿನಲ್ಲಿ ಸಾರ್ವಜನಿಕ ಬದುಕನ್ನು ಆಯ್ಕೆ ಮಾಡಿಕೊಂಡು. ಕ್ರಿಯಾಶೀಲರಾಗಿ ಕೆಲಸ ಮಾಡಿಈ ಸದನವನ್ನು ಪ್ರವೇಶ ಮಾಡಿದಿರಿ. 1985ನೇ ಇಸವಿಯಲ್ಲಿ ನಾವು ಈ ಸದನವನ್ನು ಪ್ರವೇಶ ಮಾಡಿದೆವು. ತಾವು 1994ನೇ ಇಸವಿಯಲ್ಲಿ ಈ ಸದನಕ್ಕ ಪ್ರವೇಶ ಮಾಡಿದ್ದು. ನಾನು ನಿಮ್ಮನ್ನು ಬಹಳ ಹತ್ತಿರದಿಂದ ಗಮನಿಸಿಕೊಂಡು ಬಂದಿದ್ದೇನೆ. ತಾವು ಈ ಸದನದ ಸದಸ್ಯರಾಗಿ. ವಿರೋಧ ಪಕ್ಷದ ನಾಯಕರಾಗಿ. ನಿಮ್ಮ ಒಂದು ಸೌಜನ್ಯಶೀಲ ನಡವಳಿಕೆಗಳು. ಖಂಡಿತವಾಗಿಯೂ ಜನಾಕರ್ಷಣೆಯ ಒಂದು ವ್ಯಕ್ತಿತ್ವವನ್ನು ತಾವು ರೂಪಿಸಿಕೊಂಡಿರತಕ್ಕಂಥಾದ್ದನ್ನು ನಾನು ಸರಿಯಾಗಿ ತಿಳಿದುಕೊಂಡಿರುವವನಾಗಿದ್ದೇನೆ. ನಿಮ್ಮ ಬಗ್ಗೆ ಸದನದಲ್ಲಿ ನಾನು ಒಂದೆರೆಡು ಮಾತುಗಳನ್ನು ಆಡಬೇಕೆಂದು ಏಕೆ ಬಯಕೆಯಾಯಿತು ಎಂದರೆ. ಒಂದು ಸಾರಿ ಆರೋಗ್ಯ ಸರಿ ಇಲ್ಲದೇ ನಾನು

ಮನೆಯಲ್ಲಿ ಇದ್ದಾಗ. ತಾವು ಮಂಗಳೂರಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ. ನೇರವಾಗಿ ನನ್ನ ಮನೆಗೆ ಬಂದು ನನ್ನ ಆರೋಗ್ಯವನ್ನು ವಿಚಾರಿಸತಕ್ಕ ದೊಡ್ಡಸ್ತಿಕೆಯ ಗುಣಗಳು ನಿಮ್ಮಲ್ಲಿತ್ತು ಎನ್ನುವುದನ್ನು ನಾನು ಗಮನಿಸಿದ್ದೇನೆ. ಅಂದಿನಿಂದ ನಾನು ತಿಳಿದುಕೊಂಡ ರೀತಿಯಲ್ಲಿ ತಮ್ಮ ಒಂದು ಸೌಜನ್ಯಶೀಲ ನಡವಳಿಕೆ. ತಮ್ಮ ಗುಣಧರ್ಮಗಳು ಖಂಡಿತವಾಗಿಯೂ ಒಂದು ಮೆಚ್ಚಿಕೆಯನ್ನು ವ್ಯಕ್ತಪಡಿಸತಕ್ಕಂಥ ರೀತಿಯಲ್ಲಿವೆ. ಈ ಸದನದ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದರಲ್ಲಿ ತಾವು ಖಂಡಿತವಾಗಿಯೂ ಸಮರ್ಥ ರೀತಿಯಲ್ಲಿ ನಿಭಾಯಿಸಿಕೊಂಡು ಹೋಗತಕ್ಕಂಥ ಚಾಕಚಕ್ಯತೆ ಮತ್ತು ಶಕ್ತಿ ತಮ್ಮಲಿದೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆ ಎಂದರೆ ಈ ಸದನ ಒಂದು ರೀತಿಯಲ್ಲಿ ಸಂಖ್ಯಾಬಲದಲ್ಲಿ ಸಮಬಲ ಇರತಕ್ಕಂಥ ಸದನ. ಆಗ ನೀವು ಸಮಚಿತ್ತದಿಂದ. ಸಮತೂಕದ ರೀತಿಯಲ್ಲಿ ಈ ಒಂದು ಸದನವನ್ನು ನಡೆಸಿಕೊಂಡು ಹೋಗತಕ್ಕಂಥ ಶಕ್ತಿ ತಮ್ಮಲ್ಲಿ ಇದೆ. ತಾವು ವಿರೋಧ ಪಕ್ಷದ ಸರ್ವರಿಗೂ ಸಮಾನವಾದ ಅವಕಾಶವನ್ನು ಕಲ್ಪಿಸಿ ಕೊಡುವಲ್ಲಿ ನಮಗೆ ಖಂಡಿತವಾದಂಥ ವಿಶ್ವಾಸ ಇದೆ ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಾಗಿದೆ. ಮತ್ತೊಂದು ಸಾರಿ ನೀವು ಈ ಸದನದಲ್ಲಿ ಒಬ್ಬ ಯಶಸ್ವಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂಥ ಅವಕಾಶ ಸಿಗಲಿ ಮತ್ತು ನನ್ನ ಕ್ಷೇತ್ರ ಬಂಟ್ವಾಳ ಏನಿದೆ. ಅದು ವೈಕುಂಠ ಬಾಳಿಗರವರು ಪ್ರತಿನಿಧಿಸಿದಂಥ ಕ್ಷೇತ್ರ. ನನಗೆ ಬಹಳ ಸಂತೋಷವಿದೆ. ಈ ವೇದಿಕೆಯಲ್ಲಿ ವೈಕುಂಠ ಬಾಳಿಗರವರ ಹೆಸರನ್ನು ಬಹಳ ಜನ ಹೇಳುತ್ತಿದ್ದಾಗ ಈ ಸದನದಲ್ಲಿ ಅವರ ಕಾಲದಲ್ಲಿ ಅವರು ನಡೆದುಕೊಂಡ ರೀತಿ ಬಹುಶಃ ಈ ರಾಜ್ಯದ ಜನತೆ ಇವೊತ್ತು ಕೂಡ ನೆನಪು ಮಾಡಿಕೊಳ್ಳುತ್ತಾರೆ. ಬಂಟ್ವಾಳ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದವನೆಂದು ನನಗೂ ಕೂಡ ಹೆಮ್ಮೆ ಇದೆ. ಮತ್ತೊಂದು ಸಾರಿ ನಿಮಗೆ ಈ ಸದನದಲ್ಲಿ ಯಶಸ್ಸು ಸಿಗಲಿ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ದಕ್ಷಿಣ) : ಮಾನ್ಯ ಅಧ್ಯಕ್ಷರೆ. ಅವಿರೋಧವಾಗಿ ಸಭಾಧ್ಯಕ್ಷರಾಗಿ ಚುನಾಯಿತರಾಗಿರುವಂಥ ತಮಗೆ ತುಂಬು ಹೃದಯದ ಅಭಿನಂದನೆಗಳು ಅನೇಕ ಅಕಾಂಕ್ಷೆ. ನಿರೀಕ್ಷೆಗಳನ್ನಿಟ್ಟುಕೊಂಡು ಜನತೆ ನಮಮ್ಮನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದಾರೆ. ಆ ರೀತಿ ಕಳುಹಿಸಿರುವಂಥ ಸಂದರ್ಭದಲ್ಲಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅನುಷ್ಠಾನಕ್ಕೆ ತರುವಂಥ ನಿಟ್ಟಿನಲ್ಲಿ ಬಹುತೇಕವಾಗಿ ಪ್ರತಿಯೊಬ್ಬ ಸದಸ್ಯ ಕೂಡ ಕಾತುರದಿಂದ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಕಾಯುವಂಥ ಸಂದರ್ಭದಲ್ಲಿ ಏಲ್ಲರಿಗೂ ಅವಕಾಶ ಕೊಡುವಂತ ಒಂದು ಔಚಿತ್ಯ ಮತ್ತು ಅವಕಾಶವನ್ನು ವ್ಯವಸ್ಥೆಯನ್ನು ಮಾಡಬೇಕೆಂಬ ವಿನಂತಿಯನ್ನು

ಮಾಡುತ್ತೇನೆ. ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ರಮೇಶ ಕುಮಾರ್‌ರವರನ್ನು ಸ್ಮರಿಸುತ್ತಿದ್ದೇನೆ. ಅನೇಕ ಹೊಸ ಸದಸ್ಯರನ್ನು ಅವರು ಗುರ್ತಿಸಿ ಅವರಿಗ ಕೊಟ್ಟ ಪ್ರೋತ್ಸಾಹದಿಂದ ನಮ್ಮಂಥ. ಕೊನೆಯ ಬೆಂಚಿನಲ್ಲಿರತಕ್ಕಂಥ ಶಾಸಕರು ಅನುಭವವನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗಿದೆ. ಬೇರೆ ಬೇರೆ ಕಮಿಟಿಯಲ್ಲಿ ಕೂಡ ಅವರು ಕೊಟ್ಟಿರುವ ಪ್ರೋತ್ಸಾಹ. ಇಂಥ ಸಂದರ್ಭದಲ್ಲಿ ನಮ್ಮ ಮಾನ್ಯ ಕೃಷ್ಣರವರಲ್ಲಿರುವಂಥ ಒಂದು ನಿಷ್ಟುರತೆ ಮಾನ್ಯ ವೆಂಕಟಪ್ಪನವರಲ್ಲರುವಂಥ ಒಂದು ವಿಶೇಷವಾಗಿರುವಂಥ ತಾಳ್ಮೆ. ರಮೇಶ್ ಕುಮಾರ್‌ರಲ್ಲಿರುವಂಥ ಬುದ್ದಿವಂತಿಕೆ. ಬಹುಶಃ ಈ ಎಲ್ಲವೂ ತಮ್ಮಲ್ಲಿ ಇದೆಯೆನ್ನುವಂಥ ಒಂದು ಮನೋಭಾವನೆ ನನ್ನದು. ಈ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾಗಿರುವಂಥ ನಮ್ಮ ಸಭಾನಾಯಕರಾದಂಥ ಶ್ರೀ ಬಿ.ಎಸ್.ಯಡಿಯೂರಪ್ಪನವರು. ಅದೇ ರೀತಿಯಲ್ಲಿ ನಮ್ಮ ಪ್ರತಿಪಕ್ಷದ ನಾಯಕರಾಗಿರುವಂಥ ಶ್ರೀ ಮಲ್ಲಿಕಾರ್ಜುನ ಖರ್ಗೆ. ಉಮೇಶ್ ಕತ್ತಿಯವರು ಹಾಗೂ ಅನೇಕ ಪ್ರಮುಖರಿಗೂ ಕೂಡ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾದಂಥ ತಾಳ್ಮೆ. ಅನುಭವ. ಬುದ್ದಿವಂತಿಕೆ. ಕಾನೂನು ಜ್ಞಾನ ಹಾಗೂ ತಮ್ಮ ಪರಿಪಕ್ವವಾಗಿರುವಂಥ ಅನುಭವದ ಆಧಾರದಲ್ಲಿ ಒಬ್ಬ ಯಶಸ್ವಿ ಸಭಾಧ್ಯಕ್ಷರಾಗಿ ತಾವು ಕಾರ್ಯನಿರ್ವಹಿಸುತ್ತೀರಿ ಎನ್ನುವ ಒಂದು ಅಚಲವಾದ ವಿಶ್ವಾಸ ನಮಗಿದೆ. ಇದರ ಜೊತೆಯಲ್ಲಿ ಬೇರೆ ವ್ಯವಸ್ಥೆಗಳಲ್ಲಿ ಇದ್ದ ಹಾಗೆ ಈ ಒಂದು ವ್ಯವಸ್ಥೆಯಲ್ಲಿಯೂ ಕೂಡ ಅನೇಕ ರೀತಿಯ ಕುಂದುಕೊರತೆಗಳಿವೆ. ಅದರಲ್ಲಿ ಹೊಸತನ ತರುವಂಥ ವಿಶೇಷ ಪ್ರಯತ್ನ ತಮ್ಮ ಕಡೆಯಿಂದ ಆಗಬೇಕೆನ್ನುವ ವಿನಂತಿ ಮಾಡುತ್ತಿದ್ದೇನೆ. ಇಲ್ಲಿ ಸಂಶೋಧನಾ ವಿಭಾಗವಿದೆ. ಮಾನ್ಯ ಸದಸ್ಯರುಗಳು ಯಾವುದೇ ಚರ್ಚೆಯಲ್ಲಿ ಭಾಗವಹಿಸಬೇಕೆಂದಿದ್ದರೆ ಸಂಪೂರ್ಣವಾದ ಮಾಹಿತಿಗಳನ್ನು ಪಡೆದುಕೊಂಡು ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಹಿಂದಿನ paper cutting ಗಳನ್ನು ಮಾತ್ರ ಕೊಟ್ಟು ಅಲ್ಲಿ ಆ ತರಹ ಈ ತರಹ ಹೇಳಿಕೆ ಇದೆ ಎಂದು ಹೇಳುವಂಥದ್ದನ್ನು ಹೋಗಲಾಡಿಸಿ ಸ್ವಲ್ಪ ಅಂತಹ ವ್ಯವಸ್ಥೆಗೆ ಅದನ್ನು ಬಲಪಡಿಸುವಂಥ ನಿಟ್ಟಿನಲ್ಲಿ ಮಾಡಿ computerization ಗೊಳಿಸಿರುವಂಥ ಅನೇಕ ಮಾಹಿತಿಗಳನ್ನು. ಬಹುಶಃ ಒಂದು ಸಮಸ್ಯೆಗೆ ಪ್ರಶ್ನೋತ್ತರ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಅದಕ್ಕೆ ಚರ್ಚೆಯಾಗಿತ್ತು. ಯಾವ ರೀತಿ ಅದಕ್ಕೆ ಉತ್ತರ ಬಂದಿತ್ತು. calling attention ಬೇರೆ ಬೇರೆ ಸಂಗತಿಗಳಿಗೆ ಸಂಬಂಧಿಸಿದಂತೆ ಯಾವ ರೀತಿಯ ತೀರ್ಮಾನಕ್ಕೆ ಬಂದಿತ್ತು ಎನ್ನುವ ಮಾಹಿತಿಗಳನ್ನು ಬಹುಶಃ ಸದಸ್ಯರಿಗೆ ಲಭ್ಯವಾದಲ್ಲಿ ಖಂಡಿತವಾಗಿ ಇಂಥ ಸಮಸ್ಯೆಗೆ ಇಂಥ ಪರಿಹಾರ ಆ

ಸಂದರ್ಭದಲ್ಲಿ ಸೂಚಿಸಲ್ಪಟ್ಟಿತ್ತು ಎಂಬ ಮಾಹಿತಿ ಸದಸ್ಯರಿಗೆ ಒದಗಿಸಬೇಕಾಗುತ್ತದೆ. ಅದರ ಜೊತೆಯಲ್ಲಿ ಅದಕ್ಕೆ ಯಾವ ರೀತಿ ಕಾಯಕಲ್ಪ ಕೊಡಬೇಕೆನ್ನುವ ಬಗ್ಗೆ ಬಹುಶಃ ಮುಂದಿನ ದಿವಸಗಳಲ್ಲಿ ವ್ಯಕ್ತಪಡಿಸುತ್ತೇವೆ. ಅದರ ಜೊತೆಗೆ ವಿಶೇಷವಾಗಿ ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರುವುದೇನೇಂದರೆ. Act codification ಬಗ್ಗೆ ಸಾಕಷ್ಟ ಪ್ರಯತ್ನಗಳಾಗಿವೆ. Rules codification ಬಗ್ಗೆ ಇಷ್ಟರ ತನಕ ಯಾವುದೇ ಪ್ರಯತ್ನಗಳಾಗಿವೆ. ಬಹುಶಃ ಈ ಹಿನ್ನಲೆಯಲ್ಲಿ ಬ್ರಿಟಿಷರ ಕಾಲದಿಂದ ಬಂದಿರುವಂಥ ಅದೇ ನಿಯಮಾವಳಿಗಳು ಮುಂದುವರಿಯುತ್ತಿವೆ. ಅದಕ್ಕೂ ಹೊಸತನ ತರಬೇಕು. ತಿದ್ದುಪಡಿ ತರಬೇಕು. ಅದರ ಬಗ್ಗೆ ಕೂಡ ತಾವು ಗಮನಿಸಬೇಕೆನ್ನುವಂಥ ಮಾತನ್ನು ಹೇಳುತ್ತಾ ಬಹುಶಃ ಅನೇಕ ಅನಿಸಿಕೆಗಳನ್ನು ಹೇಳುವುದಿದ್ದರೂ ಕೂಡ ಸಮಯಾವಕಾಶ ಕಡಿಮೆ ಇರುವ ಹಿನ್ನೆಲೆಯಲ್ಲಿ ವಿಶೇಷವಾದ ಯಶಸ್ಸು. ಶ್ರೇಯಸ್ಸು ತಮಗೆ ಭಗವಂಥ ನೀಡಲಿ ಹಾಗೂ ನನ್ನ ಒಂದು ವಿನಂತಿಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಿಕ್ಕೆ ಇಚ್ಚಿಸುತ್ತೇನೆ. ಕಳೆದ ಅಧಿವೇಶನದ ಸಂದರ್ಭದಲ್ಲಿ ಸಭಾಪೀಠಕ್ಕೆ. ಸಭಾಧ್ಯಕ್ಷರ ಸ್ಥಾನಕ್ಕೆ ಕುಂದು ಬರುವಂಥ ನಿಟ್ಟಿನಲ್ಲಿ ಅನೇಕ ನಡವಳಿಕೆಗಳು ನಡೆದಿವೆ. ಬಹುಶಃ ಈ ಒಂದು ಅವಧಿಯಲ್ಲಿ ಅದು ಆಗದಿರಲಿ ಎನ್ನುವ ಹಾರೈಕೆಯನ್ನು ಮಾಡುತ್ತಾ. ತಮ್ಮ ನೇತೃತ್ವದಲ್ಲಿ ಎಲ್ಲಾ ತರಹದ ಸಹಕಾರ ನಮ್ಮ ವಿರೋಧ ಪಕ್ಷದ ಕಡೆಯಿಂದ. ಆಡಳಿತ ಪಕ್ಷದ ಕಡೆಯಿಂದ ತಮಗೆ ಸಿಗುವಂತಾಗಲಿ ಎಂದು ಹಾರೈಸುತ್ತಾ ತಮಗೆ ಮತ್ತೊಮ್ಮೆ ಶುಭವನ್ನು ಕೊರುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ; ಮಾನ್ಯ ಅಧ್ಯಕ್ಷರೆ. ಪ್ರಥಮವಾಗಿ ತಾವು ವಿಧಾನಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಸಲುವಾಗಿ ನಾನು ನನ್ನ ಪರವಾಗಿ ಮತ್ತು ಎಲ್ಲಾ ಶಾಸಕರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಅದೇ ಪ್ರಕಾರವಾಗಿ ಇವತ್ತು ರಾಜ್ಯದಲ್ಲಿ ಹೊಸದಾದ. ಪರ್ಯಾಯವಾದ ಸರ್ಕಾರವನ್ನು ನಮ್ಮ ರಾಜ್ಯದ ಜನತೆ ತಂದುಕೊಟ್ಟಿರುವುದು ತಮಗೆಲ್ಲ ಗೊತ್ತಿರುವ ವಿಚಾರ. 1983 ರಿಂದ 1993-1999ರ ವರೆಗೆ ನಾನೂ ಕೂಡ ವಿಧಾನಸಭೆಯ ಸದಸ್ಯನಾಗಿ. ಮಂತ್ರಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಹಲವಾರು ಜನ ಹಿಂದೆ ಕರ್ನಾಟಕ ವಿಧಾನಸಭೆ ಅಧ್ಯಕ್ಷರಾಗಿ ಕೆಲಸ ಮಾಡಿದಂಥ ನಡವಳಿಕೆಗಳನ್ನು ನೋಡಿದರೆ ಸಣ್ಣ ವಯಸ್ಸಿನಲ್ಲಿ ದೊಡ್ಡ ಮತ್ತು ಅತ್ಯುನ್ನತವಾದ ಹುದ್ದೆಯನ್ನು ತಾವು ಅಲಂಕರಿಸಿರುವುದು ಬಹಳ ಹೆಮ್ಮೆಯ ಮಾತು ಎಂದು ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ. ಈಗಾಗಲೇ ನಮ್ಮ ಬಹಳಷ್ಟು ಶಾಸಕರು ಹೇಳಿದರು. ವೈಕುಂಠ ಬಾಳಿಗರವರನ್ನಂತೂ ನಾವು

ನೋಡಿಲ್ಲ. ಅವರ ಕಾರ್ಯಕಲಾಪಗಳನ್ನು ಕೇವಲ ಪುಸ್ತಕಗಳಲ್ಲಷ್ಟೇ ಓದಿದ್ದೆವು. 1983ರಿಂದ ಚಂದ್ರೇಗೌಡರು ಇದ್ದರು. ಬಹಳಷ್ಟು ಜನ ರಾಜ್ಯದ ಅಧ್ಯಕ್ಷರಾಗಿ ಕೆಲಸ ಮಾಡುವ ಅವಕಾಶ ಏನು ಸಿಕ್ಕಿದವು. ಅವರು ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ಒಂದು ಶಾಸನವನ್ನು ತರಲಿಕ್ಕೆ ಪ್ರಯತ್ನಪಟ್ಟರು. ವಿಧಾನ ಸಭೆ ಎಂದರೇನು? ವಿಧಾನಸಭೆಯ ಕಾರ್ಯಕಲಾಪಗಳು ಸರಿಯಾದ ರೀತಿಯಲ್ಲಿ ನಡೆದುಕೊಂಡು ನಮ್ಮ ರಾಜ್ಯಕ್ಕೆ development ಆಗಬೇಕು. ಪ್ರಗತಿ ಆಗಬೇಕು ಎಂದು ತಿಳಿದುಕೊಂಡು ಬಸವಕಲ್ಯಾಣ ಕ್ಷೇತ್ರ ಜನತೆ ನನ್ನನ್ನು 5ನೇ ಸಾರಿ ಚುನಾವಣೆಯಲ್ಲಿ ಆರಿಸಿ. ಕ್ಷೇತ್ರದ ಪ್ರತಿನಿಧಿಯಾಗಿ ಕೆಲಸ ಮಾಡುವಂಥ ಅವಕಾಶ ನನಗೆ ಕೊಟ್ಟರು. ಈ ಸಂದರ್ಭದಲ್ಲಿ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನಮ್ಮ ರಾಜ್ಯದ ಅತ್ಯಂತ ಜನಪ್ರಿಯ ಮುಖ್ಯಮಂತ್ರಿಗಳಲ್ಲೊಬ್ಬರಾಗಿ ಆಯ್ಕೆಯಾದ ಸಂದರ್ಭದಲ್ಲಿ ಸಂತೋಷವನ್ನು ವ್ಯಕ್ತಪಡಿಸಲಿಕ್ಕೆ ಬಯಸುತ್ತೇನೆ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಸಹ ವಿರೋಧ ಪಕ್ಷದ ನಾಯಕರಾಗಿದ್ದು. ನಾನು ಬಹಳ ವರ್ಷಗಳಿಂದ ಅವರನ್ನು ನೋಡಿದ್ದೇನೆ. ಎಲ್ಲಾ ವಿಧಾನಸಭಾ ಸದಸ್ಯರಿಗಿಂತಲೂ ವಿಶೇಷವಾಗಿ ಅವರು ಪೂರ್ತಿ ಕಾರ್ಯಕಲಾಪಗಳಲ್ಲಿ ಯಾರೇ ಇರಲಿ ಇಲ್ಲದೇ ಹೋಗಲಿ. 5 ಜನ ವಿಧಾನ ಸಭಾ ಸದಸ್ಯರಿದ್ದರೂ ಸಹ ಅವರು ಸಂಪೂರ್ಣವಾದಂಥ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಂಥದ್ದನ್ನು ನೋಡಿದ್ದೇನೆ. ನಮ್ಮೆಲ್ಲ ಹೊಸ ಶಾಸಕರು ವಿಧಾನಸಭೆಗೆ ಆರಿಸಿ ಬಂದಿದ್ದಾರೆ. ಅವರಿಗೆ ಹೆಚ್ಚಿನ ಅವಕಾಶ ಸಿಗಬೇಕು. ಕರ್ನಾಟಕದ 13ನೇ ವಿಧಾನಸಭೆಯಲ್ಲಿ ಒಳ್ಳೆಯ ಕ್ರಾಂತಿಕಾರಿಯಾದ ಬದಲಾವಣೆಗಳು ಬರಬೇಕು. ಹೊಸ ಹೊಸ ಕಾರ್ಯಕ್ರಮ ರೂಪಿಸಲಿಕ್ಕೆ ವಿರೋಧ ಪಕ್ಷದವರೂ ಸಹಿತ ನಮಗೆ ಸಹಕರಿಸುವುದರ ಜೊತೆಗೆ ಈ ಸಂದರ್ಭದಲ್ಲಿ ನಾನು ವಿಶೇಷವಾದ ಅಭಿನಂದನೆ ಸಲ್ಲಿಸಲಿಕ್ಕೆ ಏಕೆ ಬಯಸುತ್ತಿದ್ದೇನೆಂದರೆ. healthy ವಾತಾವರಣ ಇರಬೇಕು. ಪುನಃ election ಆಗಬಾರದು. ಜಗದೀಶ್ ಶೆಟ್ಟರ್‌ರವರು ಒಳ್ಳೆಯ ಅಧ್ಯಕ್ಷರು. ವಕೀಲ ವೃತ್ತಿಯಿಂದ. ವಿರೋಧ ಪಕ್ಷದ ನಾಯಕರಾಗಿ. ಮಂತ್ರಿಯಾಗಿ ಆಡಳಿತ ಅನುಭವವಿರುವಂಥವರಾಗಿ ತಾವು ಇರುವ ಸಲುವಾಗಿ. ಅವರೆಲ್ಲರೂ ಕೂಡ ನಮಗೆ ಸಹಕಾರ ಕೊಟ್ಟ ಸಲುವಾಗಿ ಜೆಡಿಎಸ್ ಮತ್ತು ವಿರೋಧ ಪಕ್ಷದ ನಾಯಕರಿಗೆ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ. ತಮ್ಮ ಈ period ಏನಿದೆ. ವಿಶೇಷವಾಗಿ ನನ್ನ ಅನುಭವದ ಪ್ರಕಾರ ಹೇಳಬೇಕಾದರೆ, ಎಸ್.ಎಂ.ಕೃಷ್ಣರವರು ಬಹಳ ಚೆನ್ನಾಗಿ ಕಾರ್ಯವೈಖರಿ ಮಾಡುತ್ತಿದ್ದರು. ಚಂದ್ರೇಗೌಡರು ಕನ್ನಡದಲ್ಲಿ ಸೊಗಸಾಗಿ ಆಡಳಿತವನ್ನು ನಡೆಸುವಂಥ. ಕಂಟ್ರೋಲ್ ಮಾಡುವಂಥ ಕೆಪಾಸಿಟಿ

ಅವರಿಗೆ ಇತ್ತು. ನಮ್ಮ ಭಾಗದವರಾಗಿರುವಂಥ ಸನ್ಮಾನ್ಯ ಶ್ರೀ ಬಿ.ಜಿ. ಬಣಕಾರ ಸಾಹೇಬರ ಬಗ್ಗೆ ಕೂಡ ಇಲ್ಲಿ ನಾನು ಬಹಳ ಹೇಳುತ್ತಿದ್ದೆ. ಅವರು ದಿಟ್ಟ ಮನಸ್ಸಿನಿಂದ ಮಾತನಾಡುವ ಶೈಲಿ ನೋಡಿದರೆ ಅವರೆಲ್ಲರಿಗಿಂತಲೂ ಒಳ್ಳೆಯ ಕಾರ್ಯವನ್ನು ಮಾಡಿಕೊಂಡು ಈ ಕರ್ನಾಟಕ ರಾಜ್ಯದಲ್ಲಿ ಈ ವಿಧಾನಸಭೆಯ ಹೆಸರನ್ನು ತಾವು ತರುತ್ತೀರಿ ಎನ್ನುವ ಆಶಯವನ್ನು ವ್ಯಕ್ತಪಡಿಸಿಕೊಂಡು ಮೊದಲನೆಯದಾಗಿ ತಾವು ನಿಷ್ಠಾವಂತರು. ಪ್ರಾಮಾಣಿಕವಾಗಿ ದುಡಿದಂಥವರು. ನಿಮಗೆ ನನ್ನ ಪರವಾಗಿ ಅಭಿನಂದನೆಗಳನ್ನು ವ್ಯಕ್ತಪಡಿಸಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗಾಗಲೇ ಸಾಕಷ್ಟು ಸದಸ್ಯರು ಅಭಿನಂದನೆಯ ವಿಷಯದ ಮೇಲೆ ಮಾತನಾಡಿದ್ದಾರೆ. ನಾನು ನಿಮ್ಮಲ್ಲರ ವಿಚಾರಗಳಿಗೆ ಸ್ಪಂದನೆ ಮಾಡುವುದಕ್ಕೆ ಮುಂಚೆ ಎರಡು ಪ್ರಕಟಣೆಗಳನ್ನ ಪ್ರಕಟಣೆ ಮಾಡುತ್ತಿದ್ದೇನೆ.

3. ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ದಿನಾಂಕ: 2–06–2008ರಂದು ಪತ್ರವನ್ನು ನೀಡಿದ್ದು ದಿ:26–05–2008 ರಂದು ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿ ಅಂಗೀಕರಿಸಲಾದ ನಿರ್ಣಯದ ಪ್ರತಿಯನ್ನು ನೀಡಿರುತ್ತಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ 80 ಸದಸ್ಯರನ್ನು ಹೊಂದಿದ್ದು ಅತಿ ದೊಡ್ಡ ಪಕ್ಷವಾಗಿರುವ ಕಾರಣ ಹಾಗೂ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(2) ರಲ್ಲಿ ಹೇಳಿರುವ ರೀತಿ ಎಲ್ಲಾ ಅಂಶಗಳನ್ನು ಪರಿಗಣಿಸಿದ್ದು ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ವಿರೋಧ ಪಕ್ಷದ ನಾಯಕರೆಂದು ತಕ್ಷಣದಿಂದ ಜಾರಿಗೆ ಬರುವಂತೆ ಮನ್ನಣೆ ನೀಡಲಾಗಿದೆ.

1) ವಿಷಯ :– ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ವಿರೋಧ ಪಕ್ಷದ ನಾಯಕರ ಸ್ಥಾನಮಾನ ನೀಡಿರುವ ಕುರಿತು.

2) ವಿಷಯ :– ಶ್ರೀ ಡಿ.ಎನ್. ಜೀವರಾಜ್‌ರವರನ್ನು ವಿಧಾನ ಸಭೆಯಲ್ಲಿ ಸರ್ಕಾರ ಮುಖ್ಯ ಸಚೇತರನ್ನಾಗಿ ನೇಮಕ ಮಾಡಿರುವ ಬಗ್ಗೆ.

ಅಧ್ಯಕ್ಷರು : ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಡಿ.ಎನ್.